ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 21 ಬುಧವಾರ 2022


ಸಂಪುಟ: 43 | ಸಂಚಿಕೆ: 244 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ನರೇಗಾ ಯೋಜನೆಯಲ್ಲಿ ಗರ್ಭಿಣಿ, ಬಾಣಂತಿಯರು, ವಿಶೇಷಚೇತನರು, ಹಿರಿಯ ನಾಗರಿಕರಿಗೆ ಕೆಲಸದ ಪ್ರಮಾಣದಲ್ಲಿ ಶೇ.50 ರಿಯಾಯಿತಿ



ಬೆಂಗಳೂರು: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ (ಎಂಜಿಎನ್‌ಆರ್‌ಇಜಿಎ) ಅಡಿಯಲ್ಲಿ ಗರ್ಭಿಣಿಯರು, ಬಾಣಂತಿಯರಿಗೆ ಕೆಲಸದ ಪ್ರಮಾಣದಲ್ಲಿ ಶೇ. 50 ರಿಯಾಯ್ತಿ ಕಲ್ಪಿಸುವುದು ಹಾಗೂ ಮಹಿಳೆಯರ ಪಾಲ್ಗೊಳ್ಳುವಿಕೆ ಪ್ರಮಾಣವನ್ನು ಹೆಚ್ಚಿಸುವ ನಿಟ್ಟಿನಲ್ಲಿ ರಾಜ್ಯದ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಮಹತ್ವದ ಆದೇಶವನ್ನು ಹೊರಡಿಸಿದೆ ಯೋಜನೆಯಡಿ ವಿಶೇಷಚೇತನರು ಮತ್ತು ಹಿರಿಯ ನಾಗರಿಕರಿಗೆ ದಿನಕ್ಕೆ ನಿಗದಿತ ಕೂಲಿ ಪಡೆಯಲು ನಿರ್ವಹಿಸಬೇಕಾದ ಕೆಲಸದ ಪ್ರಮಾಣದಲ್ಲಿ ಶೇ.50ರಷ್ಟು ರಿಯಾಯಿತಿಯನ್ನು ರಾಜ್ಯ ಸರ್ಕಾರ ನೀಡಿದೆ ಅಷ್ಟೇ ಅಲ್ಲ, ಸದ್ಯ ಮಹಿಳೆಯರ ಭಾಗವಹಿಸುವಿಕೆ ಶೇ.51ರಷ್ಟಿದ್ದು, ಇದನ್ನು ಶೇ.60ಕ್ಕೆ ಹೆಚ್ಚಿಸುವ ಗುರಿ ಇದೆ. ಶೇ.60ಕ್ಕಿಂತ ಹೆಚ್ಚಿನ ಪ್ರಮಾಣದ ಮಹಿಳೆಯರನ್ನು ಹೊಂದಿರುವ ಕಾಮಗಾರಿಗಳಲ್ಲಿ ಮಹಿಳೆಯರು ನಿರ್ವಹಿಸಬೇಕಾದ ಕೆಲಸದ ಪ್ರಮಾಣದಲ್ಲಿ ಶೇ.10 ರಷ್ಟು ರಿಯಾಯಿತಿ ನೀಡಲಾಗಿದೆ.

ನರೇಗಾ ಕಾಮಗಾರಿಗಳಲ್ಲಿ ಗರ್ಭಿಣಿಯರು ಮತ್ತು ಬಾಣಂತಿಯರು ಸಾಕಷ್ಟು ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದು, ಅವರ ದೈಹಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕೆಲಸದ ಪ್ರಮಾಣದಲ್ಲಿ ರಿಯಾಯಿತಿ ನೀಡುವುದು ಅವಶ್ಯಕವಾಗಿದೆ. ಈ ಹಿನ್ನೆಲೆಯಲ್ಲಿ ಕೆಲಸ ನಿರ್ವಹಿಸುವ 6 ತಿಂಗಳು ತುಂಬಿದ ಗರ್ಭಿಣಿಯರಿಗೆ ಮಗುವಿನ ಜನನದವರೆಗೆ ಹಾಗೂ ಬಾಣಂತಿಯರಿಗೆ ಮಗುವಿನ ಜನನ ದಿನಾಂಕದಿಂದ 6 ತಿಂಗಳವರೆಗೆ ನಿಗದಿತ ಕೂಲಿ ಪಡೆಯಲು ನಿಗದಿಪಡಿಸಲಾದ ಕೆಲಸದ ಪ್ರಮಾಣದಲ್ಲಿ ಶೇ.50 ರಷ್ಟು ರಿಯಾಯಿತಿ ಸಿಕ್ಕಿದೆ. ಈ ರಿಯಾಯಿತಿ ನೀಡಲು ಆರೋಗ್ಯ ಇಲಾಖೆ ನೀಡುವ ತಾಯಿ ಕಾರ್ಡ್ ದಾಖಲೆಯಾಗಿ ಪರಿಗಣಿಸಲು ತಿಳಿಸಲಾಗಿದೆ.

▶ 8ನೇ ಪುಟಕ್ಕೆ

ಯಶಸ್ವಿ ಎಸ್.ಸೋಮಶೇಖರ್ ಮುಡಾ ನೂತನ ಅಧ್ಯಕ್ಷ

ಇಂದು ಅಧಿಕಾರ ಸ್ವೀಕಾರ



ಮೈಸೂರು, ಡಿ.20(ಎಸ್‌ಬಿಡಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ನೂತನ ಅಧ್ಯಕ್ಷರಾಗಿ ಬಿಜೆಪಿ ಮುಖಂಡರೂ ಆದ ಹೆಸರಾಂತ ಉದ್ಯಮಿ ಯಶಸ್ವಿ ಎಸ್.ಸೋಮಶೇಖರ್ ಅವರನ್ನು ನೇಮಕ ಮಾಡಿ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ. ಹಲವು ವರ್ಷಗಳಿಂದ ರಾಜಕೀಯ ಕ್ಷೇತ್ರದಲ್ಲಿ ಸಕ್ರಿಯರಾಗಿರುವ ಇವರು, ಬಿಜೆಪಿ ಪ್ರಧಾನ ಕಾರ್ಯದರ್ಶಿ ಸೇರಿದಂತೆ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ. ಕೊನೆಗೂ ಭಾರೀ ಪೈಪೋಟಿ ನಡೆಯುತ್ತಿದ್ದ ಮುಡಾ ಅಧ್ಯಕ್ಷ ಸ್ಥಾನಕ್ಕೇರುವಲ್ಲಿ ಯಶಸ್ವಿಯಾಗಿದ್ದು, ನಾಳೆ (ಡಿ.21) ಬೆಳಗ್ಗೆ 11ಕ್ಕೆ ಅಧಿಕಾರ ಸ್ವೀಕರಿಸಲಿದ್ದಾರೆ. ಈ ಬಗ್ಗೆ 'ಮೈಸೂರು ಮಿತ್ರ'ನಲ್ಲಿ ಸಂತಸ ಹಂಚಿಕೊಂಡ ಅವರು, ಹಲವು ವರ್ಷಗಳಿಂದ ಬಿಜೆಪಿಯ ವಿವಿಧ ಜವಾಬ್ದಾರಿ ನಿರ್ವಹಿಸುವ ಮೂಲಕ ಪಕ್ಷದ ಸಂಘಟನೆಗೆ ಶ್ರಮಿಸಿದ್ದೇನೆ. ಚಾಮರಾಜ ಕ್ಷೇತ್ರದ ಶಾಸಕರಾದ ಎಲ್.ನಾಗೇಂದ್ರರವರು ಹಾಗೂ ನಾನು 1983ರಲ್ಲಿ ಬಿಜೆಪಿ ಸೇರಿದೆವು. ಅಂದಿನಿಂದ ಈವರೆಗೂ ಪಕ್ಷದ ಕೆಲಸದಲ್ಲಿ ಸಕ್ರಿಯರಾಗಿದ್ದೇವೆ ಎಂದರು. ಮಾಜಿ ಶಾಸಕರಾದ ತೋಂಟದಾರ್ಯ ಹಾಗೂ ಮಾರುತಿರಾವ್ ಪವಾರ್ ಅವರು ನಗರ ಘಟಕ ಅಧ್ಯಕ್ಷರಾಗಿದ್ದ

▶ 8ನೇ ಪುಟಕ್ಕೆ

ಈಶ್ವರಪ್ಪ, ರಮೇಶ್ ಜಾರಕಿಹೊಳಿ ಸದ್ಯದಲ್ಲೇ ಸಂಪುಟ ಸೇರ್ಪಡೆ

ಸ್ವತಃ ಮುಖ್ಯಮಂತ್ರಿಗಳಿಂದಲೇ ಇಬ್ಬರಿಗೂ ಭರವಸೆ

● ಈ ಇಬ್ಬರು ನಾಯಕರ 'ಎಚ್ಚರಿಕೆ'ಗೆ ಎಚ್ಚೆತ್ತ ಬಿಜೆಪಿ ಹೈಕಮಾಂಡ್! ● ಅಧಿವೇಶನದಲ್ಲಿ ಪಾಲ್ಗೊಳ್ಳುವ ಸಂಬಂಧ ಇನ್ನಷ್ಟೇ ತೀರ್ಮಾನ: ಈಶ್ವರಪ್ಪ




ಬೆಂಗಳೂರು, ಡಿ.20 (ಕೆಎಂಶಿ)– ಭ್ರಷ್ಟಾಚಾರ ಹಾಗೂ ಲೈಂಗಿಕ ಪ್ರಕರಣದ ಆರೋಪಕ್ಕೆ ಸಂಬಂಧಿಸಿದಂತೆ ಸಚಿವ ಸ್ಥಾನ ತೊರೆದಿದ್ದ ಕೆ.ಎಸ್.ಈಶ್ವರಪ್ಪ ಹಾಗೂ ರಮೇಶ್ ಜಾರಕಿಹೊಳಿ ಅವರನ್ನು ಮತ್ತೆ ಮಂತ್ರಿಮಂಡಲಕ್ಕೆ ಸೇರ್ಪಡೆ ಮಾಡಿಕೊಳ್ಳುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆಯಿತ್ತಿದ್ದಾರೆ.

ಆರೋಪದಿಂದ ಮುಕ್ತರಾದ ನಮ್ಮನ್ನು ಮಂತ್ರಿಮಂಡಲಕ್ಕೆ ಸೇರ್ಪಡೆ ಮಾಡಿಕೊಳ್ಳಿ. ಇಲ್ಲದಿದ್ದರೆ, ನಮ್ಮ ಮುಂದಿನ ಹೋರಾಟದ ನಡೆ ನೋಡಿ ಎಂದು ಉಭಯ ನಾಯಕರು ಪಕ್ಷದ ವರಿಷ್ಠರಿಗೆ

▶ 8ನೇ ಪುಟಕ್ಕೆ

ಮೈಸೂರು ಮಿತ್ರ



ಕರ್ನಾಟಕ ರಾಜ್ಯ ಸಿದ್ದರಾಮಯ್ಯನವರ ಅಭಿಮಾನಿಗಳ ಬಳಗದ ವತಿಯಿಂದ ಚಾಮುಂಡೇಶ್ವರಿ ಕ್ಷೇತ್ರದ ಮುಖಂಡರೂ ಆದ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷರಾದ ಕೆ.ಮರೀಗೌಡರಿಗೆ ಹುಟ್ಟುಹಬ್ಬದ ಅಂಗವಾಗಿ ಅಭಿನಂದಿಸಿ, ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಬಳಗದ ರಾಜ್ಯಾಧ್ಯಕ್ಷ ಹಿನಕಲ್ ಪ್ರಕಾಶ್, ನಗರ ಅಧ್ಯಕ್ಷ ಹೆಬ್ಬಾಳ್ ವಿಜಯ್, ಜಿಲ್ಲಾಧ್ಯಕ್ಷ ಬೋಗಾದಿ ಮಾದೇವಸ್ವಾಮಿ, ಉದ್ಬೂರು ಗ್ರಾಮ ಪಂಚಾಯತ್ ಅಧ್ಯಕ್ಷ ಕೃಷ್ಣ ಇತರರು ಉಪಸ್ಥಿತರಿದ್ದರು.

ಡಿ.30ರಿಂದ ಕನ್ನಡ ಪ್ರವೇಶ, ಕಾವ, ಜಾಣ, ರತ್ನ ಪರೀಕ್ಷೆ

ಮೈಸೂರು,ಡಿ.20–ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 2022–23ನೇ ಸಾಲಿನ ಕನ್ನಡ ಪ್ರವೇಶ, ಕಾವ, ಜಾಣ, ರತ್ನ ಪರೀಕ್ಷೆಗಳನ್ನು ಡಿ.30, 31 ಮತ್ತು 2023ನೇ ಜ.1ರಂದು ಒಟ್ಟು 3 ದಿನಗಳ ಕಾಲ ರಾಜ್ಯದ 18 ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ. ಈ ಸಂಬಂಧ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರ ಹಾಗೂ ಪರೀಕ್ಷಾ ವೇಳಾಪಟ್ಟಿಯನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ಡಿಸೆಂಬರ್ 20ರ ನಂತರ ವೇಳಾಪಟ್ಟಿ ತಲುಪದಿರುವ ಬಗ್ಗೆ ವಿದ್ಯಾರ್ಥಿಗಳು ಗೌರವ ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ–18 ಇವರಲ್ಲಿ ವಿಚಾರಿಸಬಹುದು. ಮಾಹಿತಿಗೆ www.kasapa.in ಹಾಗೂ ದೂಸಂ: 080–26623584, 26612991, ಮೊ.ಸಂ: 8660777643,9739666834 ಅನ್ನು ಸಂಪರ್ಕಿಸಬಹುದು.



ಮೈಸೂರಿನ ಸಿಎಫ್‌ಟಿಆರ್‌ಐನ ಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ಮುಖ್ಯ ಅತಿಥಿಯಾಗಿ ಪಾಲ್ಗೊಂಡು ದೀಪ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಅರಣ್ಯ ಪ್ರದೇಶದಲ್ಲಿ ವ್ಯಾಪಕ ಅಕ್ರಮ ಗಣಿಗಾರಿಕೆ


ಆಮ್ ಆದ್ಮಿ ಪಾರ್ಟಿ ಎಂ.ಪಿ.ತಮ್ಮಯ್ಯ ಆರೋಪ



ಮೈಸೂರು,ಡಿ.20(ಪಿಎಂ)– ಇತ್ತೀಚಿನ ದಿನಗಳಲ್ಲಿ ವನ್ಯಜೀವಿಗಳು ನಾಡಿನತ್ತ ಮುಖ ಮಾಡಿ, ದಾಳಿ ನಡೆಸುತ್ತಿರುವುದು ಹೆಚ್ಚಾಗುತ್ತಿದ್ದು, ಇದಕ್ಕೆ ಪ್ರಮುಖ ಕಾರಣ ಅರಣ್ಯ ಪ್ರದೇಶಗಳಲ್ಲಿ ಅಕ್ರಮ ಗಣಿಗಾರಿಕೆಗೆ ಅವಕಾಶ ನೀಡಿರುವುದಾಗಿ ಎಂದು ಆಮ್ ಆದ್ಮಿ ಪಾರ್ಟಿ ಜಿಲ್ಲಾ ಕಾನೂನು ಘಟಕದ ಅಧ್ಯಕ್ಷ ಎಂ.ಪಿ.ತಮ್ಮಯ್ಯ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಕ್ರಮ ಗಣಿಗಾರಿಕೆಯ ಸ್ಫೋಟದಿಂದ ವನ್ಯಜೀವಿಗಳು ವಿಚಲಿತಗೊಂಡು ನಾಡಿನತ್ತ ಲಗ್ಗೆ ಇಡುತ್ತಿವೆ. ಬಹುತೇಕ ಜನಪ್ರತಿನಿಧಿಗಳು ಹಾಗೂ ರಾಜಕೀಯ ಮುಖಂಡರು ಈ ಅಕ್ರಮ ಗಣಿಗಾರಿಕೆಯಲ್ಲಿ ಶಾಮೀಲಾಗಿದ್ದು, ಇದೇ ಕಾರಣಕ್ಕೆ ಈ ಅಕ್ರಮಕ್ಕೆ ತಡೆಯೊಡ್ಡಲು ಸಾಧ್ಯವಾಗುತ್ತಿಲ್ಲ. ರಾಜ್ಯ ಬಿಜೆಪಿ ಸರ್ಕಾರಕ್ಕೆ ನಿಜಕ್ಕೂ ನೈಜ ದೇಶಭಕ್ತಿ ಇದ್ದರೆ, ಕೂಡಲೇ ಅರಣ್ಯ ಪ್ರದೇಶದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಗೆ ತಡೆಯೊಡ್ಡಬೇಕು ಎಂದು ಒತ್ತಾಯಿಸಿದರು. ಸುಪ್ರಿಂಕೋರ್ಟ್ ಮಾರ್ಗಸೂಚಿ ಪ್ರಕಾರ ವನ್ಯಜೀವಿ ಅಭಯಾರಣ್ಯಗಳ ಸುತ್ತಲು 10 ಕಿ.ಮೀ. ಪ್ರದೇಶವನ್ನು ಪರಿಸರ ಸೂಕ್ಷ್ಮವಲಯ ಎಂದು ಪರಿಗಣಿಸಬೇಕು. ಆದರೆ ರಾಜ್ಯದಲ್ಲಿ ಕಾಡಿನೊಳಗೇ ಗಣಿಗಾರಿಕೆಗೆ ಅವಕಾಶ ನೀಡಲಾಗಿದೆ ಎಂದು ದೂರಿದರು. ಪಕ್ಷದ ಪದಾಧಿಕಾರಿಗಳಾದ ಎ.ಎ.ಮಾಚಯ್ಯ, ಮಂಜು, ಕಿರಣ್, ಅರ್ಚನಾ ಗೋಷ್ಠಿಯಲ್ಲಿದ್ದರು.

ಅಗಲಿದ ಪತ್ರಕರ್ತರಿಗೆ ಪತ್ರಕರ್ತರ ಸಂಘದಿಂದ ಶ್ರದ್ಧಾಂಜಲಿ




ಮೈಸೂರು,ಡಿ.20(ಪಿಎಂ)– ಇತ್ತೀಚಿಗೆ ನಿಧನ ಹೊಂದಿದ ಹಿರಿಯ ಪತ್ರಕರ್ತ ರಹಮತ್ ಉಲ್ಲಾ ಖಾನ್ ಹಾಗೂ ಪಿರಿಯಾಪಟ್ಟಣ ತಾಲೂಕು ಕಂಪಲಾಪುರದ ಕೆ.ಎಸ್.ಪ್ರಕಾಶ್ ಅವರಿಗೆ ಮಂಗಳವಾರ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಸಂಘದ ಪತ್ರಕರ್ತರ ಭವನದಲ್ಲಿ ಹಮ್ಮಿಕೊಂಡಿದ್ದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಈ ಇಬ್ಬರು ಪತ್ರಕರ್ತರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಲಾಯಿತು. ಇದೇ ವೇಳೆ ಮಾತನಾಡಿದ ಹಿರಿಯ ಪತ್ರಕರ್ತ ಶಿವಕುಮಾರ್, ಈ ಇಬ್ಬರು ಪತ್ರಕರ್ತರ ನಿಧನದಿಂದ ಸಂಘಕ್ಕೆ ತುಂಬಲಾರದ ನಷ್ಟ ಉಂಟಾಗಿದೆ ಎಂದು ಸಂತಾಪ ಸೂಚಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಮಾತನಾಡಿ, ಈ ಇಬ್ಬರ ಕುಟುಂಬಕ್ಕೆ ಸಂಘದಿಂದ ನೀಡಬೇಕಾದ ಎಲ್ಲಾ ನೆರವು ಕಲ್ಪಿಸಿಕೊಡಲಾಗುವುದು. ಜೊತೆಗೆ ಸರ್ಕಾರದಿಂದ ಗರಿಷ್ಠ ಮಟ್ಟದ ಪರಿಹಾರ ದೊರಕಿಸಿಕೊಡಲು ಸಂಘದಿಂದ ಕ್ರಮ ವಹಿಸಲಾಗುವುದು ಎಂದು ಹೇಳಿದರು. ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್ ಮೈಸೂರು ಅಧ್ಯಕ್ಷ ಮೊಹಮ್ಮದ್ ಜಕಾವುಲ್ಲಾ ಸಿದ್ದಿಕಿ, ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಪತ್ರಕರ್ತ ಬಿ.ರಾಘವೇಂದ್ರ ಮತ್ತಿತರರು ಹಾಜರಿದ್ದರು.

ನಾಳೆಯಿಂದ 25ರವರೆಗೆ ಅವರೇಕಾಳು ಆಹಾರ ಮೇಳ

ಮೈಸೂರು,ಡಿ.20(ಪಿಎಂ)– ಸಹಜ ಸಮೃದ್ಧ ಕೃಷಿ ಸಂಸ್ಥೆ ವತಿಯಿಂದ ಡಿ.22ರಿಂದ 25ರವರೆಗೆ ಅವರೇಕಾಳು ತಿಂಡಿ–ತಿನಿಸು, ಆಹಾರ ಮೇಳ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಯೋಜನಾಧಿಕಾರಿ ಕೋಮಲ್ ಕುಮಾರ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಅವರೇಕಾಳು ಆಹಾರ ಮೇಳ ನಡೆಯಲಿದೆ. ಮೇಳದಲ್ಲಿ ಅವರೇಕಾಳಿಂದ ಮಾಡಬಹುದಾದಂತಹ ಆಹಾರ ಪದಾರ್ಥಗಳ ಪ್ರದರ್ಶನ ಮತ್ತು ಮಾರಾಟ ಇರಲಿದೆ. ಅವರೇಕಾಳು ಆಹಾರ ಸಂಪೂರ್ಣ ಸಸ್ಯಾಹಾರವಾಗಿರಲಿದೆ. ಜೊತೆಗೆ ಅವರೇಕಾಳು ಮಾರಾಟವೂ ನಡೆಯಲಿದೆ ಎಂದರು.

ಬೆಳಗ್ಗೆ 10ರಿಂದ ರಾತ್ರಿ 10ರವರೆಗೆ ಸಾರ್ವಜನಿಕರು ಭೇಟಿ ನೀಡಬಹುದು. ಮೇಳಕ್ಕೆ ಯಾವುದೇ ಪ್ರವೇಶ ಶುಲ್ಕವಿಲ್ಲ. 20 ಮಳಿಗೆಗಳಲ್ಲಿ 30ಕ್ಕೂ ಹೆಚ್ಚು ವಿಧದ ಅವರೇಕಾಳಿನ ತಿಂಡಿ–ತಿನಿಸು ಇಲ್ಲಿ ಲಭ್ಯವಾಗಲಿವೆ. ತಿಂಡಿ–ತಿನಿಸುಗಳಿಗೆ ವಿವಿಧ ತಳಿಗಳ ಅವರೇಕಾಳು ಬಳಸಲಾಗುವುದು. ಜೊತೆಗೆ ನಾನಾ ತಳಿಗಳ ಅವರೇಕಾಳು ಖರೀದಿಗೂ ಅವಕಾಶವಿದೆ ಎಂದು ತಿಳಿಸಿದರು. ತರಕಾರಿ ವ್ಯಾಪಾರಿ ಮಹೇಂದ್ರ ನಾಯಕ, ತರಕಾರಿ ಬೆಳೆಗಾರ ಪ್ರತಾಪ್ ಗೋಷ್ಠಿಯಲ್ಲಿದ್ದರು.

ಯಾವುದೇ ಪದಾರ್ಥ ಕೊಳ್ಳುವ ಮುನ್ನ ತೂಕದ ಕಡೆ ನಿಮ್ಮ ಗಮನವಿರಲಿ...!

ಗ್ರಾಹಕರಿಗೆ ತೂಕ, ಅಳತೆ ಕುರಿತ ಜಾಗೃತಿ ಅಭಿಯಾನ

ಮೈಸೂರು, ಡಿ.20(ಆರ್‌ಕೆಬಿ)– ವಿಶ್ವ ಗ್ರಾಹಕರ ದಿನಾಚರಣೆ ಅಂಗವಾಗಿ ಮೈಸೂರಿನಲ್ಲಿ ಮಂಗಳವಾರ ಗ್ರಾಹಕರಲ್ಲಿ ತೂಕ ಮತ್ತು ಅಳತೆ ಕುರಿತು ಗ್ರಾಹಕ ಜಾಗೃತಿ ಅಭಿಯಾನ ನಡೆಸಲಾಯಿತು.

ತೂಕ ಮತ್ತು ಅಳತೆ ಇಲಾಖೆಯ ಸಹಯೋಗದಲ್ಲಿ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ವತಿಯಿಂದ ದೇವರಾಜ ಮಾರುಕಟ್ಟೆ ಮುಂಭಾಗ 'ಗ್ರಾಹಕರೇ ಪದಾರ್ಥಗಳನ್ನು ಕೊಳ್ಳುವಾಗ ಮೋಸ ಹೋಗದಿರಿ', 'ಕೊಳ್ಳುವ ಪದಾರ್ಥಗಳಲ್ಲಿ ತೂಕ ಮತ್ತು ಅಳತೆ ಪರೀಕ್ಷಿಸಿಕೊಳ್ಳಿ', 'ತಕ್ಕಡಿಗೆ ಸರ್ಕಾರಿ ಮುದ್ರೆ ಆಗಿರುವ ಬಗ್ಗೆ ಖಾತರಿಪಡಿಸಿಕೊಳ್ಳಿ', 'ತಕ್ಕಡಿ ಸೊನ್ನೆ (0) ಬಂದ ನಂತರ ತೂಕ ಮಾಡಿಸಿ', 'ಕೊಳ್ಳುವ ಪದಾರ್ಥಗಳ ಪ್ಯಾಕೆಟ್ ಮೇಲೆ ಎಫ್‌ಎಸ್‌ಎಸ್‌ಎಐ (FSSAI) ಲೈಸೆನ್ಸ್ ಇದೆಯೇ ಎಂದು ಪರಿಶೀಲಿಸಿ', 'ಎಂಆರ್‌ಪಿ ದರಕ್ಕಿಂತ ಹೆಚ್ಚಿನ ದರಕ್ಕೆ ಮಾರಾಟ ಮಾಡುವಂತಿಲ್ಲ', 'ತೂಕದಲ್ಲಿ ಮೋಸ ಮಾಡಿದರೆ ಕಾನೂನು ಪ್ರಕಾರ ಅಪರಾಧ' ಸೇರಿದಂತೆ ಇನ್ನಿತರ ಗ್ರಾಹಕರ ಜಾಗೃತಿ ಮೂಡಿಸುವ ಭಿತ್ತಿಪತ್ರಗಳನ್ನು ಹಿಡಿದುಕೊಂಡು ಗ್ರಾಹಕರಿಗೆ ಕರಪತ್ರ ನೀಡಿ ಜಾಗೃತಿ ಮೂಡಿಸಲಾಯಿತು.



ಅಭಿಯಾನಕ್ಕೆ ಚಾಲನೆ ನೀಡಿದ ಮೈಸೂರು ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಗ್ರಾಹಕರ ಸೇವೆಯಲ್ಲಿ ಅನ್ಯಾಯ ಕಂಡು ಬಂದರೆ ತಮ್ಮ ಹಕ್ಕು ಪ್ರತಿಪಾದಿಸುವ ಜೊತೆಗೆ ತಮ್ಮ ಕರ್ತವ್ಯಗಳನ್ನು ಚಾಚು ತಪ್ಪದೇ ಪಾಲಿಸುವುದರಿಂದ ಗ್ರಾಹಕರು ತಮ್ಮ ಮೇಲಿನ ದೌರ್ಜನ್ಯ ತಡೆಯಬಹುದಾಗಿದೆ ಎಂದು ಹೇಳಿದರು.

ಚಿಂತಕ ಕೆ.ರಘುರಾಂ ವಾಜಪೇಯಿ ಮಾತನಾಡಿ, ಪ್ರತಿಯೊಬ್ಬನೂ ಹುಟ್ಟಿದ ಶಿಶುವಿನಿಂದ ಅಂತಿಮ ಯಾತ್ರೆವರೆಗೂ ಗ್ರಾಹಕನಾಗಿರುತ್ತಾನೆ. ಗ್ರಾಹಕ ಸ್ಥಾನಕ್ಕೆ ತಾರತಮ್ಯ ವಿರೋಧಗಳಿಲ್ಲ. ಕನಿಷ್ಠ ಕೂಲಿ ಕಾರ್ಮಿಕನಿಂದ ಹಿಡಿದು ರಾಷ್ಟ್ರಪತಿವರೆಗೂ ಗ್ರಾಹಕರೇ ಆಗಿರುತ್ತಾರೆ. ಗ್ರಾಹಕರ ಕಷ್ಟ ನಷ್ಟಗಳಿಗೆ ಗಾಹಕ ವೇದಿಕೆ ಇದೆ. ಗ್ರಾಹಕರು ಜಾಗೃತರಾಗಿದ್ದು, ತೂಕ ಮತ್ತು ಅಳತೆಯಲ್ಲಿನ ಮೋಸ, ಕಲಬೆರಕೆ ಪದಾರ್ಥಗಳ ಬಗ್ಗೆ ಎಚ್ಚರ ವಹಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮೈಸೂರು ವಕೀಲರ ಸಂಘದ ಕಾರ್ಯದರ್ಶಿ ಉಮೇಶ್, ನಲ್ಲಪಟ್ಟಣ ಸಂಚಾರಿ ಪೊಲೀಸ್ ಠಾಣೆ ಎಎಸ್‌ಐ ಕೆ.ಎಸ್.ನಾರಾಯಣ್, ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕ ಅಧ್ಯಕ್ಷ ರವಿಶಂಕರ್, ಸಂಘಟನಾ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಅರಿವು ಸಂಸ್ಥೆ ಅಧ್ಯಕ್ಷ ಶ್ರೀಕಾಂತ್ ಕಶ್ಯಪ್, ಪರಮೇಶ್‌ಗೌಡ, ಶ್ರೀನಿವಾಸ್, ನೇಹಾ ನೈನಾ, ಸುಚೆಂದ್ರ, ಸಂದೀಪ್ ಇನ್ನಿತರರು ಉಪಸ್ಥಿತರಿದ್ದರು.

ಟ್ರಿಪಲ್ ರೈಡಿಂಗ್ ವಿರುದ್ಧ ಮೈಸೂರಲ್ಲಿ ಕಾರ್ಯಾಚರಣೆ

ಡಿ.5ರಿಂದ 19ರವರೆಗೆ 103 ವಾಹನಗಳು ವಶಕ್ಕೆ

ಒಟ್ಟು 760 ಪ್ರಕರಣ ಬಾಕಿ, ದಂಡ ಪಾವತಿಸಿಕೊಂಡ ಬಳಿಕ ಬಿಡುಗಡೆ



ಮೈಸೂರು, ಡಿ. 20(ಆರ್‌ಕೆ)– ಡಿಸೆಂಬರ್ 5ರಿಂದ 19ರವರೆಗೆ ಮೈಸೂರಲ್ಲಿ ಸಂಚಾರ ಪೊಲೀಸರು ನಡೆಸಿದ ಕಾರ್ಯಾಚರಣೆ ವೇಳೆ ಟ್ರಿಪಲ್ ರೈಡಿಂಗ್ ಮಾಡುತ್ತಿದ್ದ 103 ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ವಶಪಡಿಸಿಕೊಂಡ ವಾಹನಗಳನ್ನು ಮೈಸೂರಿನ ಸಿದ್ಧಾರ್ಥ ಸಂಚಾರ ಠಾಣೆ ಆವರಣದಲ್ಲಿರಿಸಿ ದಾಖಲಾತಿ ಪರಿಶೀಲಿಸಿ ದಂಡ ಪಾವತಿಸಿಕೊಂಡು ಸೂಕ್ತ ತಿಳುವಳಿಕೆ ನೀಡಿ ಕಳುಹಿಸಲಾಗುತ್ತಿದೆ ಎಂದು ಡಿಸಿಪಿ ಎಂ.ಎಸ್. ಗೀತಾ ಪ್ರಸನ್ನ ತಿಳಿಸಿದ್ದಾರೆ. ಪರಿಶೀಲನೆ ವೇಳೆ 103 ದ್ವಿಚಕ್ರ ವಾಹನಗಳ ಮೇಲೆ ಒಟ್ಟು 760 ಕೇಸ್‌ಗಳಿದ್ದು, ಕಳ್ಳತನ, ನಕಲಿ ನಂಬರ್ ಪ್ಲೇಟ್, ದಾಖಲಾತಿಗಳು ಸರಿಯಾಗಿಲ್ಲದಿರುವುದು ಕಂಡುಬಂದಿದೆ. ಸೋಮವಾರ ತಾವು ಸಿದ್ಧಾರ್ಥ ಸಂಚಾರ ಠಾಣೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾಗಿಯೂ ತಿಳಿಸಿದರು. ಸಂಚಾರ ವಿಭಾಗದ ಪ್ರಭಾರ ಎಸಿಪಿ ಅಶ್ವಥನಾರಾಯಣ, ಇನ್ಸ್‌ಪೆಕ್ಟರ್‌ಗಳಾದ ಯೋಗೇಶ್, ಮಂಜುನಾಥ, ಮುನಿಯಪ್ಪ, ಪ್ರಸನ್ನ, ಸುರೇಶ್‌ಕುಮಾರ್, ಸಬ್‌ಇನ್ಸ್‌ಪೆಕ್ಟರ್‌ಗಳು ಈ ಸಂದರ್ಭ ಹಾಜರಿದ್ದರು.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.20– ಚೆಸ್ಕಾಂ ವತಿಯಿಂದ ಡಿ.21 ಬುಧವಾರ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿದ್ದು, ಜ್ಞಾನಗಂಗಾ ಬಡಾವಣೆ, ಶ್ರೀನಗರ, ಬಿ.ಟಿ.ಎ. ಬಡಾವಣೆ, ಮಹಾಲಕ್ಷ್ಮಿ ಬಡಾವಣೆ, ವೆಂಕಟಾದ್ರಿ ಬಡಾವಣೆ, ಸರೋಜ ಬಡಾವಣೆ, ಸಿದ್ದಪ್ಪ ಬಡಾವಣೆ, ವಸಂತ ಬಡಾವಣೆ, ಕೆಎಸ್‌ಆರ್‌ಟಿಸಿ ಬಡಾವಣೆ, ವಿಜಯಕುಮಾರ್ ಬಡಾವಣೆ, ಸ್ಕಿಲ್‌ಟೆಕ್ ಬಡಾವಣೆ, ಸಿದ್ದಲಿಂಗೇಶ್ವರ ಬಡಾವಣೆ, ಎಂಸಿಆರ್‌ಟಿಸಿ ಬಡಾವಣೆ, ಐಶ್ವರ್ಯ ಬಡಾವಣೆ, ಶಿವಾನಂದ ಭಾರತಿ ಬಡಾವಣೆ, ಬೆಮೆಲ್ ಬಡಾವಣೆ, ಶಾರದಾ ಬಡಾವಣೆ, ಗುರುಕುಲ ಬಡಾವಣೆ, ಝುಡ್‌ಇಡಿ ಬಡಾವಣೆ, ನೆಸ್ಲೆ ಬಡಾವಣೆ, ಟೀಚರ್ಸ್ ಬಡಾವಣೆ, ಎಂಕೆ ಮಹೇಶ್ ಬಡಾವಣೆ, ಭವಾನಿ ಬಡಾವಣೆ, ಆರ್‌ಕೆ ಬಡಾವಣೆ, ತಿಬ್ಬಾದೇವಿ ಫಾರಂ, ಅವಲಕ್ಕಿ ಫ್ಯಾಕ್ಟರಿ, ಬಿಟಿಎ ಬಡಾವಣೆ, 'ಡಿ' ಜೋನ್ ಮುಡಾ ಬಡಾವಣೆ, ಕೊಪ್ಪಲೂರು, ದೃಷ್ಟಿ ಎನ್‌ಕ್ಲೇವ್, ವಿನಾಯಕ ಎನ್‌ಕ್ಲೇವ್, ಹುಲುಗಾದ್ರಿ ಬಡಾವಣೆ, ಪುಷ್ಪಕುಮಾರಿ ಬಡಾವಣೆ ಹಾಗೂ ಸುತ್ತಮುತ್ತ ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ನಾಳೆ ಕುಂದು ಕೊರತೆಗಳ ಸಭೆ

ಮೈಸೂರು,ಡಿ.20–ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಡಿಸಿ ಅಧ್ಯಕ್ಷತೆಯಲ್ಲಿ ಡಿ.22ರಂದು ಬೆಳಗ್ಗೆ 11 ಗಂಟೆಗೆ ಜಿಪಂ ಸಭಾಂಗಣದಲ್ಲಿ ಮೈಸೂರು ಜಿಲ್ಲೆಯ ವಿಕಲಚೇತನ ವ್ಯಕ್ತಿಗಳ ಕುಂದು ಕೊರತೆಗಳನ್ನು ಶೀಘ್ರ ಇತ್ಯರ್ಥಗೊಳಿಸುವ ಸಲುವಾಗಿ ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ವಿಕಲಚೇತನರು ಇದರ ಸದುಪಯೋಗ ಪಡೆದುಕೊಳ್ಳಬಹುದು.

ಜ.5ರಿಂದ 224 ಕ್ಷೇತ್ರಗಳ ಕಾಂಗ್ರೆಸ್ ಸಂಭವನೀಯ ಅಭ್ಯರ್ಥಿಗಳ ಮೇಲೆ

ಐಟಿ, ಇಡಿ ರೈಡ್ ಮಾಡಿಸಲು ಬಿಜೆಪಿ ಸಿದ್ಧತೆ

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಗಂಭೀರ ಆರೋಪ



ಮೈಸೂರು, ಡಿ.20(ಆರ್‌ಕೆಬಿ)– ಚುನಾವಣೆ ಸಮೀಪಿಸುತ್ತಿದ್ದಂತೆ ರಾಜ್ಯದಲ್ಲಿ ಬಿಜೆಪಿ ಆಟ ಶುರು ಮಾಡಿದ್ದು, ಜ.5ರಿಂದ 224 ಕ್ಷೇತ್ರಗಳ ಅಭ್ಯರ್ಥಿಗಳ ಹಿಂದೆ ಐಟಿ, ಇಡಿ ರೈಡ್ ಮಾಡಿಸಲು ಸಿದ್ಧತೆ ನಡೆಸಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಇಂದಿಲ್ಲಿ ಗಂಭೀರ ಆರೋಪ ಮಾಡಿದರು.

ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಮೇಲೆ 17 ಬಾರಿ ರೈಡ್ ಆಗಿದೆ. 37 ಬಾರಿ ಸಮನ್ಸ್ ನೀಡಿದ್ದಾರೆ. ಇದರ ಉದ್ದೇಶ ಸ್ಪಷ್ಟವಾಗಿದ್ದು, 2023 ಚುನಾವಣೆಯಲ್ಲಿ ಅಧಿಕಾರಕ್ಕೆ ಬರಲು ಬಿಜೆಪಿ ತಯಾರಿ ನಡೆಸಿದೆ ಎಂದು ದೂರಿದರು.

ಐಟಿ, ಇಡಿ ರೈಡ್ ಮಾಡಿಸಿ, ಕಾಂಗ್ರೆಸ್ ಅಭ್ಯರ್ಥಿಗಳು, ಮುಖಂಡರನ್ನು ಹೆದರಿಸಿ, ಬಿಜೆಪಿಗೆ ಕರೆತರಲು ಯೋಜನೆ ರೂಪಿಸಿದ್ದಾರೆ. 2014ರಿಂದ 2022 ರವರೆಗೆ 124 ರಾಜಕೀಯ ಪ್ರಮುಖರ ಮೇಲೆ ರೈಡ್ ಮಾಡಿಸಿದ್ದಾರೆ. ವಿರೋಧ ಪಕ್ಷದ ನಾಯಕರ ಮೇಲೂ ಇಂತಹ ದಾಳಿ ನಡೆದಿದೆ. ಶೇ.96ರಷ್ಟು ವಿಪಕ್ಷದವರ ಮೇಲೆ ದಾಳಿ ಮಾಡಲಾಗಿದೆ. ಇದು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ನೀಡಿರುವ ಅಂಕಿಅಂಶಗಳೇ ಆಗಿದೆ ಎಂದರು.


2014ರಿಂದ 2022ರವರೆಗೆ ಇಡಿ 5400 ಕೇಸ್ ದಾಖಲು ಮಾಡಿದೆ. 23 ಜನರ ಮೇಲೆ ಮಾತ್ರ ಪ್ರಕರಣ ದಾಖಲಾಗಿದೆ. ಅನಗತ್ಯವಾಗಿ ಕಾಂಗ್ರೆಸ್ ಪಕ್ಷದ 8ರಿಂದ 9 ಶಾಸಕರು ಸೇರಿ 21 ಮುಖಂಡರ ಮೇಲೆ ಇಡಿ ಮೂಲಕ ದಾಳಿಗೆ ಸಿದ್ಧತೆ ನಡೆಸಿದ್ದಾರೆ. ನೀವು ಬಿಜೆಪಿಗೆ ಬಂದರೆ ನಿಮ್ಮನ್ನು ಮುಟ್ಟುವುದಿಲ್ಲ ಎಂದು ಇಡಿ ಅಧಿಕಾರಿಗಳೇ ಒತ್ತಡ ಹೇರುತ್ತಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಗಳ ಚಲನವಲನದ ಮೇಲೆ ಕಣ್ಣಿಟ್ಟಿರುವ 300 ಐಟಿ ಅಧಿಕಾರಿಗಳು ಅಕ್ಕಪಕ್ಕದ ರಾಜ್ಯಗಳಿಂದ ಕರ್ನಾಟಕಕ್ಕೆ ಬಂದಿರುವ ಮಾಹಿತಿ ಇದೆ. ಪ್ರಮುಖ ಮುಖಂಡರ ಫೋನ್ ಕದ್ದಾಲಿಕೆ ನಡೆಯುತ್ತಿದೆ. ಅವರಿಗೆ ಸಹಾಯ ಮಾಡಲು ಆರ್‌ಎಸ್‌ಎಸ್‌ನ 1200 ಕಾರ್ಯಕರ್ತರು ಸಹ ಆಗಮಿಸಿದ್ದಾರೆ ಎಂದು ಲಕ್ಷ್ಮಣ್ ಗಂಭೀರ ಆರೋಪ ಮಾಡಿದರು.

ಒಕ್ಕಲಿಗ ಸಮುದಾಯದ ಮುಖಂಡರಿಗೆ ಆಗುತ್ತಿರುವ ಕಿರುಕುಳದ ಬಗ್ಗೆ ಆ ಸಮುದಾಯ ದನಿ ಎತ್ತಬೇಕಿದೆ. ಯಡಿಯೂರಪ್ಪ ಎಲ್ಲಿಯೂ, ಏನನ್ನೂ ಬಾಯಿ ಬಿಡದಂತೆ ಅವರ ಹಿಂದೆ–ಮುಂದೆ ಇರುವ ಗನ್ ಮ್ಯಾನ್‌ಗಳ ಪೈಕಿ ಒಬ್ಬ ಇಡಿ ಅಧಿಕಾರಿಯನ್ನು ಬಿಡಲಾಗಿದೆ ಎಂದು ಆರೋಪಿಸಿದ ಲಕ್ಷ್ಮಣ್, ಈ ಮೂಲಕ ಯಡಿಯೂರಪ್ಪ ಮತ್ತು ಅವರ ಕುಟುಂಬದ ಸದಸ್ಯರಿಗೆ ಕಿರುಕುಳ ನೀಡಲಾಗುತ್ತಿದೆ. ಅರ್ಥಾತ್ ಯಡಿಯೂರಪ್ಪರನ್ನು ಬ್ಲಾಕ್‌ಮೇಲ್ ಮಾಡಲಾಗುತ್ತಿದೆ. ಇದನ್ನು ಲಿಂಗಾಯತ ಸಮುದಾಯ ಅರ್ಥ ಮಾಡಿ ಕೊಳ್ಳಬೇಕು. ಸಿದ್ದರಾಮಯ್ಯ ಅವರ ಬಗ್ಗೆಯೂ ನೀಡುತ್ತಿರುವ ಹೇಳಿಕೆಗಳ ಬಗ್ಗೆ ಕುರುಬ ಸಮುದಾಯ ದನಿ ಎತ್ತಬೇಕು ಎಂದು ಕರೆ ನೀಡಿದರು.

ಯಡಿಯೂರಪ್ಪ ಅವರಿಂದ ಮೋದಿ, ಅಮಿತ್ ಷಾ ನೇತೃತ್ವದಲ್ಲಿ ಬಿಜೆಪಿ 150 ಕ್ಷೇತ್ರ ಗೆಲ್ಲುತ್ತದೆಂಬ ಹೇಳಿಕೆ ಕೊಡಿಸುತ್ತಿದ್ದಾರೆ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ರಾಹುಲ್ ಗಾಂಧಿ ವಿರುದ್ಧ ಟೀಕಿಸುವ ಕೆಲಸವನ್ನು ಬಿಜೆಪಿಯವರು ಮಾಡಿಸುತ್ತಿದ್ದಾರೆ. ಯಡಿಯೂರಪ್ಪರಿಗೆ ಗನ್ ಪಾಯಿಂಟ್ ಮಾಡಿ ಎಲ್ಲವನ್ನೂ ಹೇಳಿಸುತ್ತಿದ್ದಾರೆ ಎಂದು ಯಡಿಯೂರಪ್ಪನವರು ಭಯಪಡದೇ ಎಲ್ಲವನ್ನೂ ಬಯಲು ಮಾಡಬೇಕು ಎಂದು ಒತ್ತಾಯಿಸಿದರು.

ಒಂದು ವಾಕ್ಯವೂ ಇಂಗ್ಲಿಷ್ ಬರೆಯಲು ಬಾರದವರು ಕೆ–ಸೆಟ್ ಪರೀಕ್ಷೆ ಬರೆದು ಸಹಾಯಕ ಪ್ರಾಧ್ಯಾಪಕರಾಗುತ್ತಿದ್ದಾರೆ ಎಂಬ ಮೈಸೂರು ಸಂಸದ ಪ್ರತಾಪ್ ಸಿಂಹ ಹೇಳಿಕೆಯನ್ನು ಪ್ರಸ್ತಾಪಿಸಿದ ಅವರು, ಇದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಉತ್ತರಿಸಬೇಕು. ಪ್ರತಾಪ್‌ಸಿಂಹ ಅವರ ಹೇಳಿಕೆಯ ಆಡಿಯೋ ತಮ್ಮ ಬಳಿ ಇದೆ ಎಂದು ಪತ್ರಕರ್ತರಿಗೆ ಆಡಿಯೋ ಕೇಳಿಸಿದರು. ಬಿಜೆಪಿಯವರು ಅಧಿಕಾರಕ್ಕಾಗಿ ಯಾವ ಹಂತಕ್ಕೆ ಬೇಕಾದರೂ ಹೋಗುತ್ತಾರೆ ಎಂಬುದಕ್ಕೆ ಇವೆಲ್ಲವೂ ನಿದರ್ಶನವಾಗಿದೆ. ಗೂಂಡಾ ಪ್ರವೃತ್ತಿ ಹೊಂದಿರುವವರಿಂದ ನನ್ನನ್ನು ಹೆದರಿಸುವ ಕೆಲಸವನ್ನು ಪ್ರತಾಪ್ ಸಿಂಹ ಮಾಡುತ್ತಿದ್ದಾರೆ. ಇವರ ವಿರುದ್ಧ ತಾವು ಪೊಲೀಸ್ ಆಯುಕ್ತರಿಗೆ ದೂರು ನೀಡುತ್ತಿರುವುದಾಗಿ ತಿಳಿಸಿದರು.

ಪ್ರಸನ್ನಗೆ ಪಿಹೆಚ್.ಡಿ



ಮೈಸೂರು: ಡಾ. ಟಿ.ಕೆ. ಕೆಂಪೇಗೌಡ ಅವರ ಮಾರ್ಗದರ್ಶನದಲ್ಲಿ ಎಂ.ಎಸ್.ಪ್ರಸನ್ನ ಅವರು ಕನ್ನಡ ವಿಷಯದಲ್ಲಿ ಸಂಶೋಧಿಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ನಲ್ಲಿ ಅಪರಿಚಿತ ವ್ಯಕ್ತಿ ಶವ ಪತ್ತೆ

ಮೈಸೂರು,ಡಿ.20(ಆರ್‌ಕೆ)– ಮೈಸೂರಿನ ಲ್ಯಾನ್ಸ್‌ಡೌನ್ ಕಟ್ಟಡದಲ್ಲಿ ಅಪರಿಚಿತ ವ್ಯಕ್ತಿಯ ಶವ ಇಂದು ಪತ್ತೆಯಾಗಿದೆ.

ವಾಸನೆ ಬರುತ್ತಿದ್ದರಿಂದ ಸಾರ್ವಜನಿಕರ ಮಾಹಿತಿ ಮೇರೆಗೆ ಸ್ಥಳಕ್ಕೆ ತೆರಳಿದ ದೇವರಾಜ ಪೊಲೀಸರು ಮಹಜರು ನಡೆಸಿದಾಗ ಸುಮಾರು 45 ವರ್ಷದ ವ್ಯಕ್ತಿಯ ದೇಹ ಪತ್ತೆಯಾಗಿದೆ. 2 ದಿನಗಳ ಹಿಂದೆಯೇ ಸಾವನ್ನಪ್ಪಿರಬಹುದೆಂದು ಶಂಕಿಸಲಾಗಿದ್ದು, ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿರಿಸಲಾಗಿದೆ. ವಾರಸುದಾರರಿದ್ದಲ್ಲಿ ದೇವರಾಜ ಪೊಲೀಸ್ ಠಾಣೆ (0821–2418306) ಅಥವಾ ನಗರ ಪೊಲೀಸ್ ಕಂಟ್ರೋಲ್ ರೂಂ (0821–2418339) ಅನ್ನು ಸಂಪರ್ಕಿಸುವಂತೆ ಕೋರಲಾಗಿದೆ.


ಮೈಸೂರು ಹಾಗೂ ಸುತ್ತಮುತ್ತ ಇಂದು...

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಜಿಎಸ್‌ಎಸ್ ಯೋಗದ್ ಮಾತು, ಪ್ರಸ್ತುತಿ– ಯೋಗಶಿಕ್ಷಕ ಡಿ. ಶ್ರೀಹರಿ, 6.40 ಅರಿವಿನ ಶಿಖರ, ಗಾಯನ– ಜಿ. ಪುಷ್ಪಲತಾ, ಸದಾಶಿವ ಪಾಟೀಲ್, ವ್ಯಾಖ್ಯಾನ– ಮೊರಬದ ಮಲ್ಲಿಕಾರ್ಜುನ, 8.30ಗ್ರಾಮ ಕೇಂದ್ರಗಳು– ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖಾ ಪ್ರಾಯೋಜಿತ ಕಾರ್ಯಕ್ರಮ, 10.00 ಹೀರಾಬಾಯಿ ಬಡೋದೇಕರ್– ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ 'ಅನುಮಾನದ ಭೂತ', ರಚನೆ–ಯಮುನಾಮೂರ್ತಿ, ನಿರ್ವಹಣೆ–ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ, 3.00 ಲಯ ಸಂಭ್ರಮ, ಪ್ರಸ್ತುತಿ– ಹೆಚ್.ಎಲ್. ಶಿವಶಂಕರ ಸ್ವಾಮಿ, 4.00 ಮಹಿಳಾರಂಗ– ಸ್ತ್ರೀ ಚೇತನ –ಭಾಗವಹಿಸುವವರು ರಂಗಭೂಮಿ ಕಲಾವಿದೆ ಜಾಹಿದಾ, 5.30 ಸಿರಿ ತೋಟಗಾರಿಕೆ– ತೋಟಗಾರಿಕೆ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ, 6.50 ಕೃಷಿರಂಗ –ಕಿಸಾನ್‌ವಾಣಿ– ಸಮಗ್ರ ಕೃಷಿಯಲ್ಲಿ ಕಂಡ ಯಶಸ್ಸು ಕುರಿತು ಹೆಚ್.ಸಿ.ಪ್ರಭಾಕರ ಆರಾಧ್ಯ ಅವರೊಡನೆ ಸಂದರ್ಶನ, 9.30 ಗಿರಿಜಾದೇವಿ – ಗಾಯನ, 10.00 ಜನಪದಗೀತೆ–ಗೌರಮ್ಮ ಮತ್ತು ತಂಡ, 10.30 ಸವಿನೆನಪು



ಇಂದಿನ ಪಂಚಾಂಗ

21.12.2022 ಬುಧವಾರ, ಮಳೆ ನಕ್ಷತ್ರ: ಮೂಲ, 16.12.2022ರಿಂದ 29.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ,
ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಅನೂರಾಧ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನೆ, ವಾರ್ಷಿಕ ಕುಂಭಾಭಿಷೇಕ ನೂತನ ಪೂಜಾ ಮಹೋತ್ಸವ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ರಾಘವೇಂದ್ರನಗರ, ಬೆಳಗ್ಗೆಯಿಂದ.
- **ಶಬರಿಮಲ ಶ್ರೀ ಅಯ್ಯಪ್ಪ ಪೂಜಾ ಸಮಿತಿ :** ಬೆಳಗ್ಗೆಯಿಂದ ಮಹಾಗಣಪತಿ ಪೂಜೆ, ಉಷಾಪೂಜೆ, ಪಂಚಗವ್ಯಂ, ಪಂಚಕಂ, ಕಲಶಪೂಜೆ, ಶಿವೇಲಿ, ವಾದ್ಯಂ, ಕಲಶಾಭಿಷೇಕ, ಉದಯಾಸ್ಥಮಾನ ಪೂಜೆ, ದೀಪಾರಾಧನೆ, ಅತ್ತಾಳಪೂಜೆ, ಶ್ರೀ ಭೂತ ಬಲಿ ವಿಳಕ್ಕು, ಹಲವು ವಿಶೇಷ ಪೂಜಾ ಕೈಂಕರ್ಯ, ಮಧ್ಯಾಹ್ನ 12.30 ರಿಂದ ಅನ್ನಸಂತರ್ಪಣೆ.
- **ಜವಳಿ ಮಂತ್ರಾಲಯ, ನವದೆಹಲಿ, ಕೈಮಗ್ಗ ಮತ್ತು ಇಲಾಖೆ, ಕರ್ನಾಟಕ :** ವಿಶೇಷ ಕೈಮಗ್ಗ ಮೇಳ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ಗಂಟೆಯಿಂದ.
- **ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು :** ಸಾಂಸ್ಕೃತಿಕ, ಕ್ರೀಡೆ, ರಾಷ್ಟ್ರೀಯ ಸೇವಾ ಯೋಜನೆ ಉದ್ಘಾಟನಾ ಸಮಾರಂಭ, ಉದ್ಘಾಟನೆ : ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರದ ನಿರ್ದೇಶಕರಾದ ಡಾ. ವಸುಂಧರಾ ದೊರೆಸ್ವಾಮಿ, ಮುಖ್ಯ ಅತಿಥಿಗಳು : ಚಲನಚಿತ್ರ ನಟಿ ತಪಸ್ವಿನಿ ಪೂಣಚ್ಚ, ಸಿ.ಕೆ. ಮುರಳೀಧರನ್, ಡಾ. ಎಂ.ಬಿ. ಸುರೇಶ್, ಅಧ್ಯಕ್ಷತೆ : ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಪ್ರಾಂಶುಪಾಲ ಡಾ. ಡಿ. ರವಿ, ಸ್ಥಳ: ಕಾಲೇಜು ಕಲಾಮಂಟಪ, ಬೆಳಗ್ಗೆ 11ಕ್ಕೆ.
- **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಕುವೆಂಪುನಗರ ಘಟಕ :** ಕ್ಯಾಲೆಂಡರ್ ಬಿಡುಗಡೆ ಸಮಾರಂಭ, ಉಪಸ್ಥಿತರು : ಶ್ರೀ ಉರಿಲಿಂಗ ಪೆದ್ದಿಶ್ವರ ಸಂಸ್ಥಾನ ಶಾಖಾ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಮಧ್ಯಾಹ್ನ 12ಕ್ಕೆ.
- **ಸ್ವರಾಲಯ ಸಂಗೀತ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು :** ಸ್ವರಾಲಯ ಸಾಂಸ್ಕೃತಿಕ ಹಬ್ಬ, ಉದ್ಘಾಟನೆ : ತಬಲ ವಾದಕ ವಿದ್ವಾನ್ ವಿ. ಶ್ಯಾಮ್, ಮುಖ್ಯ ಅತಿಥಿಗಳು : ವಿದುಷಿ ಸವಿತಾ ಮೋಹನ್, ಅಧ್ಯಕ್ಷತೆ : ಸ್ವರಾಲಯ ಸಂಗೀತ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷೆ ವಿದುಷಿ ಡಾ. ಸುಮಹರಿನಾಥ್, ವೃಂದಗಾನ, ಕು. ಸ್ನೇಹ ಹೆಚ್.ಎಸ್. ಮತ್ತು ಕು. ಸಹನ ಹೆಚ್.ಎಸ್. ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಸಿ. ಚೇತನ್–ವಯೋಲಿನ್, ವಿದ್ವಾನ್ ವಿ. ಶ್ಯಾಮ್–ಮೃದಂಗ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಸಂಜೆ 4ಕ್ಕೆ.
- **ಶ್ರೀ ಆಂಡಾಳ್ ಮಂದಿರಂ ಟ್ರಸ್ಟ್, ಹೆಬ್ಬಾರ್ ಶ್ರೀ ವೈಷ್ಣವ ಗ್ರಾಮಾಂತರ ಉಪಸಭೆ :** ಧನುರ್ಮಾಸದ ಪ್ರಯುಕ್ತ ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ಶ್ರೀ ಆಂಡಾಳ್ ವಿರಚಿತ 'ತಿರುಪ್ಪಾವೈ' ಪ್ರವಚನ, ಸ್ಥಳ: ಮಂದಿರದ ಆವರಣ, ವಿವಿ ಮೊಹಲ್ಲಾ, ಸಂಜೆ 6ರಿಂದ.
- **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್.ವನಂ :** ಡಾ. ಎನ್.ಕೆ. ರಾಮಶೇಷನ್ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಡಾ. ಕಮಲರಾಮನ್‌ರವರ ಮಂದಿರ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಸಂಜೆ 6.15ರಿಂದ.
- **ಶ್ರೀ ಮಹಾಜನ ಸಭಾ :** ತಿರುಪ್ಪಾವೈ ಕಾಲಕ್ಷೇಪ, ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ, ಸ್ಥಳ: ಶ್ರೀ ರಾಮಮಂದಿರ, ಶ್ರೀ ಕೃಷ್ಣಮೂರ್ತಿಪುರಂ, ಸಂಜೆ 6.15ರಿಂದ.
- **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ತಿರುಪ್ಪಾವೈ ಪ್ರವಚನ, ವಿದುಷಿ ಬಿ.ಕೆ. ಸೀತಾಲಕ್ಷ್ಮೀ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಾಯಿಬಾಬಾ ಮಂದಿರ ಸಮೀಪ, ಸಂಜೆ 6.30ರಿಂದ.
- **ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ :** ಸಂಜೆ 6.30 ರಿಂದ 7 ಗಂಟೆವರೆಗೆ ಬಾಲಕೃಷ್ಣ ವಾದ್ಯವೃಂದದವರಿಂದ ಚಿತ್ರಗೀತೆ, 7 ರಿಂದ 7.30 ಗಂಟೆಯವರೆಗೆ ಮನುವಿದ್ಯಾ ಕಲ್ಚರಲ್‌ನ ನೇತ್ರ ಅವರಿಂದ ಭರತನಾಟ್ಯ, 7.30 ರಿಂದ 8 ಗಂಟೆಯವರೆಗೆ ಮಹೇಶ್ ಕಲಾವೃಂದದವರಿಂದ ಸುಗಮ ಸಂಗೀತ, 8 ರಿಂದ 8.30 ಗಂಟೆಯವರೆಗೆ ಮೈಸೂರಿನ ಸುಮಿತ್ರ ಬಿ.ಜೆ. ಅವರಿಂದ ಭರತನಾಟ್ಯ, 8.30 ರಿಂದ 9.30 ಗಂಟೆವರೆಗೆ ಮಾತಾ ಮೆಲೋಡಿಸ್‌ನ ಎನ್. ಪುಟ್ಟ ಮಹಾದೇವಪ್ಪ ಅವರಿಂದ ರಸಮಂಜರಿ, ಸ್ಥಳ: ಪಿ.ಕಾಳಿಂಗರಾವ್ ರಂಗಮಂಟಪ.

ಸರಗೂರಿನಲ್ಲಿಂದು

- **ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸರಗೂರು, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು :** ದತ್ತಿ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಡಾ. ಟಿ.ಕೆ. ಕೆಂಪೇಗೌಡ ಅವರಿಂದ ವಚನಗಳಲ್ಲಿ ಕಾಯಕದ ಪರಿಕಲ್ಪನೆ ಕುರಿತು ಉಪನ್ಯಾಸ, ಅಧ್ಯಕ್ಷತೆ: ಸರಗೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ. ಬಿ.ಸಿ.ಮಲ್ಲೇಶ್, ಆಶಯ ನುಡಿ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಎಂ. ಚಂದ್ರಶೇಖರ್, ಬೆಳಗ್ಗೆ 11ಕ್ಕೆ.

ಮೈಸೂರು ಮಿತ್ರ ಬುಧವಾರ 21 ಡಿಸೆಂಬರ್ 2022

ಪಾಲಾರ್ ಬಾಂಬ್ ಸ್ಫೋಟ ಪ್ರಕರಣ

ವೀರಪ್ಪನ್ ಸಹಚರ ಜ್ಞಾನಪ್ರಕಾಶ್ ಮೈಸೂರು ಜೈಲಿಂದ ಬಿಡುಗಡೆ

ಮೈಸೂರು,ಡಿ.20(ಆರ್‌ಕೆ)–ಪಾಲಾರ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದ ಕಾಡುಗಳ್ಳ ವೀರಪ್ಪನ್ ಸಹಚರನನ್ನು ಮಧ್ಯಂತರ ಜಾಮೀನಿನ ಮೇಲೆ ಇಂದು ಮೈಸೂರು ಕೇಂದ್ರ ಕಾರಾಗೃಹದಿಂದ ಬಿಡುಗಡೆ ಮಾಡಲಾಯಿತು.



ಜ್ಞಾನಪ್ರಕಾಶ

ಗಂಟಲು ಕ್ಯಾನ್ಸರ್‌ನಿಂದ ಬಳಲುತ್ತಿದ್ದ, ಜ್ಞಾನಪ್ರಕಾಶ್‌ಗೆ ಸುಪ್ರೀಂಕೋರ್ಟ್ ನವೆಂಬರ್ 26ರಂದು ಮಧ್ಯಂತರ ಜಾಮೀನು ಮಂಜೂರು ಮಾಡಿತ್ತು. ಕೋರ್ಟ್ ಆದೇಶದನ್ವಯ ಇಂದು ಬೆಳಗ್ಗೆ ಆತನನ್ನು ಬಿಡುಗಡೆ ಮಾಡಲಾಯಿತು ಎಂದು ಮೈಸೂರು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ದಿವ್ಯಾಶ್ರೀ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಸುಪ್ರೀಂಕೋರ್ಟ್ ಆದೇಶದನ್ವಯ ಸೋಮವಾರ ಇಬ್ಬರ ಶೂರಿಟಿ ಮತ್ತು 5 ಲಕ್ಷ ರೂ. ಬಾಂಡ್ ಪಡೆದಿದ್ದು, ಜ್ಞಾನಪ್ರಕಾಶ್ ಬಿಡುಗಡೆ ಮಾಡುವಂತೆ ಚಾಮರಾಜನಗರ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯ ಇತ್ತೀಚೆಗೆ ಆದೇಶಿಸಿತ್ತು.

68 ವರ್ಷದ ಜ್ಞಾನಪ್ರಕಾಶ್, ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿ ಶಿಕ್ಷೆ ಅನುಭವಿಸಿದ ಬಳಿಕ ಮೈಸೂರು ಜೈಲಿಗೆ ಸ್ಥಳಾಂತರಗೊಂಡಿದ್ದ. ಕಳೆದ ಒಂದೂವರೆ ವರ್ಷದಿಂದ ಗಂಟಲು ಕ್ಯಾನ್ಸರ್‌ನಿಂದ ಬಳಲುತ್ತಿದ್ದ. ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯಲ್ಲಿ ಈತನಿಗೆ ಚಿಕಿತ್ಸೆ ಕೊಡಿಸಲಾಗುತ್ತಿತ್ತು.

ಚಾಮರಾಜನಗರ ಜಿಲ್ಲೆ, ಹನೂರು ತಾಲೂಕು, ಮಾರ್ಟಳ್ಳಿ ಸಂದನಪಾಳ್ಯ ಗ್ರಾಮದವನಾದ ಜ್ಞಾನಪ್ರಕಾಶ್, 1993ರ ಪಾಲಾರ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ವೀರಪ್ಪನ್, ಸೈಮನ್, ಬಿಲವೇಂದ್ರನ್, ಮೀಸೆಕಾರ ಮಾದಯ್ಯರ ಜೊತೆ ಭಾಗಿಯಾಗಿದ್ದನೆಂದು ಮೈಸೂರಿನ ಟಾಡಾ ನ್ಯಾಯಾಲಯವು ಟಾಡಾ ಕಾಯ್ದೆಯಡಿ 1997ರಲ್ಲಿ ಗಲ್ಲು ಶಿಕ್ಷೆ ವಿಧಿಸಿತ್ತು. ಆದರೆ 2014ರಲ್ಲಿ ಸುಪ್ರೀಂಕೋರ್ಟ್ ಜ್ಞಾನಪ್ರಕಾಶ್‌ಗೆ ಗಲ್ಲು ಶಿಕ್ಷೆಯನ್ನು ಜೀವಾವಧಿ ಶಿಕ್ಷೆಗೆ ಪರಿಷ್ಕರಿಸಿತ್ತು. 2004ರ ಅಕ್ಟೋಬರ್ 18ರಂದು ಎನ್‌ಕೌಂಟರ್‌ನಲ್ಲಿ ವೀರಪ್ಪನ್ ಬಲಿಯಾದರೆ, ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ಸೈಮನ್ 2018ರ ಏಪ್ರಿಲ್ 15ರಂದು ವಿಕ್ಟೋರಿಯಾ ಆಸ್ಪತ್ರೆಯ ಕೈದಿ ವಾರ್ಡ್‌ನಲ್ಲಿ ಸಾವನ್ನಪ್ಪಿದ್ದ. ಕೆಲ ವರ್ಷದ ಹಿಂದೆ ಬಿಲವೇಂದ್ರನ್ ಸಹ ಸಾವಿಗೀಡಾಗಿದ್ದಾನೆ. ಮೀಸೆಕಾರ ಮಾದಯ್ಯ ಮತ್ತು ಜ್ಞಾನಪ್ರಕಾಶ್ ಮಾತ್ರ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದರು. ಈಗ ಜ್ಞಾನಪ್ರಕಾಶ್ ಜೈಲಿನಿಂದ ಬಿಡುಗಡೆಯಾಗಿದ್ದಾನೆ.



ನವದೆಹಲಿಯಲ್ಲಿ ಮಂಗಳವಾರ ಕೇಂದ್ರ ಸರ್ಕಾರದ ವಾಣಿಜ್ಯ ಇಲಾಖೆ ಕಾರ್ಯದರ್ಶಿ ಸುನಿಲ್ ಬರ್ತ್ವಾಲ್ ಅವರನ್ನು ಭೇಟಿ ಮಾಡಿದ ಸಂಸದ ಪ್ರತಾಪ್ ಸಿಂಹ, ತಂಬಾಕು ಮಂಡಳಿ ಪ್ರಾದೇಶಿಕ ಕಚೇರಿಯನ್ನು ಮೈಸೂರಿಗೆ ಸ್ಥಳಾಂತರಿಸಬೇಕೆಂದು ಮತ್ತು ಅನಧಿಕೃತ ತಂಬಾಕು ಬೆಳೆಗಾರರಿಗೆ ಲೈಸೆನ್ಸ್ ನೀಡಬೇಕೆಂದು ಅವರಲ್ಲಿ ಮನವಿ ಮಾಡಿದರಲ್ಲದೆ, ಈ ಎರಡು ಅಗತ್ಯತೆ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಟ್ಟರು.

ಸರ್ಕಾರಿ ನೌಕರರ ಗಳಿಕೆ ರಜೆ ನಗದೀಕರಣಕ್ಕೆ ಅವಕಾಶ

ಬೆಂಗಳೂರು: 2023 ಸಾಲಿನಲ್ಲಿ ಸರ್ಕಾರಿ ನೌಕರರ ಗಳಿಕೆ ರಜೆ (EL) ನಗದೀಕರಣ ಅವಕಾಶ ಕಲ್ಪಿಸಿ ಸರ್ಕಾರ ಆದೇಶ ಹೊರಡಿಸಿದೆ. ರಾಜ್ಯ ಸರ್ಕಾರಿ ನೌಕರರು ಗರಿಷ್ಠ 15 ದಿನಗಳಿಗೆ ಮೀರದ ಗಳಿಕೆ ರಜೆಯನ್ನು ರಜಾ ವೇತನಕ್ಕೆ ಸಮನಾದ ನಗದೀಕರಣ ಸೌಲಭ್ಯ ಪಡೆಯುವ ಯೋಜನೆಯನ್ನು ಜಾರಿಗೊಳಿಸಿದೆ. ಎಲ್ಲಾ ವೃಂದದ ಅರ್ಹ ಅಧಿಕಾರಿ/ನೌಕರರು ಒಂದು ತಿಂಗಳ ಮುಂಚಿತ ನೋಟಿಸ್ ನೀಡಿ 01/01/2023ರಿಂದ 31/12/2023ರವರೆಗಿನ ಅವಧಿಯಲ್ಲಿ ಅವರ ಇಚ್ಛೆಯಂತೆ ಯಾವುದೇ ತಿಂಗಳಿನಲ್ಲಿ ಗಳಿಕೆ ರಜೆ ನಗದೀಕರಣದ ಪ್ರಯೋಜನ ಪಡೆಯಲು ಅರ್ಹರಾಗಿರುತ್ತಾರೆ. ಗೆಜೆಟೆಡ್ ಅಧಿಕಾರಿಗಳ ವಿಚಾರವಾಗಿ 2023ನೇ ಸಾಲಿನ ಗಳಿಕೆ ರಜೆ ನಗದೀಕರಣ ಸೌಲಭ ಮಂಜೂರಾತಿ ಉದ್ದೇಶಕ್ಕಾಗಿ ಮಾತ್ರ ಹೆಚ್.ಆರ್.ಎಂ.ಎಸ್‌ನಲ್ಲಿ ಲಭ್ಯವಿರುವ ಅಧಿಕಾರಿಗಳ ಗಳಿಕೆ ರಜೆ ಲೆಕ್ಕಾಚಾರದ ಆಧಾರದ ಮೇಲೆ ನಗದೀಕರಣವನ್ನು ಮಂಜೂರು ಮಾಡಲು ಸಕ್ಷಮ ರಜೆ ಮಂಜೂರಾತಿ ಪ್ರಾಧಿಕಾರಿಗಳು ಕ್ರಮವಹಿಸಬೇಕು ಎಂದು ಸೂಚಿಸಲಾಗಿದೆ.

ಅಮೆರಿಕ, ಚೀನಾದಲ್ಲಿ ಮತ್ತೆ ಕೊರೊನಾ ಉಲ್ಬಣ

ರಾಜ್ಯಗಳಿಗೆ ಪತ್ರ ಬರೆದ ಕೇಂದ್ರ

ನವದೆಹಲಿ: ಚೀನಾ, ಜಪಾನ್, ದಕ್ಷಿಣ ಕೊರಿಯಾ, ಬ್ರೆಜಿಲ್ ಮತ್ತು ಅಮೆರಿಕದಲ್ಲಿ ಮತ್ತೆ ಕೋವಿಡ್–19 ಪ್ರಕರಣಗಳು ಹಠಾತ್ ಉಲ್ಬಣಗೊಂಡಿದ್ದು, ಹೊಸ ರೂಪಾಂತರಗಳ ಬಗ್ಗೆ ನಿಗಾ ವಹಿಸಲು ಪಾಸಿಟಿವ್ ಮಾದರಿಗಳ ಸಂಪೂರ್ಣ ಜೀನೋಮ್ ಸೀಕ್ವೆನ್ಸಿಂಗ್‌ಗೆ ಸಜ್ಜಾಗುವಂತೆ ಕೇಂದ್ರ ಸರ್ಕಾರ ಮಂಗಳವಾರ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ಬರೆದಿದೆ.

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ಬರೆದಿರುವ ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್, ಇಂತಹ ಕ್ರಮಗಳು ದೇಶದಲ್ಲಿ ಪತ್ತೆಯಾಗುವ ಹೊಸ ರೂಪಾಂತರಗಳನ್ನು ಸಮಯೋಚಿತವಾಗಿ ನಿಯಂತ್ರಿಸಲು ಮತ್ತು ಅಗತ್ಯ ಸಾರ್ವಜನಿಕ ಆರೋಗ್ಯ ಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಗುತ್ತದೆ ಎಂದು ಹೇಳಿದ್ದಾರೆ.

ಟೆಸ್ಟ್–ಟ್ರ್ಯಾಕ್–ಟ್ರೀಟ್–ವ್ಯಾಕ್ಸಿನೇಷನ್ ಮತ್ತು ಕೋವಿಡ್–ಸೂಕ್ತ ನಡವಳಿಕೆ ಕಾರ್ಯತಂತ್ರದ ಮೇಲೆ ಭಾರತ ಕೇಂದ್ರೀಕರಿಸಿದ್ದು, ಕೊರೊನಾ ಹರಡುವಿಕೆಯನ್ನು ನಿರ್ಬಂಧಿಸಲು ಸಮರ್ಥವಾಗಿದೆ. ದೇಶದಲ್ಲಿ ಪ್ರಸ್ತುತ 1,200 ಪ್ರಕರಣಗಳು ವರದಿಯಾಗುತ್ತಿವೆ ಎಂದು ತಿಳಿಸಲಾಗಿದೆ. ಕೋವಿಡ್‌ನ ಸಾರ್ವಜನಿಕ ಆರೋಗ್ಯ ಸವಾಲು ಪ್ರಪಂಚದಾದ್ಯಂತ ಇನ್ನೂ ಮುಂದುವರೆದಿದೆ ಮತ್ತು ವಾರಕ್ಕೆ ಸುಮಾರು 35 ಲಕ್ಷ ಪ್ರಕರಣಗಳು ವರದಿಯಾಗುತ್ತವೆ ಎಂದು ಭೂಷಣ್ ಹೇಳಿದ್ದಾರೆ. ಈ ವರ್ಷದ ಜೂನ್‌ನಲ್ಲಿ ಸಚಿವಾಲಯವು ಹೊರಡಿಸಿದ ಕೋವಿಡ್–19 ಪರಿಷ್ಕೃತ ಮಾರ್ಗಸೂಚಿಗಳನ್ನು ಭೂಷಣ್ ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಹೊಸ SARS-CoV–2 ರೂಪಾಂತರಗಳ ಏಕಾಏಕಿ ಪತ್ತೆಹಚ್ಚಲು, ಒಳಗೊಂಡಿರುವ ಶಂಕಿತ ಮತ್ತು ದೃಢಪಡಿಸಿದ ಪ್ರಕರಣಗಳ ಆರಂಭಿಕ ಪತ್ತೆ, ಪ್ರತ್ಯೇಕತೆ, ಪರೀಕ್ಷೆ ಮತ್ತು ಸಮಯೋಚಿತ ನಿರ್ವಹಣೆಗೆ ಇದು ಕರೆ ನೀಡುತ್ತದೆ.

ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬಿನ ತೂಕದಲ್ಲಿ ಮಹಾ ಮೋಸ

ಆಡಳಿತ ಪಕ್ಷದವರಿಂದಲೇ ಸರ್ಕಾರ ತರಾಟೆಗೆ

- ಕೈಗಾರಿಕಾ ಸಚಿವ ನಿರಾಣಿ ಉತ್ತರಕ್ಕೆ ಆಸ್ಪದ ನೀಡದ ಸಭಾಪತಿ; ಸದಸ್ಯರ ಆಕ್ಷೇಪ
- ಸಕ್ಕರೆ ಸಚಿವ ಶಂಕರ್ ಪಾಟೀಲ್ ಮುನೇನಕೊಪ್ಪರಿಂದ ಸಮಿತಿ ರಚಿಸಿ ತಿಂಗಳಲ್ಲಿ ವರದಿ ನೀಡುವ ಭರವಸೆ
- ಸಕ್ಕರೆ ಸಚಿವರ ಭರವಸೆಗೂ ತೃಪ್ತರಾಗದ ಲಕ್ಷ್ಮಣ ಸವದಿ

ಬೆಂಗಳೂರು, ಡಿ.20(ಕೆಎಂಶಿ)–ಕಬ್ಬಿನ ತೂಕದಲ್ಲಿ ಸಕ್ಕರೆ ಕಾರ್ಖಾನೆಗಳ ಮಾಲೀಕರು ಬೆಳೆಗಾರರನ್ನು ವಂಚಿಸುತ್ತಿದ್ದಾರೆ ಎಂದು ಆಡಳಿತ ಪಕ್ಷದ ಸದಸ್ಯರೇ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಅಧಿಕಾರಿಗಳು, ಕಾರ್ಖಾನೆ ಮಾಲೀಕರ ಕಿಸೆಯಲ್ಲಿದ್ದು, ಅವರ ಆಣತಿಯಂತೆ ಕೆಲಸ ಮಾಡುತ್ತಿದ್ದಾರೆ. ರೈತರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸುತ್ತಿಲ್ಲ ಎಂದು ಆಡಳಿತ ಪಕ್ಷದ ಹಿರಿಯ ಸದಸ್ಯ ಲಕ್ಷ್ಮಣ್ ಸವದಿ ರೈತರಿಗಾಗುತ್ತಿರುವ ಅನ್ಯಾಯವನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು.

ಪಕ್ಷದ ಸದಸ್ಯರ ಆರೋಪಕ್ಕೆ ತೆರೆ ಎಳೆಯಲು ಸಕ್ಕರೆ ಕಾರ್ಖಾನೆಗಳ ಮಾಲೀಕರೂ ಆಗಿರುವ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಮಧ್ಯೆ ಪ್ರವೇಶ ಮಾಡಿದಾಗ ಸದನ ಗೊಂದಲಕ್ಕೆ ಸಿಲುಕಿತು. ನಿರಾಣಿ ಅವರು ಉತ್ತರ ನೀಡಲು ಹಂಗಾಮಿ ಸಭಾಪತಿ ರಘುನಾಥ್ ಮಲ್ಕಾಪುರೆ ಅವಕಾಶ ನೀಡದಿದ್ದಾಗ ಪ್ರತಿಪಕ್ಷದ ಕಾಂಗ್ರೆಸ್ ಸದಸ್ಯರು ವಿರೋಧ ವ್ಯಕ್ತಪಡಿಸಿ, ಸಭಾಪತಿ ಸ್ಥಾನದ ಮುಂದಿನ ಬಾವಿಯಲ್ಲಿ ಧರಣಿ ಕುಳಿತರು.

ಪ್ರಶ್ನೋತ್ತರ ಕಲಾಪದಲ್ಲಿ ಪ್ರಕಾಶ್ ರಾಥೋಡ್, ಪಿ.ಆರ್.ರಮೇಶ್ ಸದನದಲ್ಲಿ ಕಬ್ಬಿನ ತೂಕದ ವಂಚನೆಯ ಬಗ್ಗೆ ಪ್ರಸ್ತಾಪಿಸಿದರು. ಇದಕ್ಕೆ ಧ್ವನಿಗೂಡಿಸಿದ ಬಿಜೆಪಿ ಸದಸ್ಯ ಲಕ್ಷ್ಮಣ ಸವದಿ ಅವರು ಕಬ್ಬು ಕಾರ್ಖಾನೆಯ ಮಾಲೀಕರು ಬಡವರ ರಕ್ತ ಹೀರುತ್ತಿದ್ದಾರೆ. ಅದರಲ್ಲೂ ತೂಕದ ವಿಚಾರದಲ್ಲಿ ಟನ್‌ಗಟ್ಟಲೆ ಮೋಸ ಮಾಡುತ್ತಿದ್ದಾರೆ ಎಂದು ಸದನದ ಗಮನಕ್ಕೆ ತಂದರು.



ಈ ವೇಳೆ ಮತ್ತೆ ನಿರಾಣಿ ಅವರು ಮಾತನಾಡಲು ಮುಂದಾಗಿದ್ದರಿಂದ ಸಭಾಪತಿಗಳು ಆಕ್ರೋಶಗೊಂಡು ಸುಮ್ಮನೆ ಕುಳಿತುಕೊಳ್ಳುವಂತೆ ಏರಿದ ಧನಿಯಲ್ಲಿ ತಾಕೀತು ಮಾಡಿದರು.

ಇದರಿಂದ ಕೆರಳಿದ ಮರಿತಿಬ್ಬೇಗೌಡ ಇದು ಸಂವಿಧಾನ ವಿರೋಧಿ ನಡೆ. ಸಚಿವ ನಿರಾಣಿ ಅವರಿಗೆ ಮಾತನಾಡಲು ಅವಕಾಶ ನೀಡಬೇಕು ಎಂದು ಮನವಿ ಮಾಡಿದರು. ಬಳಿಕ, ವಿಪಕ್ಷ ನಾಯಕ ಹರಿಪ್ರಸಾದ್, ಪ್ರಕಾಶ್ ರಾಥೋಡ್, ಸಲೀಂ ಅಹ್ಮದ್ ಸೇರಿದಂತೆ ಕಬ್ಬಿನ ತೂಕದಲ್ಲಿ ಆಗುತ್ತಿರುವ ಮೋಸದ ಬಗ್ಗೆ ವಿವರ ನೀಡಲು ನಿರಾಣಿ ಅವರಿಗೆ ಅವಕಾಶ ನೀಡಬೇಕೆಂದು ಆಗ್ರಹಿಸಿದರು.

ಆನಂತರ ಸಭಾಪತಿ, ಅವಕಾಶ ನೀಡುವುದಾಗಿ ಭರವಸೆ ನೀಡಿದ ನಂತರ ಧರಣಿ ವಾಪಸ್ ಪಡೆದುಕೊಂಡರು.

ನಂತರ ಉತ್ತರಿಸಿದ ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ಕಬ್ಬಿನ ಕಟಾವು ಮತ್ತು ಸಾಗಾಣಿಕೆ ವೆಚ್ಚ ಕಡಿತದ ಕುರಿತು ಒಂದು ತಿಂಗಳಲ್ಲಿ ಸಮಿತಿ ರಚಿಸಿ ವರದಿ ಪಡೆದು ಕ್ರಮ ಕೈಗೊಳ್ಳಲಾಗುವುದು ಎಂದರು.

ತೂಕದಲ್ಲಿ ಮೋಸವಾಗುತ್ತಿರುವ ಬಗ್ಗೆ ರೈತರ ಆರೋಪದ ಹಿನ್ನೆಲೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. 6.22 ಲಕ್ಷ ಮೆಟ್ರಿಕ್ ಟನ್ ಕಬ್ಬನ್ನು ಕಳೆದ ಬಾರಿ ಅರೆದಿದ್ದೆವು. ಈ ಬಾರಿ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಹೆಚ್ಚು ಅರೆದರೆ ರೈತರಿಗೆ ನೀಡುವ ಲಾಭವನ್ನು ಮತ್ತಷ್ಟು ಹೆಚ್ಚಿಸುವ ಕೆಲಸ ಮಾಡಲಾಗುವುದು ಎಂದು ಹೇಳಿದರು. ಇದಕ್ಕೂ ಮುನ್ನ ಲಕ್ಷ್ಮಣ ಸವದಿ ಅವರು, ಸರ್ಕಾರ ಕಬ್ಬು ಕಾರ್ಖಾನೆಗಳ ಮೇಲೆ ದಾಳಿ ನಡೆಸಿದಾಗ ಯಾವುದೇ ಮಾಹಿತಿ, ತಪ್ಪು ಕಂಡುಬಂದಿಲ್ಲ. ಇದು ಅಚ್ಚರಿಗೆ ಕಾರಣವಾಗಿದೆ. ಇದಕ್ಕೆ ಶಂಕರ ಪಾಟೀಲ ಮುನೇನಕೊಪ್ಪ, ನಾವು ದಾಳಿ ಮೊದಲ ಬಾರಿ ಮಾಡಿದ್ದೇವೆ. ಆದರೆ, ಇದು ಇಲ್ಲಿಗೆ ನಿಲ್ಲುವುದಿಲ್ಲ, ಮುಂದುವರೆಯಲಿದೆ. ಇದರಿಂದ ಮೋಸ ಮಾಡುವವರಿಗೆ ಚುರುಕು ಮುಟ್ಟಿಸಲಾಗುವುದು ಎಂದು ಸಮಜಾಯಿಷಿ ನೀಡಿದರು.

ಆರಂಭದಲ್ಲಿಯೇ ಸಭಾಪತಿ ನಡೆಗೆ ಬೇಸರ ವ್ಯಕ್ತಪಡಿಸಿದ ಮುರುಗೇಶ್ ನಿರಾಣಿ, ಸಣ್ಣ ಕಾರ್ಖಾನೆ ನಡೆಸುತ್ತೇನೆ. ನನಗೆ ಇದರ ಬಗ್ಗೆ ಅರಿವು ಇದೆ. ಆದರೆ, ನನಗೆ ಏಕೆ ಮಾತನಾಡಲು ಅವಕಾಶ ನೀಡಿಲ್ಲ ಎನ್ನುವುದು ಗೊತ್ತಾಗುತ್ತಿಲ್ಲ ಎಂದು ನುಡಿದರು.

ಇನ್ನೂ, ಎಥೆನಾಲ್ ಹಾಗೂ ಸಕ್ಕರೆ ಉತ್ಪಾದನೆ ಬೆಲೆ, ಆದಾಯಲ್ಲಿ ಅಲ್ಪಸ್ವಲ್ಪ ಬದಲಾವಣೆ ಇದೆ. ಹಾಗೇ ಕಬ್ಬು ತೂಕದಲ್ಲಿ ಯಾವುದೇ ಮೋಸ ಆಗುತ್ತಿಲ್ಲ. ಏಕೆಂದರೆ ಬೆಳೆಗಾರರು ಖಾಸಗಿ ಕಡೆಯೂ ತೂಕ ಮಾಡಿಸುತ್ತಾರೆ. ಹಾಗಾಗಿ, ಟನ್‌ಗಟ್ಟಲೆ ಮೋಸ ಆಗುವುದಿಲ್ಲ. ಅಲ್ಪ ತೂಕ ಕಡಿಮೆ ಸಹಜ ಎಂದು ಸದನಕ್ಕೆ ತಿಳಿಸಿದರು. ಇದಕ್ಕೆ ಒಪ್ಪದ ಲಕ್ಷ್ಮಣ ಸವದಿ, ಕಬ್ಬು ಮಾಲೀಕರು ತೂಕದಲ್ಲಿ ಮೋಸ ಮಾಡುವುದೇ ಇಲ್ಲ ಎನ್ನುವುದು ಒಪ್ಪಲು ಸಾಧ್ಯವೇ ಇಲ್ಲ. ಈ ಬಗ್ಗೆ ಅರ್ಧ ಗಂಟೆಯ ಚರ್ಚೆಯಲ್ಲಿ ಇನ್ನಷ್ಟು ಉದಾಹರಣೆ ಹೇಳುವೆ ಎಂದು ಹೇಳಿದರು.

ಕೆಪಿಟಿಸಿಎಲ್‌ನ ವಿವಿಧ ಹುದ್ದೆಗಳಿಗೆ ನೇಮಕಾತಿ ಪರೀಕ್ಷೆ ಫಲಿತಾಂಶ ಜನವರಿ ಮೊದಲ ವಾರ ಪ್ರಕಟ

ಬೆಂಗಳೂರು, ಡಿ.20(ಕೆಎಂಶಿ)–ಕೆಪಿಟಿಸಿಎಲ್ ಸಹಾಯಕ ಇಂಜಿನಿಯರ್, ಕಿರಿಯ ಇಂಜಿನಿಯರ್‌ಗಳು ಹಾಗೂ ಜೂನಿಯರ್ ಅಸಿಸ್ಟಂಟ್ ಹುದ್ದೆಗಳ ನೇಮಕ ಪರೀಕ್ಷೆಯ ಫಲಿತಾಂಶವನ್ನು ಜನವರಿ ಮೊದಲ ವಾರದಲ್ಲಿ ಪ್ರಕಟಿಸಲಾಗುವುದು ಮತ್ತು ಕೀ ಉತ್ತರಗಳನ್ನು ವಾರದೊಳಗೆ ಪ್ರಕಟಿಸಲಾಗುವುದು ಎಂದು ಇಂಧನ ಸಚಿವ ಸುನೀಲ್‌ಕುಮಾರ್ ವಿಧಾನಸಭೆಯಲ್ಲಿ ತಿಳಿಸಿದರು. ಶೂನ್ಯವೇಳೆಯಲ್ಲಿ ಸುರೇಶ ಕುಮಾರ್ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖಾಂತರ ಪರೀಕ್ಷೆಗಳನ್ನು 5 ತಿಂಗಳ ಹಿಂದೆ ನಡೆಸಲಾಗಿದ್ದು, ಫಲಿತಾಂಶ ಪ್ರಕಟಿಸಲಾಗಿಲ್ಲ. ಪರೀಕ್ಷೆ ಬರೆದ ವಿದ್ಯಾರ್ಥಿಗಳು ಫಲಿತಾಂಶಕ್ಕಾಗಿ ಕಾಯುತ್ತಿರುವುದು ಗಮನಕ್ಕಿದ್ದು, ಈ ಕುರಿತು ಕೆಇಎ ಜೊತೆಗೆ ಸಂಪರ್ಕದಲ್ಲಿದ್ದೇನೆ. ಈ ವಾರದಲ್ಲಿ ಅಥವಾ ಅಧಿವೇಶನ ಮುಗಿಯುವುದರೊಳಗೆ ಕೀ ಉತ್ತರಗಳನ್ನು ಪ್ರಕಟಿಸಿ, ಜನವರಿ ಮೊದಲ ವಾರದೊಳಗೆ ಫಲಿತಾಂಶ ಪ್ರಕಟಿಸಲು ಕ್ರಮ ವಹಿಸಲಾಗುವುದು ಎಂದರು.



ಶೀಘ್ರವೇ ಹಾಲಿನ 339 ಕೋಟಿ ಬಾಕಿ ಪ್ರೋತ್ಸಾಹ ಧನ ಜಮಾ

ಬೆಳಗಾವಿ: ಶೀಘ್ರವೇ ಪ್ರೋತ್ಸಾಹ ಧನವನ್ನು ಅವರ ಖಾತೆಗೆ ಪಾವತಿಸಲಾಗುತ್ತದೆ ಎಂದು ಪಶು ಸಂಗೋಪನಾ ಸಚಿವ ಪ್ರಭು ಚೌವ್ಹಾಣ್ ಹೇಳಿದರು. ಕಲಾಪದಲ್ಲಿ ಪ್ರಶ್ನೆಯೊಂದಕ್ಕೆ ಸ್ಪಷ್ಟನೆ ನೀಡಿದ ಸಚಿವರು ಹಾಲು ಉತ್ಪಾದಕರಿಗೆ 5 ರೂ.ಗಿಂತ ಹೆಚ್ಚಿಗೆ ಪ್ರೋತ್ಸಾಹ ಧನ ಏರಿಕೆ ಇಲ್ಲ. ಶೀಘ್ರವೇ ಪ್ರೋತ್ಸಾಹಧನವನ್ನು DBT ಮುಖೇನ ನೇರವಾಗಿ ಹಾಲು ಉತ್ಪಾದಕರ ಆಧಾರ್ ಜೋಡಣೆಯಾಗಿರುವ ಬ್ಯಾಂಕ್ ಖಾತೆಗೆ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಪ್ರಭು ಚವ್ಹಾಣ್ ತಿಳಿಸಿದ್ದಾರೆ.



ಹಾಲು ಉತ್ಪಾದಕ ರೈತರಿಗೆ ನೀಡುತ್ತಿರುವ 5 ರೂ. ಪ್ರೋತ್ಸಾಹ ಧನವನ್ನು ಏರಿಕೆ ಮಾಡುವ ಯಾವುದೇ ಪ್ರಸ್ತಾಪವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಶೀಘ್ರವೇ 339 ಕೋಟಿ ಬಾಕಿ ಪ್ರೋತ್ಸಾಹಧನ ನೇರವಾಗಿ ಬ್ಯಾಂಕ್ ಖಾತೆಗೆ ಪಾವತಿ ಮಾಡಲಾಗುತ್ತದೆ ಎಂದು ಅವರು ಹೇಳಿದ್ದಾರೆ.

ನಾಗವಾಲದಲ್ಲಿ ಘನತ್ಯಾಜ್ಯ ಸಂಸ್ಕರಣಾ ಘಟಕ: ಜಿಟಿಡಿ ಉದ್ಘಾಟನೆ



ಮೈಸೂರು,ಡಿ.20(ಆರ್‌ಕೆ)– ಬೆಂಗಳೂರಿನ ಆಶ್ರಯ ಹಸ್ತ ಟ್ರಸ್ಟ್ ಅವರ ಸಹಯೋಗದೊಂದಿಗೆ ಹಸಿರು ದಳ ಸಂಸ್ಥೆಯು ಮೈಸೂರು ತಾಲೂಕು, ನಾಗವಾಲ ಗ್ರಾಮದಲ್ಲಿ ನಿರ್ಮಿಸಿರುವ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಶಾಸಕ ಜಿ.ಟಿ. ದೇವೇಗೌಡ ಇಂದು ಬೆಳಗ್ಗೆ ಉದ್ಘಾಟಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ನಗರ ಪ್ರದೇಶದ ಸ್ಥಳೀಯ ಸಂಸ್ಥೆಗಳು ನಿರ್ವಹಣೆ ಮಾಡುತ್ತಿರುವ ಮಾದರಿಯಲ್ಲೇ ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಹಸಿರು ದಳ ಸಂಸ್ಥೆಯು ಪೈಲಟ್ ಪ್ರಾಜೆಕ್ಟ್ ಆಗಿ ಮೊದಲ ಬಾರಿ ನಾಗವಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 'ಸುಸ್ಥಿರ ಘನತ್ಯಾಜ್ಯ ನಿರ್ವಹಣೆ' ಯೋಜನೆಯನ್ನು ಆರಂಭಿಸಿದೆ ಎಂದು ಜಿ.ಟಿ.ದೇವೇಗೌಡರು ತಿಳಿಸಿದರು.

ಚಿಂದಿ ಆಯುವವರ ಸಾಮಾಜಿಕ ಭದ್ರತೆ, ತ್ಯಾಜ್ಯ ವಸ್ತು ಸಂಗ್ರಹಿಸಿ ವೈಜ್ಞಾನಿಕವಾಗಿ ಸಂಸ್ಕರಿಸಿ ಮರು ಬಳಕೆ ಮಾಡುವ ಮೂಲಕ ಗ್ರಾಮೀಣ ಪ್ರದೇಶದಲ್ಲೂ ಸ್ವಚ್ಛತೆ ಕಾಪಾಡುವುದು ಘಟಕ ಸ್ಥಾಪಿಸಿರುವುದರ ಮುಖ್ಯ ಉದ್ದೇಶವಾಗಿದೆ. ಗ್ರಾಮ ನಿವಾಸಿಗಳು ಕಸವನ್ನು ಎಲ್ಲೆಂದರಲ್ಲಿ ಸುರಿಯದೆ ವಿಂಗಡಿಸಿ ವಿಲೇವಾರಿಗೆ ಸಹಕರಿಸಬೇಕು ಎಂದು ಶಾಸಕರು ಇದೇ ಸಂದರ್ಭ ಸಲಹೆ ನೀಡಿದರು.

ನಾಗವಾಲ ಗ್ರಾಮ ಪಂಚಾಯಿತಿ ಅಧ್ಯಕ್ಷ ಸಿ.ನರೇಂದ್ರ, ಆಶ್ರಯ ಹಸ್ತ ಟ್ರಸ್ಟ್ ನಿರ್ದೇಶಕ ಎನ್.ಕೆ.ಎ. ಶರ್ಮಾ, ಹಸಿರು ದಳ ಸಂಸ್ಥೆ ಕಾರ್ಯನಿರ್ವಾಹಕ ನಿರ್ದೇಶಕಿ ನಳಿನಿ ಶೇಖರ್, ಮೈಸೂರು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಹೆಚ್.ಡಿ.ಗಿರೀಶ್, ನೋಡಲ್ ಅಧಿಕಾರಿ ಪ್ರೇಮ್‌ಕುಮಾರ್ ಸೇರಿದಂತೆ ಹಲವು ಅಧಿಕಾರಿಗಳು, ಜನಪ್ರತಿನಿಧಿಗಳು, ಗ್ರಾಮದ ಮುಖಂಡರು ಈ ಸಂದರ್ಭ ಪಾಲ್ಗೊಂಡಿದ್ದರು. ನಂತರ ಜಿ.ಟಿ. ದೇವೇಗೌಡರು ಹುಯಿಲಾಳು, ಇಲವಾಲ ಸುತ್ತಮುತ್ತಲ ಗ್ರಾಮಗಳಲ್ಲಿ ರಸ್ತೆ, ಚರಂಡಿ ಇತ್ಯಾದಿ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿಪೂಜೆ ನೆರವೇರಿಸಿದರು.

ವಿಜಯನಗರ 3ನೇ ಹಂತದ ಯುವ ಮುಖಂಡ ಮಂಜುನಾಥ್ ಸಂಭ್ರಮದ ಹುಟ್ಟುಹಬ್ಬ ಆಚರಣೆ

ಮೈಸೂರು,ಡಿ.20(ಜಿಎ)–ವಿಜಯನಗರ 3ನೇ ಹಂತ ಪ್ರತಿನಿಧಿಸುತ್ತಿದ್ದ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಎಸ್.ಮಂಜುನಾಥ್ ತಮ್ಮ 36ನೇ ವರ್ಷದ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿಕೊಂಡರು. ಬೆಳಗ್ಗೆ ಕೆ.ಆರ್.ಆಸ್ಪತ್ರೆ ರೋಗಿಗಳು ಹಾಗೂ ವಿಜಯನಗರ 3ನೇ ಹಂತದಲ್ಲಿರುವ ವೃದ್ಧಾಶ್ರಮದಲ್ಲಿ ಹಣ್ಣು–ಹಂಪಲು ವಿತರಿಸಿದರು. ಸರ್ಕಾರಿ ಶಾಲೆಗೆ ಪೀಠೋಪಕರಣಗಳ ಉಡುಗೊರೆ ನೀಡಿದ ಬಳಿಕ ವಿಜಯನಗರ 3ನೇ ಹಂತದ ಪೌರಕಾರ್ಮಿಕರಿಗೆ ಸಮವಸ್ತ್ರ ವಿತರಿಸಿದರು. ಸಂಜೆ ವಿಜಯನಗರ 3ನೇ ಹಂತದ ನಿವಾಸಿಗಳು, ಜಿಟಿಡಿ ಅಭಿಮಾನಿ ಬಳಗದವರು, ವಿಜಯನಗರ ಗೆಳೆಯರ ಬಳಗ ಸೇರಿದಂತೆ ಇಲ್ಲಿನ ನಿವಾಸಿಗಳ ಸಮ್ಮುಖ ಕೇಕ್ ಕತ್ತರಿಸಿ, ಬೃಹತ್ ಸೇಬಿನ ಹಾರ ಹಾಕಿ ಪಟಾಕಿ ಸಿಡಿಸಿ, ಅದ್ಧೂರಿಯಾಗಿ ಹುಟ್ಟುಹಬ್ಬ ಆಚರಿಸಿದರು. ಈ ವೇಳೆ ಗ್ರಾಪಂ ಮಾಜಿ ಸದಸ್ಯ ಕುಮಾರ್, ಮುಖಂಡರಾದ ಮಹೇಶ್, ವೇಣು, ಮರೀಗೌಡ, ನಿಂಗೇಗೌಡ, ಮಂಜು, ಅಣ್ಣೇಗೌಡ, ಚೆನ್ನು, ಜಯರಾಂ, ಕೃಷ್ಣೇಗೌಡ, ನಂದಿ, ಹೇಮು, ಕೌಶಿಕ್, ನಂದನ್, ಚೇತು, ಅಂಥೋಣಿ, ರವಿ, ನಿಶಾಂತ್, ಚರಣಾ, ಪ್ರೇಮ, ರೇವಣ್ಣ ನೂರಾರು ಮಂದಿ ಉಪಸ್ಥಿತರಿದ್ದರು.



ಸಹಪಂಕ್ತಿ ಭೋಜನದ ಮೂಲಕ ಕೆ.ಮರೀಗೌಡರ ಹುಟ್ಟುಹಬ್ಬದಂದು ಅಭಿಮಾನಿಗಳು, ಹಿತೈಷಿಗಳು ಮೊಳಗಿಸಿದ ಘೋಷಣೆ 'ನಮ್ಮ ಎಂಎಲ್‌ಎ'



ಮೈಸೂರು ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡರ ಹುಟ್ಟುಹಬ್ಬದ ಪ್ರಯುಕ್ತ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಆಯೋಜಿಸಿದ್ದ ಸಹಪಂಕ್ತಿ ಭೋಜನ ಕಾರ್ಯಕ್ರಮದಲ್ಲಿ ಹಿತೈಷಿಗಳು, ಅಭಿಮಾನಿಗಳು 'ನಮ್ಮ ಎಂಎಲ್‌ಎ' ಶೀರ್ಷಿಕೆಯಡಿ ನಿರ್ಮಿಸಿದ್ದ ಬೃಹತ್ ಕೇಕ್ ಕತ್ತರಿಸಿ, ಸಂಭ್ರಮಿಸಿದರು.

ಮೈಸೂರು, ಡಿ.20(ಎಸ್‌ಪಿಎನ್)– ಹಲವು ವರ್ಷಗಳಿಂದ ಸಾಮಾಜಿಕ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಜನಾನುರಾಗಿ ಆಗಿರುವ ಮೈಸೂರು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಮರೀಗೌಡ ಅವರಿಗೆ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸಲು ಕಾಂಗ್ರೆಸ್ ಹೈಕಮಾಂಡ್ ಅವಕಾಶ ಕಲ್ಪಿಸಬೇಕೆಂಬ ಆಗ್ರಹ ಗಟ್ಟಿಯಾಗಿದೆ.

ಕೆ.ಮರೀಗೌಡರ ಹುಟ್ಟುಹಬ್ಬದ ಪ್ರಯುಕ್ತ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ರಾಮಕೃಷ್ಣನಗರದಲ್ಲಿರುವ ಖಾಸಗಿ ಫಂಕ್ಷನ್ ಹಾಲ್‌ನಲ್ಲಿ ಮಂಗಳವಾರ ಆಯೋಜಿಸಿದ್ದ ಸಹಪಂಕ್ತಿ ಭೋಜನದಲ್ಲಿ ಭಾಗಿಯಾಗಿದ್ದ ಚಿಂತಕರು, ದಲಿತ, ಹಿಂದುಳಿದ ಮುಖಂಡರು ಹಾಗೂ ಪೌರಸೇನಾನಿಗಳು, 'ನಮ್ಮ ಎಂಎಲ್‌ಎ' ಎಂದು ಬರೆಯಲಾಗಿದ್ದ ಬೃಹತ್ ಕೇಕ್ ಕತ್ತರಿಸಿ, ಸಿಹಿ ಹಂಚುವ ಮೂಲಕ ಕೆ.ಮರೀಗೌಡರಿಗೇ ಟಿಕೆಟ್ ನೀಡುವಂತೆ ಒಕ್ಕೊರಲಿನಿಂದ ಒತ್ತಾಯಿಸಿದರು.

ಈ ಒಕ್ಕೊರಲ ಅಭಿಪ್ರಾಯವನ್ನು ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್ ತಿಳಿಸುತ್ತಿದ್ದಂತೆ ನೆರೆದಿದ್ದ ಕೆ.ಮರೀಗೌಡರ ಹಿತೈಷಿಗಳು, ಬೆಂಬಲಿಗರ ಶಿಳ್ಳೆ, ಕೇಕೆ, ಜೈಕಾರ ಮುಗಿಲು ಮುಟ್ಟಿತ್ತು. ಬೃಹತ್ ಹೂವಿನ ಹಾರ, ಸೇಬಿನ ಹಾರ ಹಾಕಿ ಮರೀಗೌಡರನ್ನು ಅಭಿನಂದಿಸಿದರು. ಹೊರಗಡೆ ಪಟಾಕಿ ಸಿಡಿಸಿ ಸಂಭ್ರಮಿಸಿದರು.


ಈ ವೇಳೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ಮರೀಗೌಡರು ಹಲವು ವರ್ಷಗಳಿಂದ ಸಾಮಾಜಿಕ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ರಾಜಕೀಯ ಹಾಗೂ ಸಾಮಾಜಿಕ ಸೇವಾ ಕಾರ್ಯದ ಮೂಲಕ ಎಲ್ಲಾ ವರ್ಗದ ಜನರ ವಿಶ್ವಾಸ ಗಳಿಸಿರುವ ಅಜಾತಶತ್ರುವಾಗಿದ್ದಾರೆ. ಇವರು ಶಾಸಕರಾದರೆ ಜನಸೇವೆಗೆ ಮತ್ತಷ್ಟು ಶಕ್ತಿ ಬರಲಿದೆ. ಇಂತಹ ಮಾನವೀಯ ವ್ಯಕ್ತಿ ವಿಧಾನಸಭೆಯಲ್ಲಿದ್ದರೆ ಸಮಾಜಕ್ಕೂ ಒಳ್ಳೆಯದಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕಟ್ಟಾ ಬೆಂಬಲಿಗ ಹಾಗೂ ಅತ್ಯಾಪ್ತರಾದ ಕೆ.ಮರೀಗೌಡರು ಕಳೆದ ನಾಲ್ಕು ದಶಕಗಳಿಂದ ರಾಜಕೀಯ ಕ್ಷೇತ್ರದಲ್ಲಿ ಕೆಳಹಂತದಿಂದ ಬೆಳೆದು ಬಂದು ಜಿಪಂ ಅಧ್ಯಕ್ಷರಾಗಿ ಉತ್ತಮ ಸೇವೆ ಸಲ್ಲಿಸುವ ಮೂಲಕ ಜಿಲ್ಲೆಯಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಸಾಮಾನ್ಯರಿಗೆ ಸರ್ಕಾರಿ ಸೌಲಭ್ಯಗಳನ್ನು ತಲುಪಿಸಿ ಎಲ್ಲಾ ವರ್ಗದವರ ವಿಶ್ವಾಸ ಗಳಿಸಿದ್ದಾರೆ. ಅಲ್ಲದೆ ಜಿಪಂ ಅಧ್ಯಕ್ಷರಾಗಿದ್ದಾಗ ತಾಲೂಕು ಮತ್ತು ಜಿಲ್ಲಾ ಮಟ್ಟದ ಕನ್ನಡ ಸಾಹಿತ್ಯ ಚಟುವಟಿಕೆಗಳಿಗೆ ಬೆನ್ನುಲುಬಾಗಿ ನಿಂತು ಕೆಲಸ ಮಾಡಿದ್ದಾರೆ. 'ಸಾಹಿತ್ಯ ಚಟುವಟಿಕೆ ವಿಚಾರ ಬಂದಾಗ ನನ್ನದು ಕನ್ನಡ ಜಾತಿ, ಕನ್ನಡ ಧರ್ಮ' ಎಂದು ಅವರು ಹೇಳಿದ್ದು ನನಗಿನ್ನೂ ನೆನಪಿದೆ ಎಂದರು.

ಸಿದ್ದರಾಮಯ್ಯನವರ ರಾಜಕೀಯ ಪಯಣದುದ್ದಕ್ಕೂ ಕೆ.ಮರೀಗೌಡರು ಹೆಜ್ಜೆ ಹಾಕಿದ್ದಾರೆ. ಚಾಮುಂಡೇಶ್ವರಿ ಕ್ಷೇತ್ರದ ಜನರೊಂದಿಗೆ ನಿತ್ಯ ಸಂಪರ್ಕದಲ್ಲಿದ್ದು, ಕಷ್ಟದಲ್ಲಿ ಸ್ಪಂದಿಸಿದ್ದಾರೆ. ಇಂತಹ ಜವಾಬ್ದಾರಿಯುತ ವ್ಯಕ್ತಿ ಜನಪ್ರತಿನಿಧಿಯಾಗಬೇಕು. ಇದನ್ನು ಮನಗಂಡು ಮರೀಗೌಡರನ್ನು ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿಸಬೇಕು ಎಂದು ಆಗ್ರಹಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿವಿ ಮಾಜಿ ಸಿಂಡಿಕೇಟ್ ಸದಸ್ಯ ಎನ್‌ಎಸ್‌ಎಸ್ ಕುಮಾರ್, ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಎನ್.ಆರ್.ನಾಗೇಶ್, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಕನ್ನಡ ಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಭಾನವಿ ಆಸ್ಪತ್ರೆ ಮುಖ್ಯಸ್ಥ ನರಸೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಹೊಸಹುಂಡಿ ರಘು, ಉದ್ಬೂರು ಗ್ರಾಪಂ ಅಧ್ಯಕ್ಷ ಕೃಷ್ಣ ಉದ್ಬೂರು, ಜಿಲ್ಲಾ ಕಾಂಗ್ರೆಸ್ ಎಸ್‌ಟಿ ಘಟಕ ಅಧ್ಯಕ್ಷ ನಾರಾಯಣ್, ಚಾಮುಂಡೇಶ್ವರಿ ಬ್ಲಾಕ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಆರೀಫ್ ಪಾಷ, ವಿಶ್ವಕರ್ಮ ಮಹಾಮಂಡಲದ ಜಿಲ್ಲಾಧ್ಯಕ್ಷ ಸಿ.ಟಿ. ಆಚಾರ್ಯ, ಜಿಲ್ಲಾ ಕುಂಬಾರ ಸಮಾಜದ ಅಧ್ಯಕ್ಷ ಎಚ್.ಎಸ್.ಪ್ರಕಾಶ್, ಅಹಿಂದ ಉಪಾಧ್ಯಕ್ಷ ನಜರ್‌ಬಾದ್ ನಟರಾಜ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ದೂರ ನಾಗರಾಜಪ್ಪ, ಜಿಪಂ ಮಾಜಿ ಸದಸ್ಯ ಜವರಪ್ಪ, ತಾಪಂ ಮಾಜಿ ಸದಸ್ಯ ಸೋಮಣ್ಣ, ಗ್ರಾಪಂ ಮಾಜಿ ಸದಸ್ಯ ಸ್ವಾಮಿ ಎಂ.ರಾಜೇಶ್, ನಾರಾಯಣ, ಲೋಕೇಶ್‌ಕುಮಾರ್, ಯೋಗೇಶ್ ಉಪ್ಪಾರ್, ರವಿನಂದನ್, ಮಹಮ್ಮದ್ ಅಲಿ, ಇಲವಾಲ ಪಾಷ, ಮಹೇಂದ್ರ, ಸಣ್ಣಸ್ವಾಮಿ ಹಂಚ್ಯಾ, ರಮ್ಮನಹಳ್ಳಿ ವೆಂಕಟಯ್ಯ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಪಡುವಾರಹಳ್ಳಿ ಸ್ನೇಹ ಬಳಗದಿಂದ ಕನ್ನಡ ರಾಜ್ಯೋತ್ಸವ



ಮೈಸೂರು,ಡಿ.20–ಪಡುವಾರಹಳ್ಳಿಯ ಸ್ನೇಹ ಬಳಗದ ವತಿಯಿಂದ ಶ್ರೀ ಮಹರ್ಷಿ ವಾಲ್ಮೀಕಿ ನಾಮಫಲಕದ ಬಳಿ ಕನ್ನಡ ರಾಜ್ಯೋತ್ಸವ ಹಾಗೂ ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತರಾದ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್ ಅವರಿಗೆ ಸನ್ಮಾನ ಹಮ್ಮಿಕೊಳ್ಳಲಾಗಿತ್ತು.

ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿಯ ಎಂ.ರಾಮಕೃಷ್ಣ ಅವರು ಕನ್ನಡ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಮಾತನಾಡಿ ಪ್ರಪಂಚದಲ್ಲೇ ಶ್ರೀಮಂತ ಭಾಷೆ ನಮ್ಮದಾಗಿದ್ದು, ಕನ್ನಡ ನಾಡು ನುಡಿ ಭಾಷೆ ಗಡಿ ವಿಚಾರದಲ್ಲಿ ಕನ್ನಡಿಗರು ಸದಾ ಜಾಗರೂಕತೆಯಿಂದ ಇರಬೇಕಾಗಿದೆ. ಬೆಳಗಾವಿ ವಿಚಾರದಲ್ಲಿ ಎಂಇಎಸ್ ಪುಂಡಾಟಿಕೆಯನ್ನು ನಾವೆಂದು ಸಹಿಸುವುದಿಲ್ಲ. ಕನ್ನಡ ಮುಕುಟ ಬೆಳಗಾವಿ ಎಂದೆಂದಿಗೂ ಕನ್ನಡಿಗರದ್ದು. ನಾಡಿನ ಕವಿಗಳು, ಸಾಹಿತಿಗಳು, ಬರಹಗಾರರು ಗಡಿ ಭಾಷೆಯ ವಿಷಯದಲ್ಲಿ ಸದಾ ಮುಂಚೂಣಿಯಲ್ಲಿದ್ದು ಅಖಂಡ ಕರ್ನಾಟಕದ ಏಳಿಗೆಗಾಗಿ ಶ್ರಮಿಸುತ್ತಿದ್ದು ಕೇಂದ್ರ ಸರ್ಕಾರವು ನಾಡಿಗೆ ಗಡಿ ವಿಚಾರದಲ್ಲಿ ಅನ್ಯಾಯವಾಗದ ಹಾಗೆ ತೀರ್ಮಾನ ಕೈಗೊಳ್ಳುವ ಮೂಲಕ ನಾಡಿನ ಒಕ್ಕೊರಲಿನ ಮನವಿಯನ್ನು ಪುರಸ್ಕರಿಸಬೇಕು ಎಂದರು.

ಚಾಮರಾಜ ಬಿಜೆಪಿ ಮುಖಂಡ ಎಲ್.ಚೌಡಪ್ಪ, ಕೆ. ಉಮಾಶಂಕರ್ ಅವರಿಗೆ ನೆನಪಿನ ಕಾಣಿಕೆ ನೀಡಿ, ಸನ್ಮಾನಿಸಿದರು. ಈ ಸಂದರ್ಭದಲ್ಲಿ ಪಡುವಾರಹಳ್ಳಿ ಗ್ರಾಮಾಭ್ಯುದಯ ಟ್ರಸ್ಟ್ ಕಾರ್ಯದರ್ಶಿ ಎಂ.ಭೈರಪ್ಪ, ಪಾಲಿಕೆ ಸದಸ್ಯ ಎಂ.ಚಿಕ್ಕವೆಂಕಟು, ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಸ್.ಬಿ.ಶಿವು, ನಿರ್ದೇಶಕ ಗೋಕುಲಂನ ವಿ.ಮಧು, ದಿ ಮೈಸೂರು ಕೋಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಸಿ.ರೇವಣ್ಣ, ನಿರ್ದೇಶಕ ಹೆಚ್.ಹರೀಶ್ ಕುಮಾರ್, ಶಾಂತಿ, ಚಿರಂತನ್, ಅವಿ, ಯತಿ, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರಾದ ಈ.ಲೋಕೇಶ್ವರ, ಸೋಮಣ್ಣ, ಬಿ.ಕುಮಾರ್, ಸಿ.ಡಿ.ಕುಮಾರ್, ಸಂತೋಷ್, ರಾಘವ್ ಗೌಡ, ಅಭಿ ಚಿಕನ್ ಭೈರಪ್ಪ, ಕೇಬಲ್ ಕಿಟ್ಟಿ, ಯೋಗಾ ನರಸಿಂಹೇಗೌಡ, ಬಿ.ಶಂಭುಲಿಂಗ, ಕುಮಾರ್, ಪೈ. ನಾಗರಾಜು, ಗಿರೀಶ್, ಎಂ.ಸಿ.ಕುಮಾರ್, ಸುರೇಂದ್ರ, ಸುರೇಶ್, ಪ್ರಕಾಶ್, ಎಲ್.ಮಂಜು, ವೇಣು, ಚಾಮ, ಜಿತೇಂದ್ರ ಭಾಗವಹಿಸಿದ್ದರು.

ನಕ್ಕರೆ ಅದೇ ಸ್ವರ್ಗ

ಸ್ನೇಹಿತ : ನಿನ್ನ ಕತೆ ಕಾದಂಬರಿಗಳಿಗೆ ಒಳ್ಳೆಯ ಹೆಸರಿದೆಯಂತೆ. ಇತ್ತೀಚೆಗೆ ಯಾವುದಾದರೂ ಹೆಚ್ಚು ಮಾರಾಟವಾಗಿದೆಯೇ?

ಆತ : ಹೌದು. ನನ್ನ ವಾಚು, ಮನೆ, ಕುರ್ಚಿ, ಮೇಜು, ಪಾತ್ರೆಗಳು ಮಾರಾಟವಾಗಿವೆ!

ಮೈಸೂರು ಮಿತ್ರ

ಬುಧವಾರ, 21 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಒಂದು ಒಳ್ಳೆಯ ಗ್ರಂಥ. ಒಬ್ಬ ಪ್ರತಿಭಾವಂತನ ಸಾರ ಸಂಗ್ರಹ

–ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದುಡೀಲಿಲ್ಲ. ದುಃಖ ಪಡಲಿಲ್ಲ, ಇರೋದೆಲ್ಲಾ ನಂದೇ ಅಂದ

ನಿಮ್ಮ ಪತ್ರಗಳು

ಪಾಲಿಕೆ ಸದಸ್ಯೆಯ ಶ್ಲಾಘನೀಯ ಕಾರ್ಯ!

ಮಾನ್ಯರೇ,

ಮೈಸೂರು ಮಹಾನಗರಪಾಲಿಕೆ ವಾರ್ಡ್ ನಂ.19ರ ಅನುದಾನದಲ್ಲಿ ವಿ.ವಿ. ಮೊಹಲ್ಲಾದ ವಿಸಿ ಕ್ಲಬ್ ಹಿಂಭಾಗ ಕನ್ಸರ್ವೆನ್ಸಿ ರಸ್ತೆಯಲ್ಲಿ ಒಳಚರಂಡಿಗೆ ಒಂದು ಅಡಿ ಅಗಲದ ಬೃಹತ್ ಕಾಂಕ್ರೀಟ್ ಪೈಪ್ ಅಳವಡಿಸುವ ಕಾಮಗಾರಿ ಪಾಲಿಕೆ ಸದಸ್ಯೆ ಭಾಗ್ಯ ಮಹದೇಶ್ ನೇತೃತ್ವದಲ್ಲಿ ನಡೆಯುತ್ತಿದೆ. ಈ ಹಿಂದೆ ಆರು ಇಂಚು ಅಗಲದ ಪೈಪ್ ಅಳವಡಿಸಲಾಗಿತ್ತು. ಮಳೆ ಬಂದಾಗಲೆಲ್ಲಾ ನೀರು ಮನೆ ಒಳಗೆ ನುಗ್ಗಿ ಅವಾಂತರ ಆಗುತ್ತಿತ್ತು. ಇದರಿಂದ ರೋಸಿ ಹೋಗಿ ಬೇಸತ್ತಿದ್ದ ಸ್ಥಳೀಯ ಸಾರ್ವಜನಿಕರು ಭಾಗ್ಯ ಮಹದೇಶ್ ಅವರ ಬಳಿ ಬಂದು ಅಳಲನ್ನು ತೋಡಿಕೊಂಡಿದ್ದರು.



ಇದನ್ನು ಗಮನಿಸಿದ ಭಾಗ್ಯ ಮಹದೇಶ್ ತಮ್ಮ ಶಕ್ತ್ಯಾನುಸಾರ ಸ್ಥಳವನ್ನು ಪರಿಶೀಲಿಸಿ ಪಾಲಿಕೆ ಅಧಿಕಾರಿಗಳನ್ನು ಸಂಪರ್ಕಿಸಿ ಕಾಮಗಾರಿಗೆ ಚಾಲನೆ ನೀಡಿದ್ದಾರೆ. ಇದು ಪೂರ್ಣಗೊಂಡರೆ ಇನ್ನು ಕನಿಷ್ಠ 20 ವರ್ಷ ಯಾವುದೇ ಒಳಚರಂಡಿ ಸಮಸ್ಯೆ ಇರುವುದಿಲ್ಲ. ಜನರ ಸಮಸ್ಯೆಗೆ ಶೀಘ್ರ ಸ್ಪಂದಿಸಿದ ಭಾಗ್ಯ ಮಹದೇಶ್ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

–ಜಿ.ಪಿ.ರಾಜೇಶ್, ಸಮಾಜ ಸೇವಕ, ವಿ.ವಿ.ಮೊಹಲ್ಲಾ, ಮೈಸೂರು

ಶೀಘ್ರ ಅಶೋಕಪುರಂ ರೈಲು ನಿಲ್ದಾಣ ಕಾಮಗಾರಿ ಪೂರ್ಣ ಸ್ವಾಗತಾರ್ಹ

ಮಾನ್ಯರೆ,

ಮೈಸೂರಿನ ಅಶೋಕಪುರಂ ರೈಲು ನಿಲ್ದಾಣದ ಕಾಮಗಾರಿಯನ್ನು ಆದಷ್ಟು ಬೇಗ ಪೂರ್ಣಗೊಳಿಸುವ ಭರವಸೆ ರೈಲ್ವೆ ಪ್ರಯಾಣಿಕರಿಗೆ ಸಂತಸ ತಂದಿದೆ. ಸದ್ಯ ಇರುವ ಮೂರು ಪ್ಲಾಟ್‌ಫಾರಂ ಜೊತೆಗೆ ಮತ್ತೆರಡು ಪ್ಲಾಟ್‌ಫಾರಂ ಮಾಡುತ್ತಿರುವುದು ಒಳ್ಳೆಯ ಕೆಲಸ. ಬೆಂಗಳೂರಿನಿಂದ ಮೈಸೂರಿಗೆ ಈಗಾಗಲೇ ಸಾಕಷ್ಟು ರೈಲುಗಳು ಇದ್ದರೂ ಇನ್ನೂ ಹೆಚ್ಚುವರಿ ರೈಲುಗಳನ್ನು ಬಿಡಲು ಅನುಕೂಲವಾಗುತ್ತದೆಯಲ್ಲದೆ ಹೆಚ್ಚು ಜನರು ರೈಲಿನಲ್ಲಿ ಪ್ರಯಾಣಿಸಲು ಸಹಾಯವಾಗುತ್ತದೆ. ಮುಂದಿನ 50 ವರ್ಷಗಳ ಪ್ರಯಾಣಿಕರ ಓಡಾಟವನ್ನು ಗಮನದಲ್ಲಿಟ್ಟುಕೊಂಡು ಅಶೋಕಪುರಂ ರೈಲು ನಿಲ್ದಾಣವನ್ನು ಮೇಲ್ದರ್ಜೆಗೇರಿಸಿ ಅಭಿವೃದ್ಧಿಪಡಿಸಲಾಗುವುದು ಮತ್ತು ಪ್ರಯಾಣಿಕರಿಗೆ ಅನುಕೂಲವಾಗಲು ಮೇಲ್ಸೇತುವೆ ನಿರ್ಮಾಣ ಮಾಡಲಾಗುತ್ತದೆ ಎಂದು ಕಾಮಗಾರಿ ಪರಿಶೀಲಿಸುವ ವೇಳೆ ಯುವ ಸಂಸದ ಪ್ರತಾಪ್ ಸಿಂಹ ಅವರು ಹೇಳಿರುವುದು ಸ್ವಾಗತಾರ್ಹ.

–ಬೆಸಗರಹಳ್ಳಿ ರವಿ ಪ್ರಸಾದ್, ಕೆ ಸಿ ನಗರ, ಮೈಸೂರು


ಮೈಸೂರು ಮಹಾನಗರಿಯೋ ಬೆಂಗಳೂರು ಮಹಾನಗರಿಯೋ?

ಮಾನ್ಯರೆ,

ಇತ್ತೀಚೆಗೆ ಮೈಸೂರು ನಗರದಲ್ಲಿ ದಿನದ ಬಸ್ ಪಾಸ್ ದರವನ್ನು ರೂ. 60 ರಿಂದ 80 ರೂ.ಗೆ ಏರಿಸಲಾಗಿದೆ. ಬೆಂಗಳೂರಿನಲ್ಲಿ ಬಿಎಂಟಿಸಿಯಲ್ಲೇ ದಿನದ ಬಸ್ ಪಾಸ್ ದರ ರೂ. 70 ಇದೆ. ಇದನ್ನೆಲ್ಲಾ ನೋಡುತ್ತಿದ್ದರೆ ಬೆಂಗಳೂರಿಗಿಂತ ಮೈಸೂರು ಮಹಾನಗರಿಯೇ ಎನಿಸುತ್ತದೆ. ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳು ಹಳೆಯ ದಿನದ ಬಸ್ ಪಾಸ್ ದರ ರೂ. 60 ನಿಗದಿಪಡಿಸಿ ಬಡ ಕಾರ್ಮಿಕರ, ಹಿರಿಯ ನಾಗರಿಕರ, ಶಾಲಾ ವಿದ್ಯಾರ್ಥಿಗಳ ಹಿತ ಕಾಪಾಡಬೇಕೆಂದು ಮನವಿ.

– ನೊಂದ ಪ್ರಯಾಣಿಕರು, ಮೈಸೂರು.

ಡಿವೈಡರ್ ಎತ್ತರ ಹೆಚ್ಚಿಸಿ, ಅಪಘಾತ ತಪ್ಪಿಸಿ



ಮಾನ್ಯರೆ,

ಮೈಸೂರು–ಬೆಂಗಳೂರು ಮುಖ್ಯ ರಸ್ತೆಯ ಗಾಂಧಿನಗರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಫೌಂಟೇನ್ ವೃತ್ತದವರೆಗೂ ಸುಮಾರು ಎರಡೂವರೆ ಅಡಿ ಎತ್ತರದ ಕಾಂಕ್ರೀಟ್ ನಿರ್ಮಿತ ರಸ್ತೆ ವಿಭಜಕವಿದ್ದು, ಹಾಗೂ ಇದೇ ಫೌಂಟೇನ್ ವೃತ್ತದಿಂದ ಟಿ.ಎನ್. ನರಸಿಂಹಮೂರ್ತಿ ವೃತ್ತದವರೆಗೂ (ಎಲ್‌ಐಸಿ) ಕೇವಲ ಒಂದು ಅಡಿ ಎತ್ತರದ ಡಿವೈಡರ್ ಇರುವುದು ಸರಿಯಷ್ಟೆ, ಸದರಿ ಮುಖ್ಯ ರಸ್ತೆಯಲ್ಲಿ ಸದಾ ವಾಹನ ಸಂಚಾರ ಅಧಿಕವಾಗಿರುತ್ತದೆ. ವಾಹನ ಸವಾರರು ತಮ್ಮ ನಿಯಂತ್ರಣದಲ್ಲಿ ಏಕಾಗ್ರತೆಯಿಂದ ವಾಹನ ಚಲಾಯಿಸುತ್ತಾರೆ. ಆದರೆ ಚಿತ್ರದಲ್ಲಿರುವಂತೆ ಕೆಲವು ದ್ವಿಚಕ್ರ ವಾಹನ ಸವಾರರು ವೃತ್ತ ಬಳಸದೆ ಡಿವೈಡರ್ ಭೇದಿಸಿ ಏಕಾಏಕಿ ಅಡ್ಡಾದಿಡ್ಡಿಯಾಗಿ ವಾಹನ ಚಲಾಯಿಸಿಕೊಂಡು ರಸ್ತೆಗೆ ಅಡ್ಡಲಾಗಿ ನುಗ್ಗುತ್ತಾರೆ. ರಸ್ತೆಯಲ್ಲಿ ಸಂಚರಿಸುವಂತಹ ವಾಹನ ಸವಾರರು ನಿಯಂತ್ರಣ ಕಳೆದುಕೊಂಡು ಅಪಘಾತ ಸಂಭವಿಸುವುದುಂಟು. ಈ ಕೂಡಲೇ ನಗರ ಪೊಲೀಸ್ ಆಯುಕ್ತರು ಫೌಂಟೇನ್ ವೃತ್ತದಿಂದ ಟಿ.ಎನ್. ನರಸಿಂಹಮೂರ್ತಿ ವೃತ್ತದವರೆಗೂ ಡಿವೈಡರ್ ಎತ್ತರ ಹೆಚ್ಚಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಿ ಎಂಬುದು ನಮ್ಮ ಆಶಯ.

–ಎಸ್. ರಾಜಗೋಪಾಲ್, ಗಾಂಧಿನಗರ, ಮೈಸೂರು.



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಭಗವದ್ಗೀತಾ ಮಹಾದರ್ಶನ

ಭಗವದ್ಗೀತೆ ಮಹಾಭಾರತವೆಂಬ ಅಮೃತಫಲದ ತಿರುಳು. ಅದು ಉಪನಿಷತ್ತುಗಳೆಂಬ ಗೋವುಗಳ ಕ್ಷೀರವೂ ಆಗಿದೆ. ಅದನ್ನು ಎಷ್ಟೋ ಕೋಟಿ ಜನ ಓದಿದ್ದಾರೆ, ಎಷ್ಟೋ ಲಕ್ಷ ಜನಗಳು ಅದರಿಂದ ಸ್ಫೂರ್ತಿಯನ್ನು ಪಡೆದಿದ್ದಾರೆ. ಎಷ್ಟೋ ಸಹಸ್ರ ವಿದ್ವಾಂಸರು ಅದರ ಭಾಷ್ಯಗಳನ್ನೂ ವ್ಯಾಖ್ಯಾನಗಳನ್ನೂ ವಿವರಣೆಗಳನ್ನೂ ಬರೆದಿದ್ದಾರೆ. ಕೆಲವರು ಅದನ್ನು ವಿರೋಧಿಸಿ ಖಂಡಿಸಿದ್ದಾರೆ. ಜಗತ್ತಿನ ಸಂಸ್ಕೃತಿಯ ಅಧ್ಯಯನವನ್ನು ಮಾಡುವ ಯಾರೂ ಅದನ್ನು ಕಡೆಗಣಿಸುವಂತಿಲ್ಲ.

ಮಹಾಭಾರತದ ಭೀಷ್ಮ ಪರ್ವದ ಆರಂಭದಲ್ಲಿರುವ, ಏಳುನೂರು ಪದ್ಯಗಳಿರುವ ಭಗವದ್ಗೀತೆ ಯೋಗಶಾಸ್ತ್ರವೆಂದು ಪ್ರಸಿದ್ಧವಾಗಿದೆ. ಅದರ ಒಂದೊಂದು ಅಧ್ಯಾಯವನ್ನೂ ಒಂದೊಂದು ಯೋಗವೆಂದು ಕರೆಯುವ ಸಂಪ್ರದಾಯವಿದೆ. ಮೂಲ ಮಹಾಭಾರತದಲ್ಲಿ ಈ ಹೆಸರುಗಳಿಲ್ಲ. ಅಲ್ಲಿ ಕೇವಲ ಪ್ರಥಮಾಧ್ಯಾಯ, ದ್ವಿತೀಯಾಧ್ಯಾಯ ಎಂದು ಹೇಳಿದೆ. ಶ್ರೀಕೃಷ್ಣನನ್ನು ಗ್ರಂಥದಲ್ಲಿ ಯೋಗೇಶ್ವರ ಎಂದೂ ಕರೆದಿದ್ದಾರೆ. ಆದ್ದರಿಂದ ಇದು ಶಾಸ್ತ್ರ ಎಂದು ನಾವು ಭಾವಿಸಿದರೆ ತಪ್ಪಲ್ಲ.

ಆದರೂ ಇದರಲ್ಲಿ ಕಾವ್ಯ ಗುಣಗಳಿಗೂ ಕೊರತೆಯಿಲ್ಲ. ಇದರ ವಿಶ್ವರೂಪ ದರ್ಶನದ ಭಾಗವಂತೂ ಶ್ರೇಷ್ಠ ಕಾವ್ಯವೇ ಆಗಿದೆ. ಭಗವದ್ಗೀತೆ ಎಂಬ ಹೆಸರಿನಲ್ಲಿ ಗೀತೆ ಎಂಬ ಪದ ಇರುವುದರಿಂದ ಅದರ ಗೇಯ ಗುಣವೂ ವ್ಯಕ್ತವಾಗುತ್ತದೆ. ಇದರಲ್ಲಿ ಮುಖ್ಯ ಉದ್ದೇಶವಾಗಿರುವುದು ಭಗವತ್ ಸ್ವರೂಪವನ್ನು ತೋರಿಸುವುದೇ ಆಗಿರುವುದರಿಂದ ಇದು ದರ್ಶನವೂ ಮತ್ತು ದಾರ್ಶನಿಕ ಕೈಪಿಡಿಯೂ ಆಗಿದೆ. ದ್ವೈತಾದ್ವೈತಾದಿ ಸಕಲ ದರ್ಶನಕಾರರೂ ಭಗವದ್ಗೀತೆಯನ್ನು ಪ್ರಮಾಣ ಗ್ರಂಥವೆಂದು ಪರಿಗಣಿಸಿದ್ದಾರೆ.

ಮೈಸೂರಿನ ಮಹಾಕವಯಿತ್ರಿ ಡಾ.ಲತಾ ರಾಜಶೇಖರ್ ಭಗವದ್ಗೀತೆಯ ತತ್ವಗಳನ್ನು ಕಾವ್ಯ ರೂಪದಲ್ಲಿ ಚಿತ್ರಿಸಲು ರಚಿಸಿರುವ ಹೊಸ ಗ್ರಂಥ (2020ರಲ್ಲಿ ಪ್ರಥಮ ಮುದ್ರಣ) ಭಗವದ್ಗೀತಾ ಮಹಾದರ್ಶನ. ಇದು ಅವರ ಏಳನೆಯ ಮಹಾಕಾವ್ಯ.


ಇದಕ್ಕೂ ಮೊದಲು ಅವರು ಬುದ್ಧ ಮಹಾದರ್ಶನ, ಯೇಸು ಮಹಾದರ್ಶನ, ಮಹಾವೀರ ಮಹಾದರ್ಶನ, ಬಸವ ಮಹಾದರ್ಶನ, ಶ್ರೀ ರಾಮ ಮಹಾ ದರ್ಶನ, ಹನುಮ ಮಹಾದರ್ಶನ ಎಂಬ ಆರು ಮಹಾಕಾವ್ಯಗಳನ್ನು ರಚಿಸಿದ್ದಾರೆ ಎಂದು ಪ್ರೊ.ಕೆ.ಭೈರವಮೂರ್ತಿಗಳು ತಿಳಿಸಿದ್ದಾರೆ (ನಾನು ಅವುಗಳನ್ನು ನೋಡಿಲ್ಲ). ಯಾವ ಭಾಷೆಯಲ್ಲಾದರೂ ಏಳು ಮಹಾಕಾವ್ಯಗಳನ್ನು ರಚಿಸುವುದು ಸಾಮಾನ್ಯ ಕಾರ್ಯವಲ್ಲ. ಕನ್ನಡಕ್ಕಂತೂ ಇದು ದೊಡ್ಡ ಕೊಡುಗೆ. ಇಷ್ಟು ವಿಪುಲವಾಗಿ ನಮ್ಮ ಸಾಹಿತ್ಯ ಬೆಳೆಯುತ್ತಿರುವುದು, ಅದರಲ್ಲಿ ಮಹಿಳೆಯರು ಮುಖ್ಯ ಪಾತ್ರವನ್ನು ವಹಿಸುತ್ತಿರುವುದು ಶುಭ ಲಕ್ಷಣ.

ವೇದಕಾಲದಲ್ಲಿ ಅನೇಕ ಬ್ರಹ್ಮವಾದಿನಿಯರಿದ್ದು ಅನೇಕ ಮಂತ್ರಗಳಿಗೆ ಅವರೇ ಋಷಿಗಳು. ಶೌನಕ ಮಹರ್ಷಿ ವಿರಚಿತವಾದ **ಬೃಹದ್ದೇವತಾ** ಎಂಬ ಗ್ರಂಥದಲ್ಲಿ ಆ ಮಹಿಳಾ ಋಷಿಗಳ ಹೆಸರುಗಳನ್ನು ದಾಖಲಿಸಿದ್ದಾರೆ.

ಘೋಷಾ ಗೋಧಾ ವಿಶ್ವವಾರಾ
ಅಪಾಲೋಪನಿಷನ್ನಿಷತ್ ।
ಬ್ರಹ್ಮಜಾಯಾ ಜುಹೂರ್ನಾಮ
ಅಗಸ್ತ್ಯಸ್ಯ ಸ್ವಸಾದಿತಿಃ॥
ಇಂದ್ರಾಣೀ ಚೇಂದ್ರಮಾತಾ ಚ
ಸರಮಾರೋಮಶೋರ್ವಶೀ।
ಲೋಪಾಮುದ್ರಾ ಚ ನದ್ಯಶ್ಚ
ಯಮೀ ನಾರೀಚ ಶಾಶ್ವತೀ॥
ಶ್ರೀರ್ಲಾಕ್ಷಾ ಸಾರ್ಪರಾಜ್ಞೀ ವಾಕ್
ಶ್ರದ್ಧಾ ಮೇಧಾ ಚ ದಕ್ಷಿಣಾ।
ರಾತ್ರೀ ಸೂರ್ಯಾಚ ಸಾವಿತ್ರೀ
ಬ್ರಹ್ಮವಾದಿನ್ಯ ಈರಿತಾಃ॥

ಕಾವ್ಯ ಮೀಮಾಂಸೆಯನ್ನು ರಚಿಸಿದ ರಾಜಶೇಖರನ ಪತ್ನಿ ಅವಂತಿ ಸುಂದರೀ ಕವಿಯೂ ವಿಮರ್ಶನವಿಚಕ್ಷಣಳೂ ಆಗಿದ್ದಳಂತೆ. ಆಕೆಯ ಹಲವು ಅಭಿಪ್ರಾಯಗಳನ್ನು ರಾಜಶೇಖರನು ತನ್ನ ಗ್ರಂಥದಲ್ಲಿ ದಾಖಲಿಸಿದ್ದಾನೆ. ಹದಿನಾಲ್ಕನೆಯ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿ ಕಂಪಣನ ಪತ್ನಿ ಗಂಗಾದೇವಿ **ಮಧುರಾ ವಿಜಯಮ್** ಎಂಬ ಮಹಾಕಾವ್ಯವನ್ನು ಸಂಸ್ಕೃತದಲ್ಲಿ ಮನೋಜ್ಞವಾಗಿ, ಪಾಂಡಿತ್ಯಪೂರ್ಣವಾಗಿ ರಚಿಸಿ ತನ್ನ ಪತಿ ಮಧುರೆಯನ್ನು ಗೆದ್ದ ಚರಿತೆಯನ್ನು ವರ್ಣಿಸಿದ್ದಾಳೆ.

ಡಾ.ಸಿ.ಪಿ.ಕೆ. ತಮ್ಮ ಮುನ್ನುಡಿಯಲ್ಲಿ ಈ ಮಹಾಕಾವ್ಯವನ್ನು (ಭಗವದ್ಗೀತಾ ಮಹಾದರ್ಶನವನ್ನು) ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ. "ಅವರದು ತಪಸ್ಸಿದ್ಧಿ ಪೂರ್ವಕವಾದ ಸಪ್ತಶೃಂಗ ಸಾಹಸ; ಅವರು ಏಳು ಮಹಾಕಾವ್ಯಗಳ ಕರ್ತೃ. ಕಾಮನಬಿಲ್ಲಿನ ಕವಯಿತ್ರಿ ಇಂಥ ಬೋಧಪ್ರದ



ಸಾಧನೆಯನ್ನು ಜಾಗತಿಕ ಸಾಹಿತ್ಯದಲ್ಲಿ ಬೇರೆ ಪುರುಷನಾಗಲಿ, ಸ್ತ್ರೀಯಾಗಲಿ ಮಾಡಿಲ್ಲ. ಇದು 'ಅದೃಷ್ಟ ಪೂರ್ವ' ಲೋಕ ದಾಖಲೆಯೇ ಸೈ! ತಮ್ಮೆಲ್ಲಾ ಮಹಾಕಾವ್ಯಗಳನ್ನು ಲತಾ ಮಹಾದರ್ಶನಗಳೆಂದೇ ಕರೆದುಕೊಂಡಿದ್ದಾರೆ. ಈ ವಿಶೇಷಣ ಈ ಕೃತಿಗೆ ಸಮುಚಿತವಾಗಿ ಒಪ್ಪುತ್ತದೆ. ಈ ಭಗವದ್ಗೀತೆ 'ಮಹಾ' ಅಲ್ಲದಿದ್ದರೆ ಮತ್ತಾವುದು ತಾನೆ ಮಹಾ?"

ಪ್ರವಹಿಸಿತಾ ಭಗವದ್ಗೀತೆ ದೇವಗಂಗಾ ಸಲಿಲದಂತೆ ಎಂಬ ಮೊದಲನೆಯ ಸೋಪಾನದಲ್ಲಿ ಮಹಾಕವಯಿತ್ರಿ ಬರೆದಿದ್ದಾರೆ–

"ಭಾಗ್ಯದ ಬೆಳೆಯಂತೆ,
ಯೋಗದ ಪ್ರಭೆಯಂತೆ,
ಪುಣ್ಯದ ತೆನೆಯಂತೆ,
ಧನ್ಯತಾ ಕೆನೆಯಂತೆ, ಅದೃಷ್ಟದ
ಗಿರಿಯಂತೆ, ಸುಕೃತದ ಸಿರಿಯಂತೆ,
ಒದಗಿತೆನಗಿಂತು ಪರಮ ಸೌಭಾಗ್ಯವು.
ರಚಿಸಲೀ ಪರಿಯಲೆನ್ನ ಸಪ್ತ
ಮಹಕಾವ್ಯಗಳನು ಭಗವಂತನ
ಕೃಪೆಯಿಂದಲಿ, ನಿಜದಿ.

"ಮೊಳೆತು ಬುದ್ಧನಲಿ, ಚಿಗಿತು
ಯೇಸುವಲಿ, ಮೂಡಿ ಶಾಖೆಗಳು
ಬಸವನಲಿ, ಮೊಗ್ಗಾಗಿ
ಮಹಾವೀರನಲಿ, ಸುಮವರಳಿ
ಶ್ರೀರಾಮನಲಿ, ಕಾಯಿ ತಳೆದು
ಹನುಮನಲಿ, ಸ್ವಾದು ಫಲವಾಯ್ತು
ಎನ್ನಾಸೆಯೀ ದಿವ್ಯ ಶ್ರೀಕೃಷ್ಣ
ಗೀತೆಯಲಿ"

ಯಾವ ಮತಧರ್ಮದ ಕೋಟೆಯೊಳಗೂ ಸೇರಿಕೊಳ್ಳದೆ ಸರ್ವಧರ್ಮಗಳನ್ನೂ, ಸರ್ವಮತಾಚಾರ್ಯರನ್ನೂ ಸಮನಾಗಿ ಕಾಣುವ ಸಮನ್ವಯ ದೃಷ್ಟಿಯನ್ನು ಇಲ್ಲಿ ಕಾಣಬಹುದು. ಇದು ಈ ಕವಯಿತ್ರಿಯ ವಿಶಾಲ ಮನೋಧರ್ಮದ ಪ್ರತೀಕ. ಭಗವದ್ಗೀತೆ ಇಂತಹ ಸಮನ್ವಯ ದೃಷ್ಟಿಯ ಪ್ರತೀಕ. ಸಮಸ್ತ ದೇವತೆಗಳೂ ಶ್ರೀಕೃಷ್ಣನಲ್ಲಿವೆ. ಯಾರನ್ನು ಪೂಜಿಸಿದರೂ ಆ ಪೂಜೆ ಕೃಷ್ಣನಿಗೆ ಸಲ್ಲುತ್ತದೆ–ಎಂಬುದಿಲ್ಲಿ ಪ್ರಧಾನ ತತ್ವ.

ಈ ಗ್ರಂಥದಲ್ಲಿ ಡಾ. ಲತಾ ಅವರು ಭಗವದ್ಗೀತೆಯ ಮೂಲ ಸಂಸ್ಕೃತ ಶ್ಲೋಕವನ್ನೂ ಅದರ ಭಾವಾರ್ಥವನ್ನೂ ಕೊಟ್ಟು ಆಮೇಲೆ ಅದರ ಕಾವ್ಯರೂಪವನ್ನು ಕೊಟ್ಟಿದ್ದಾರೆ. ಉದಾಹರಣೆ (ಪು. 124–125).

ಏಷಾ ಬ್ರಾಹ್ಮೀ ಸ್ಥಿತಿಃ ಪಾರ್ಥ ನೈನಾಂ
ಪ್ರಾಪ್ಯ ವಿಮುಹ್ಯತಿ।
ಸ್ಥಿತ್ವಾಸ್ಯಾಮಂತ ಕಾಲೇಪಿ
ಬ್ರಹ್ಮನಿರ್ವಾಣಮೃಚ್ಛತಿ ॥72॥

"ಅರ್ಜುನ, ಬೀಳನು ಮೋಹಕೆ ಮತ್ತೆ
ಇದ ಪಡೆದುಕೊಂಡವನು. ಇದ್ದರೂ
ಅವನು ಅಂತ್ಯ ಕಾಲದಲಿ ಈ
ಸ್ಥಿತಿಯಲಿ, ಪಡೆದುಕೊಳ್ಳುವನವನು
ಬ್ರಹ್ಮನಿರ್ವಾಣವನು"

ಬ್ರಾಹ್ಮೀ ಸ್ಥಿತಿ ಎನೆ, ಬ್ರಹ್ಮನ ಆಧಾರದ ಮೇಲೆ ನೆಲೆಸಿಹುದು. ಬ್ರಹ್ಮಾನುಭವದಿಂದ ಲೋಕದಲ್ಲಿ ಬಾಳುವುದು. ಜೇನು ತಪ್ಪದಿ ತೋಯ್ದ ಪಕ್ವಫಲದಂತೆ ನೋಡಿದರೆಲ್ಲೆಲ್ಲೂ ಆ ಸವಿಯೇ ತುಂಬಿಹುದು. ಪಡೆದುಕೊಂಡರೊಮ್ಮೆ ಈ ಸ್ಥಿತಿಯನು, ಬೀಳನು ಅವನಿನ್ನು ಮತ್ತೆ ಆ ಮೋಹ ಕುಂಡಕೆ. ತಿಳಿದ ಬಳಿಕದಲ್ಲದನು ಜೊಂಡೆಂದು ಸವಿಯದಂತೆ ಅವನದನು ಕಬ್ಬೆಂದು, ಹೋಗನವನು ಮರಳಿ ಹಿಂದಿನ ಸ್ಥಿತಿಗೆಂದೂ! ಇದ್ದರವ ನೀ ಸ್ಥಿತಿಯಲ್ಲಿ ಕೊನೆಗಳಿಗೆಯಲೂ, ಹೊಂದುವನವನು ಬ್ರಹ್ಮನಿರ್ವಾಣವನು. ಅಂತೆಂದು ಒದಗದಂತಹ ಸ್ಥಿತಿಯು ಕೊನೆ ಕ್ಷಣದಿ ಮಾಡದಿದ್ದರೆ ಸಾಧನೆಯನು ಆ ಪೂರ್ವದಲಿ.

ಇಂತು ಉಪದೇಶಿಸಿದ
ಶ್ರೀಕೃಷ್ಣ ಅರ್ಜುನಗೆ
ಅವನು ಕೇಳಿದ ಸ್ಥಿತಪ್ರಜ್ಞನ ಲಕ್ಷಣಗಳ
ಕುರಿತು, ನೀಡುವಂತೆ ಸವಿಫಲವನು,
ಬಿಡಿಸಿಯದರ ಸಿಪ್ಪೆಯನು.

ಇಪ್ಪತ್ತನೆಯ ಶತಮಾನದಲ್ಲಿ ಕನ್ನಡದಲ್ಲಿ ಮಹಾಕಾವ್ಯಗಳ ಹೊಸ ಪರಂಪರೆ ಆರಂಭವಾಯಿತು. ಇದು ದಂಡಿ, ಭಾಮಹ ಮುಂತಾದ ಲಾಕ್ಷಣಿಕರು ಲಕ್ಷಿಸಿದ ಮಹಾಕಾವ್ಯಕ್ಕಿಂತ ಭಿನ್ನವಾದುದು. ಇಲ್ಲಿ ಸರ್ಗಬಂಧ ಎನ್ನುವ ಹೆಸರನ್ನು ಅನ್ವಯಿಸಲಾಗದು. ನಗರಾದಿ ಅಷ್ಟಾದಶ ವರ್ಣನೆಗಳೂ ಇರಬೇಕೆಂಬ ನಿಯಮವಿಲ್ಲ. ಪ್ರಸ್ತುತ ಭಗವದ್ಗೀತಾ ಮಹಾದರ್ಶನದ ಬಗೆಗೆ ಸಿಪಿಕೆ ಛಂದಸ್ಸನ್ನು ಕುರಿತು ಹೀಗೆಂದಿದ್ದಾರೆ–

ಛಂದಸ್ಸಿನ ದೃಷ್ಟಿಯಿಂದ ಒಂದು ಕೊರತೆಯನ್ನು ಸೂಚಿಸಬೇಕು. ಸರಳ ಭಾಷೆಯಂತೆ ಸರಳ ರಗಳೆಯ ಲಯವನ್ನು ನಿಯತವಾಗಿ ಬಳಸಿದ್ದರೆ ಚೆನ್ನಾಗಿತ್ತು. ನಿಯತತೆ ಇಲ್ಲದಿರುವುದರಿಂದ ಅನೇಕ ಕಡೆ Music of Poetry ಹಿಂದೆ ಬಿದ್ದು 'ಗದ್ಯಲಯ' ಎದ್ದು ಕಾಣುತ್ತದೆ (ಅಥವಾ ಕೇಳುತ್ತದೆ). ಆದರೆ ರುಂದ್ರ ದರ್ಶನ– ಅದು ಮೂಲದ್ದೂ ಹೌದು–ಇದೇನೂ ಕುಂಠಿತಗೊಳಿಸದು; ದೊಡ್ಡ ಕಂಟಕವಂತೂ ಅಲ್ಲ!"

(ಪುಟ XIII)

ಕಾವ್ಯವು ಛಂದಸ್ಸಿನ ನಿಯಮಗಳಿಗೆ ಅನುಗುಣವಾಗಿ ರಚಿತವಾಗಿದೆಯೋ ಇಲ್ಲವೋ ಎಂಬುದು ಅದರ ಮಹತ್ತ್ವವನ್ನು ನಿಷ್ಕರ್ಷಿಸುವ ನಿಕಷ (ಒರೆಗಲ್ಲು) ಆಗಬಾರದು. ಪ್ರತಿಪಾದಿತ ವಿಷಯದ ಗಾಂಭೀರ್ಯ, ವರ್ಣನೆಗೆ ಸ್ವೀಕೃತರಾದ ನಾಯಕಾದಿಗಳ ಔನ್ನತ್ಯ, ಧರ್ಮಾರ್ಥ ಕಾಮಮೋಕ್ಷಗಳ ನಿರೂಪಣೆ, ಲೋಕಕ್ಷೇಮದ ಮುಖ್ಯೋದ್ದೇಶ ಇತ್ಯಾದಿಗಳನ್ನು ಹೊಂದಿರುವ ಕಾವ್ಯ ಮಹಾಕಾವ್ಯ. ಈ ದೃಷ್ಟಿಯಿಂದ ಭಗವದ್ಗೀತಾಮಹಾ ದರ್ಶನ ಮಹಾಕಾವ್ಯ. ಪಾಂಡಿತ್ಯ ಪ್ರದರ್ಶನವೇ ಪ್ರಯೋಜನವಾದ ಶ್ಲೇಷ–ಯಮಕ–ಪದ್ಮಬಂಧ ಮುಂತಾದವು ಇಲ್ಲದಿರುವುದೂ ಒಳ್ಳೆಯದೇ. ಅವು ಸಹೃದಯರ ಗಮನವನ್ನು ತಮ್ಮತ್ತ ಸೆಳೆದು ಮುಖ್ಯ ವಸ್ತುವನ್ನು ಮರೆಸಿಬಿಡುತ್ತವೆ.

ಕಾವ್ಯದಲ್ಲಿ ರಸವಿರಬೇಕು, ನೀರಸವಾದ ವಾಕ್ಯವಿರಬಹುದು, ಆದರೆ ಕಾವ್ಯ ಎಂದೂ ನೀರಸವಾಗಬಾರದು. ಭಗವದ್ಗೀತೆಯಲ್ಲಿ ಶೃಂಗಾರ, ಹಾಸ್ಯ ಮುಂತಾದ ರಸಗಳಿಗೆ ಅವಕಾಶವೇ ಇಲ್ಲ ಅದನ್ನು ಆಧಾರವಾಗಿ ಇಟ್ಟುಕೊಂಡಿರುವುದು ಹೇಗೆ ಮಹಾಕಾವ್ಯವಾದೀತು? ಎಂಬ ಪ್ರಶ್ನೆಗೆ ಉತ್ತರ–ಇಲ್ಲಿ ಭಕ್ತಿಯೇ ರಸ. ಭಕ್ತಿರಸಾಮೃತ ಸಿಂಧು, ಭಕ್ತಿ ರಸಾಯನ ಮುಂತಾದ ಗ್ರಂಥಗಳಲ್ಲಿ ಭಕ್ತಿಯು ರಸವೆಂದು ಪ್ರತಿಪಾದಿಸಲಾಗಿದೆ. ವಿಶ್ವ ರೂಪದರ್ಶನದಲ್ಲಿ ಅದ್ಭುತರಸದ ಅನುಭವ ಯಾರಿಗೆ ಆಗದು? ಆದ್ದರಿಂದ ಈ ಕಾವ್ಯ ನೀರಸವೆಂದು ಹೇಳುವುದೂ ಸರಿಯಲ್ಲ. ಭಕ್ತರಿಗೆ, ಜ್ಞಾನಾಪೇಕ್ಷಿಗಳಿಗೆ ಇದು ರಸದೌತಣ. ಕೃಷ್ಣನ ಸಂದೇಶವನ್ನು ಕನ್ನಡಿಗರಿಗೆ ತಲುಪಿಸುವ ಶಬ್ದನೌಕೆ.

ಡಾ. ಲತಾ ರಾಜಶೇಖರ್ ಅವರಿಂದ ಕನ್ನಡದ ಸಿರಿವಂತಿಕೆ ಹೆಚ್ಚಾಗಲಿ. ಅವರ ಲೇಖನಿ ವಿರಾಮವಿಲ್ಲದೆ ಬರೆಯುತ್ತಿರಲಿ. ಕನ್ನಡ ಕಾವ್ಯ ವೈವಿಧ್ಯಪೂರ್ಣವಾಗಿ ಮೆರೆಯುತ್ತಿರಲಿ. ಸಿರಿಗನ್ನಡಂ ಗೆಲ್ಗೆ.

ಹಾನಗಲ್ಲ ಕುಮಾರ ಶಿವಯೋಗಿಗಳ ಜೀವನ ಆಧರಿತ

ವಿರಾಟಪುರ ವಿರಾಗಿ ಚಿತ್ರದ ಧ್ವನಿಸುರುಳಿ ಬಿಡುಗಡೆ; ಕುಮಾರೇಶ್ವರ ರಥಯಾತ್ರೆಗೆ ಚಾಲನೆ

● ಶ್ರೀಗಳ ಸಮಾಜಸೇವೆಗೆ ಸಜ್ಜುಗೊಳಿಸಿದ್ದೆ ಮೈಸೂರು: ಡಾ. ಗೊ.ರು.ಚನ್ನಬಸಪ್ಪ ಸ್ಮರಣೆ

● ಅಜ್ಞಾತವಾಗಿದ್ದ ಚೇತನ ಸಮಾಜಕ್ಕೆ ಕುಸುಮವಾದ ಪರಿಚಿತ್ರದಲ್ಲಿ ಅನಾವರಣ: ಸುತ್ತೂರು ಶ್ರೀ

ಮೈಸೂರು,ಡಿ.20(ಎಂಟಿವೈ)–ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಹಾನಗಲ್ಲ ಕುಮಾರ ಶಿವಯೋಗಿಗಳ ಜೀವನ ಚರಿತ್ರೆ ಆಧಾರಿತ ವಿರಾಟಪುರ ವಿರಾಗಿ ಚಿತ್ರದ ಧ್ವನಿ ಸುರುಳಿ ಬಿಡುಗಡೆ, ಕುಮಾರೇಶ್ವರ ರಥಯಾತ್ರೆಗೆ ಚಾಲನೆ ನೀಡಲಾಯಿತು.

ಕಲಬುರ್ಗಿಯ ಶ್ರೀ ಗುರುದೇವ ಸೇವಾ ಸಂಸ್ಥೆ ವತಿಯಿಂದ ಸುತ್ತೂರು ಮಠದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಿರಿಯ ವಿದ್ವಾಂಸ ಡಾ.ಗೊ.ರು.ಚನ್ನಬಸಪ್ಪ ಚಿತ್ರದ ಧ್ವನಿಸುರುಳಿ ಬಿಡುಗಡೆ ಮಾಡಿ, ರಥಯಾತ್ರೆಗೆ ಚಾಲನೆ ನೀಡಿದ ಬಳಿಕ ಮಾತನಾಡಿ, ಮಠಮಾನ್ಯಗಳು ಜನರನ್ನು ಚಿಂತನಾಶೀಲರನ್ನಾಗಿಸಿ ಸಾಮಾಜಿಕ, ಧಾರ್ಮಿಕ, ಹಾಗೂ ಶೈಕ್ಷಣಿಕವಾಗಿ ಸಾತ್ವಿಕಗೊಳಿಸುವ ಪ್ರಮುಖ ಧ್ಯೇಯೋದ್ದೇಶದಿಂದ ಸೇವೆ ಒದಗಿಸುತ್ತಿವೆ. ಹಾನಗಲ್‌ನ ಕುಮಾರ ಶಿವಯೋಗಿಗಳು ಜೀವನ ಪರ್ಯಂತ ಜನರನ್ನು ಎಲ್ಲಾ ಕ್ಷೇತ್ರಗಳಲ್ಲೂ ಜಾಗೃತಗೊಳಿಸಿ ಸಾತ್ವಿಕಗೊಳಿಸುತ್ತಿದ್ದಾರೆ. ವೀರಶೈವ ಸಮಾಜಕ್ಕೆ ಅನನ್ಯ ಕೊಡುಗೆ ನೀಡಿರುವ ಕುಮಾರ ಶಿವಯೋಗಿಗಳ ಉಜ್ವಲ ಜೀವನದ ಪುನರ್ ದರ್ಶನ ಸಿನಿಮಾ ಮೂಲಕ ಇನ್ನಷ್ಟು ಜನರನ್ನು ತಲುಪುವ ಕೆಲಸ ಮಾಡಿರುವುದು ಶ್ಲಾಘನೀಯ ಎಂದು ಹೇಳಿದರು.

ಶ್ರೀಗಳನ್ನು ಸಮಾಜ ಸೇವೆಗೆ ಸಜ್ಜುಗೊಳಿಸಿದ ಶ್ರೇಯ ಮೈಸೂರು ಜಿಲ್ಲೆಗೆ ಸಲ್ಲುತ್ತದೆ. ಅವರ ಜೀವನ ಪರಿಚಯ ಈಗಾಗಲೇ ಆಗಬೇಕಿತ್ತು. ಈಗಲಾದರೂ ಆಗುತ್ತಿರುವುದು ಸಮಾಧಾನದ ಸಂಗತಿ. ಚಿತ್ರದಲ್ಲಿ ಪಾತ್ರಗಳ ಪುನರ್ ಸೃಷ್ಟಿ ಕಷ್ಟದ ಕೆಲಸ. ಅದನ್ನು ನಿರ್ದೇಶಕ ಲಿಂಗದೇವರು ಅಚ್ಚುಕಟ್ಟಾಗಿ ಮಾಡಿದ್ದಾರೆ. ಚಿತ್ರವನ್ನು ಕಲಾತ್ಮಕವಾಗಿ ರೂಪಿಸಲು ಸಾಕಷ್ಟು ಶ್ರಮ ಪಟ್ಟಿದ್ದಾರೆ. ಚಲನ ಚಿತ್ರ ಸಮಾಜದ ಪ್ರಭಾವಿ ಮಾಧ್ಯಮ. ಲಿಂಗದೇವರು ಅದನ್ನು ಶಿಕ್ಷಣ ಮಾಧ್ಯಮವಾಗಿ ಉತ್ತಮವಾಗಿ ಬಳಸಿಕೊಂಡಿದ್ದಾರೆ. ಇದು ಕಲಾತ್ಮಕ ಚಿತ್ರವಾದ್ದರಿಂದ ವ್ಯವಹಾರಿಕವಾಗಿ ನೋಡಲು ಆಗುವುದಿಲ್ಲ. ಹೀಗಾಗಿ ಸಮಾಜದ ಪ್ರತಿಯೊಬ್ಬರೂ ಚಿತ್ರ ವೀಕ್ಷಿಸಿ ಪ್ರೋತ್ಸಾಹ ನೀಡಬೇಕು. ಮಠಾಧೀಶರಾದವರು ಹೇಗೆ ತಮ್ಮ ಜವಾಬ್ದಾರಿ ನಿಭಾಯಿಸಬೇಕೆಂಬುದನ್ನು ಚಿತ್ರದಲ್ಲಿ ಕಟ್ಟಿಕೊಟ್ಟಿರುವುದರಿಂದ ಮಠಾಧೀಶರು ತಪ್ಪದೇ ಚಿತ್ರ ವೀಕ್ಷಿಸಬೇಕು. ಯಾವುದೋ ಒಂದು ಮಠ ಮಾಡುವ ತಪ್ಪಿನಿಂದ ಎಲ್ಲ ಮಠಗಳೂ ವ್ಯಂಗ್ಯ, ವಿಪರ್ಯಾಸ ಕ್ಕೀಡಾಗುತ್ತಿರುವುದು ಬೇಸರದ ಸಂಗತಿ. ಸಮಾಜವನ್ನು ಧಾರ್ಮಿಕವಾಗಿ ಸಾತ್ವಿಕಗೊಳಿಸಿ, ಶೈಕ್ಷಣಿಕವಾಗಿ ಸರಿದಾರಿಯಲ್ಲಿ ಮುನ್ನಡೆಸುವ ಕೆಲಸವನ್ನು ಮಠಗಳು ಮಾಡಬೇಕು ಎಂದು ಮನವಿ ಮಾಡಿದರು.



ಇದೇ ವೇಳೆ ನಿರ್ದೇಶಕ ಬಿ.ಎಸ್.ಲಿಂಗದೇವರು ಮಾತನಾಡಿ, ಮೂರು ವರ್ಷಗಳ ಪ್ರಯತ್ನದಿಂದ ವಿರಾಟಪುರ ವಿರಾಗಿ ಸಿನಿಮಾ ನಿರ್ಮಿಸಲಾಗಿದೆ. ಈ ಹಿಂದೆ ನಾನು ದೇವಾಲಯ, ಮಠಗಳಿಗೆ ಹೋಗಿರಲಿಲ್ಲ. ಆದರೂ ಗುರುಗಳ ಪ್ರೇರಣಾಶಕ್ತಿಯಿಂದ ಮಹಾಸಂತನ ಸಿನಿಮಾ ಮಾಡಿದ್ದೇನೆ. ಜಡೆಯ ಶಾಂತಲಿಂಗೇಶ್ವರ ಮಹಾಸ್ವಾಮಿಗಳು ಭಿಕ್ಷೆ ಬೇಡಿ ಸಿನಿಮಾ ನಿರ್ಮಾಣಕ್ಕೆ ಹಣ ನೀಡಿದ್ದಾರೆ. ಅವರ ಶ್ರಮಕ್ಕೆ ಸಾರ್ಥಕತೆ ಬರುವಂತೆ ಚಿತ್ರ ಮೂಡಿಬಂದಿದ್ದು, ಎಲ್ಲರೂ ವೀಕ್ಷಿಸಿ ಪ್ರೋತ್ಸಾಹ ನೀಡಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಸುತ್ತೂರು ಕ್ಷೇತ್ರ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಅನೇಕ ಕಾರಣದಿಂದ ಅಜ್ಞಾತವಾಗಿ ಉಳಿದು ಹೋಗಬೇಕಾಗಿದ್ದ ಚೇತನ ಸಮಾಜಕ್ಕೆ ಕುಸುಮವಾದ ಪರಿಯನ್ನು ವಿರಾಟಪುರ ವಿರಾಗಿ ಚಿತ್ರ ತೋರಿಸಲಿದೆ. ಕುಮಾರ ಶಿವಯೋಗಿಗಳು ವ್ಯಕ್ತಿಯಲ್ಲ ಅಗಾಧ ಶಕ್ತಿ ಎಂಬುದು ಚಿತ್ರ ವೀಕ್ಷಿಸಿದ ಬಳಿಕ ಅರ್ಥವಾಗಲಿದೆ. ಚಿತ್ರವನ್ನು ಎಷ್ಟು ಮಂದಿ ವೀಕ್ಷಿಸಿದರು, ಎಷ್ಟು ದಿನ ಪ್ರದರ್ಶನವಾಯಿತು ಎನ್ನು ವುದಕ್ಕಿಂತ ಇಂತಹ ಚಿತ್ರ ನಿರ್ಮಾಣವಾಗಿದ್ದೇ ದೊಡ್ಡ ಇತಿಹಾಸವಾಗಲಿದೆ ಎಂದು ಆಶಿಸಿದರು.

7 ಸಾವಿರ ಕಿ.ಮೀ ಸಂಚರಿಸಲಿರುವ ರಥ: 6 ರಥಗಳ ಮೂಲಕ ನಡೆಯುವ ಕುಮಾರೇಶ್ವರರ ರಥಯಾತ್ರೆ ಡಿ.20ರಿಂದ ಜ.1ರವರೆಗೆ 13 ದಿನಗಳ ಕಾಲ 7 ಸಾವಿರ ಕಿ.ಮೀ ಸಂಚರಿಸಲಿದೆ. ಈ ಅವಧಿಯಲ್ಲಿ 360 ಸಭೆಗಳು ನಡೆಯಲಿದ್ದು, 1 ಕೋಟಿ ಜನರು ರಥಯಾತ್ರೆಯಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಜ.1ರಂದು ಗದಗದಲ್ಲಿ ರಾಜ್ಯದ ಪ್ರಮುಖ ಮಠಾಧೀಶರು, ಜಾನಪದ ಕಲಾತಂಡಗಳ ಬೃಹತ್ ಮೆರವಣಿಗೆಯೊಂದಿಗೆ ಸಮಾರೋಪ ಸಮಾರಂಭ ನಡೆಯಲಿದೆ. ಕಾರ್ಯಕ್ರಮದಲ್ಲಿ ಶಾಂತಲಿಂಗೇಶ್ವರ ವಿರಕ್ತ ಮಠದ ಜಡೆಯ ಶಾಂತಲಿಂಗೇಶ್ವರ ಮಹಾಸ್ವಾಮಿ, ಕುಂದೂರು ಮಠದ ಡಾ.ಶರತ್ ಚಂದ್ರಸ್ವಾಮಿ, ಮೂಡಿ ಶಿವಲಿಂಗೇಶ್ವರ ವಿರಕ್ತಮಠದ ಸದಾಶಿವ ಮಹಾಸ್ವಾಮಿ, ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ನಂದೀಶ್ ಹಂಚೆ, ಚಿತ್ರದ ನಿರ್ದೇಶಕ ಬಿ.ಎಸ್.ಲಿಂಗದೇವರು, ಸಂಗೀತ ನಿರ್ದೇಶಕ ಮಣಿಕಾಂತ್ ಕದ್ರಿ, ಗಾಯಕ ರವೀಂದ್ರ ಸೊರಗಾವಿ ಉಪಸ್ಥಿತರಿದ್ದರು.

ನಾಳೆ ಬೃಹತ್ ಉದ್ಯೋಗ ಮೇಳ, ಸಂಗೀತ ಸಂಜೆ



ಮೈಸೂರು,ಡಿ.20(ಪಿಎಂ)–ರೋಟರಿ ಮೈಸೂರು ಉತ್ತರ, ಎನ್‌ಎಸ್ ಸೇವಾ ಟ್ರಸ್ಟ್, ಕರುನಾಡ ರಕ್ಷಣಾ ವೇದಿಕೆ ಸಂಯುಕ್ತಾಶ್ರಯದಲ್ಲಿ ಡಿ.22ರಂದು ಬೃಹತ್ ಉದ್ಯೋಗ ಮೇಳ, ಅಂಧ ಗಾಯಕರಿಂದ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ರೋಟರಿ ಮೈಸೂರು ಉತ್ತರದ ಅಧ್ಯಕ್ಷ ಎಸ್.ಹೆಚ್.ಜಗದೀಶ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಖಿಲ್ಲೆ ಮೊಹಲ್ಲಾದ ನಟರಾಜ ಕಲ್ಯಾಣ ಮಂಟಪದಲ್ಲಿ ಬೆಳಗ್ಗೆ 9.30ರಿಂದ ಬೃಹತ್ ಉದ್ಯೋಗ ಮೇಳ ನಡೆಯಲಿದೆ. ಮೇಳದಲ್ಲಿ 70ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿದ್ದು, ಒಟ್ಟಾರೆ ಸಾವಿರಕ್ಕೂ ಹೆಚ್ಚು ಹುದ್ದೆಗಳಿಗೆ ಆಯ್ಕೆ ಪ್ರಕ್ರಿಯೆ ನಡೆಸಲಿದೆ. 8ನೇ ತರಗತಿಯಿಂದ ಪದವಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಉಚಿತವಾಗಿ ನೋಂದಣಿ ಮಾಡಿಕೊಂಡು ಭಾಗವಹಿಸಬಹುದು ಎಂದರು.

ಅಂದು ಸಂಜೆ 4.30ಕ್ಕೆ ನಾದಬ್ರಹ್ಮ ಸಂಗೀತ ಸಭಾದಲ್ಲಿ 15 ಮಂದಿ ಅಂಧ ಗಾಯಕರು ಸಂಗೀತ ಸಂಜೆ ನಡೆಸಿಕೊಡಲಿದ್ದಾರೆ. ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ. ಇದಕ್ಕೂ ಮುನ್ನ ಚಾಮುಂಡಿಪುರಂ ವೃತ್ತದಲ್ಲಿ ಅಂಧ ನಡಿಗೆ ವಿಶಿಷ್ಟ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಅತಿಥಿಗಳಾಗಿ ಸ್ವಾನ್ ಗ್ರೂಪ್ ಆಫ್ ಹೋಟೆಲ್ ಮಾಲೀಕ ಅನಿಲ್, ಎಸ್‌ಎಂಪಿ ಡೆವಲಪರ್ಸ್ ಮಾಲೀಕ ಶಿವಪ್ರಕಾಶ್, ಜಲ್‌ಮಹಲ್ ಹೋಟೆಲ್ ಮಾಲೀಕ ಚಂದ್ರಶೇಖರ್, ಸಮಾಜ ಸೇವಕ ರವಿಗೌಡ, ನಿರ್ಮಲ ಆಸ್ಪತ್ರೆ ಮುಖ್ಯಸ್ಥ ಬಸವರಾಜ್, ಸಾಹಿತಿ ಕೆ.ವಿ.ಚಿಕ್ಕಣ್ಣ ಭಾಗವಹಿಸಲಿದ್ದಾರೆ. ಮಾಹಿತಿಗೆ ಮೊ.ಸಂ. 99809 59598 ಸಂಪರ್ಕಿಸಬಹುದು ಎಂದರು. ರೋಟರಿ ವಲಯ ಸೇನಾನಿ ರಾಜಶೇಖರ ಕದಂಬ, ರೋಟರಿ ಮೈಸೂರು ಉತ್ತರದ ಕಾರ್ಯದರ್ಶಿ ಕೆ.ಲೋಕನಾಥ್, ಮುಖಂಡರಾದ ನಂಜುಂಡಸ್ವಾಮಿ, ಸಂಜಯ್ ಸುದ್ದಿಗೋಷ್ಠಿಯಲ್ಲಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಬಡ ರೋಗಿಗಳ ಸುಲಿಗೆ: ಉದ್ಬೂರು ಆರೋಗ್ಯ ಕೇಂದ್ರದ ವೈದ್ಯ, ಡಾ.ಕುಮಾರಸ್ವಾಮಿ ಅಮಾನತು

ಮೈಸೂರು, ಡಿ.20(ಎಸ್‌ಬಿಡಿ)–ಬಡ ರೋಗಿಗಳಿಂದ ಹಣ ವಸೂಲಿ ಮಾಡುತ್ತಿದ್ದ ಮೈಸೂರು ತಾಲೂಕು ಆರೋಗ್ಯ ಕೇಂದ್ರವೊಂದರ ವೈದ್ಯಾಧಿಕಾರಿಯನ್ನು ಅಮಾನತು ಮಾಡಲಾಗಿದೆ. ತಾಲೂಕಿನ ಉದ್ಬೂರು ಗ್ರಾಮದ ಆರೋಗ್ಯ ಮತ್ತು ಕ್ಷೇಮ ಕೇಂದ್ರದ ವೈದ್ಯಾಧಿಕಾರಿ ಡಾ.ಬಿ.ಜಿ.ಕುಮಾರಸ್ವಾಮಿ ಅವರನ್ನು ಕರ್ತವ್ಯಲೋಪ ಹಾಗೂ ದುರ್ನಡತೆ ಆರೋಪದಡಿ ಅಮಾನತು ಮಾಡಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತ ಡಾ.ಡಿ.ರಂದೀಪ್ ನಿನ್ನೆ ಆದೇಶ ಹೊರಡಿಸಿದ್ದಾರೆ. ಕಾಲಿಗೆ ಗಾಯವಾಗಿದ್ದ ಮಹಿಳೆಯೊಬ್ಬರನ್ನು ಚಿಕಿತ್ಸೆಗೆ ಕರೆತಂದಿದ್ದ ಯುವಕನಿಂದ ಡಾ.ಬಿ.ಜಿ.ಕುಮಾರಸ್ವಾಮಿ ಹಣ ವಸೂಲಿ ಮಾಡಿದ್ದರು. ಗಾಯಕ್ಕೆ ಡ್ರೆಸ್ಸಿಂಗ್ ಮಾಡಲು ದಿನಕ್ಕೆ 200ರಂತೆ 2 ದಿನದ 400 ರೂ. ಹಣ ಪಡೆದಿದ್ದು, ಡ್ರಿಪ್ಸ್ ಹಾಕಲು 200, ಜ್ವರಕ್ಕೆ ಚಿಕಿತ್ಸೆ ಕೊಡಲು 100, ಇಂಜೆಕ್ಷನ್‌ಗೆ 50 ರೂ. ಪಡೆಯುತ್ತಾರೆಂದು ರೋಗಿಗಳು ಹೇಳಿದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಅಲ್ಲದೆ ಧೂಮಪಾನ ಹಾಗೂ ಮದ್ಯಪಾನ ಮಾಡಿಬಂದು ರೋಗಿಗಳಿಗೆ ಚಿಕಿತ್ಸೆ ನೀಡುತ್ತಾರೆಂಬ ದೂರು ಕೇಳಿಬಂದಿತ್ತು. ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಎಚ್.ಪ್ರಸಾದ್ ಅವರಿಂದ ಡಾ.ಬಿ.ಜಿ. ಕುಮಾರಸ್ವಾಮಿ ಬಗ್ಗೆ ವರದಿ ತರಿಸಿಕೊಂಡಿದ್ದರು. ಡಾ.ಕುಮಾರಸ್ವಾಮಿ ಅವರು ರೋಗಿಗಳಿಂದ ಹಣ ವಸೂಲಿ ಮಾಡಿದ್ದು ಮೇಲ್ನೋಟಕ್ಕೆ ಸಾಬೀತಾಗಿರುವ ಹಿನ್ನೆಲೆಯಲ್ಲಿ ಕರ್ತವ್ಯಲೋಪ ಹಾಗೂ ದುರ್ನಡತೆ ಆರೋಪದ ಬಗ್ಗೆ ಶಿಸ್ತು ಕ್ರಮ ಬಾಕಿಯಿರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಲಾಗಿದೆ.



ನಕಲಿ ದಾಖಲೆ ಸೃಷ್ಟಿಸಿ ಅಕ್ರಮ ಖಾತೆ: ತಹಸೀಲ್ದಾರ್ ಸೇರಿ ಐವರ ವಿರುದ್ಧ ಪ್ರಕರಣ

ಮೈಸೂರು, ಡಿ.20(ಆರ್‌ಕೆ)–ನಕಲಿ ದಾಖಲೆ, ಸಾಕ್ಷ್ಯ ಸೃಷ್ಟಿಸಿ ಅಕ್ರಮವಾಗಿ ಜಮೀನಿನ ಖಾತೆ ಮಾಡಿದ ದೂರಿನನ್ವಯ ವರುಣಾ ಪೊಲೀಸ್ ಠಾಣೆಯಲ್ಲಿ ಐವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಮೈಸೂರು ತಾಲೂಕು, ದೇವೇಗೌಡನಹುಂಡಿ ಗ್ರಾಮದ ಮರೀಗೌಡ, ಶಿವರಾಂ, ಗ್ರಾಮ ಲೆಕ್ಕಿಗ ಮಹೇಶ, ಕಂದಾಯ ನಿರೀಕ್ಷಕ ಹಾಗೂ ತಹಶೀಲ್ದಾರ್ ವಿರುದ್ಧ ಐಪಿಸಿ ಸೆಕ್ಷನ್ 465, 468, 420 ರೆಡ್‌ವಿತ್ 34 ರೀತ್ಯಾ ಡಿಸೆಂಬರ್ 14ರಂದು ಸಬ್ ಇನ್ಸ್‌ಪೆಕ್ಟರ್ ಲಮಣಿ ಸುಷ್ಮಾ ಅವರು ಎಫ್‌ಐಆರ್ ದಾಖಲಿಸಿದ್ದಾರೆ. ಮೈಸೂರಿನ ರಾಜರಾಜೇಶ್ವರಿ ನಗರ ನಿವಾಸಿ ಲೇಟ್ ಮಹದೇವ್ ಅವರ ಮಗ ಎಂ.ರವಿ ಎಂಬುವರು ದೂರು ನೀಡಿದ ಹಿನ್ನೆಲೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ತಾನು ಅನಿವಾಸಿ ಭಾರತೀಯನಾಗಿದ್ದು, ಕೆಲಸ ನಿಮಿತ್ತ ಸೌದಿ ಅರೇಬಿಯಾದಲ್ಲಿ ನೆಲೆಸಿದ್ದೇನೆ. ಮೈಸೂರು ತಾಲೂಕು, ದೇವೇಗೌಡನಹುಂಡಿ ಗ್ರಾಮದಲ್ಲಿ ನಮ್ಮ ಪೂರ್ವಜರ ಸರ್ವೆ ನಂಬರ್ 368/2ರಲ್ಲಿ 1.08 ಎಕರೆ ಜಮೀನು ನಮ್ಮ ತಂದೆಯವರ ಹೆಸರಿನಲ್ಲಿದೆ. 1994ರಲ್ಲಿ ನನ್ನ ತಾತ ಚಿಕ್ಕಮಾದೇಗೌಡರು ಮೊದಲ ಹೆಂಡತಿ ಮಗನಾದ ನನ್ನ ತಂದೆ ಲೇಟ್ ಮಹದೇವ್‌ರಿಗೆ 1.08 ಎಕರೆ, ಎರಡನೇ ಹೆಂಡತಿಯಾದ ಬೀರಮ್ಮರಿಗೆ 1.08 ಎಕರೆ ಜಮೀನನ್ನು ಸಮನಾಗಿ ಭಾಗ ಮಾಡಿ ಕೊಟ್ಟಿದ್ದರು ಎಂದು ತಿಳಿಸಿದ್ದಾರೆ.

ನಂತರ 2014ರಲ್ಲಿ ಎರಡನೇ ಹೆಂಡತಿ ಮಕ್ಕಳಾದ ಮರೀಗೌಡ ಮತ್ತು ಶಿವರಾಮ್ ಅವರು ನನ್ನ ತಂದೆಯವರ ಹೆಸರಲ್ಲಿದ್ದ ಜಮೀನಿಗೆ ನಕಲಿ ದಾಖಲೆ ಸೃಷ್ಟಿಸಿ ಸುಳ್ಳು ಸಾಕ್ಷ್ಯ ನೀಡಿ ಜಮೀನಿನ ಖಾತೆ ಮಾಡಿಸಿಕೊಂಡಿದ್ದಾರೆ. ಅದಕ್ಕೆ ಗ್ರಾಮ ಲೆಕ್ಕಿಗರಾಗಿದ್ದ ಮಹೇಶ್, ಕಂದಾಯ ನಿರೀಕ್ಷಕ (ಆರ್‌ಐ), ತಹಶೀಲ್ದಾರ್ ಅವರು ಜೊತೆಗೂಡಿ ಶಿವರಾಮು ಮತ್ತು ಮರೀಗೌಡರಿಗೆ ಸಹಕರಿಸುವ ಉದ್ದೇಶದಿಂದ ಅಧಿಕಾರ ದುರ್ಬಳಕೆ ಮಾಡಿಕೊಂಡು ಅಕ್ರಮವಾಗಿ ನನಗೆ ಸೇರಿದ 1.08 ಎಕರೆ ಜಮೀನನ್ನು ಬೀರಮ್ಮ ಅವರಿಗೆ ಖಾತೆ ಮಾಡಿಕೊಟ್ಟಿದ್ದಾರೆ ಎಂದು ರವಿ ಅವರು ದಾಖಲೆ ಸಾಕ್ಷ್ಯಗಳ ಸಮೇತ ಲಿಖಿತ ದೂರು ನೀಡಿದ್ದರ ಮೇರೆಗೆ ಐವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಕರಕುಶಲ ಗ್ರಾಮಗಳ ನಿರ್ಮಾಣ

ರಾಜ್ಯಸಭೆಯಲ್ಲಿ ಶೂನ್ಯವೇಳೆ ವಿಷಯ ಪ್ರಸ್ತಾಪಿಸಿದ ರಾಜ್ಯಸಭಾ ಸದಸ್ಯ ಲೆಹರ್‌ಸಿಂಗ್





ಮೈಸೂರು, ಡಿ. 20 (ಆರ್‌ಕೆ)–ಇನ್ನೇನು ಸಂಚಾರಕ್ಕೆ ಸಿದ್ಧವಾಗಿರುವ ಮೈಸೂರು–ಬೆಂಗಳೂರು 10 ಪಥಗಳ ರಾಷ್ಟ್ರೀಯ ಹೆದ್ದಾರಿ ಬದಿ ಕರಕುಶಲ ಗ್ರಾಮ (ಕ್ರಾಫ್ಟ್ ವಿಲೇಜಸ್)ಗಳು ತಲೆ ಎತ್ತಲಿವೆ.

ಕರ್ನಾಟಕದ ಬಿಜೆಪಿ ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್ ಸಿರೋಯ, ಈ ಸಂಬಂಧ ಸಂಸತ್ ಅಧಿವೇಶನದಲ್ಲಿ ವಿಷಯ ಪ್ರಸ್ತಾಪಿಸಿದ್ದು, ಡೆಲ್ಲಿ ಹಾತ್ ಮಾದರಿಯಲ್ಲಿ ಮೈಸೂರು– ಬೆಂಗಳೂರು ಎಕ್ಸ್‌ಪ್ರೆಸ್ ಕಾರಿಡಾರ್‌ನ ಇಕ್ಕೆಲಗಳಲ್ಲಿ ಲಭ್ಯವಿರುವ ಸ್ಥಳಾವಕಾಶದಲ್ಲಿ ಚನ್ನಪಟ್ಟಣದಿಂದ ಮದ್ದೂರುವರೆಗೆ ಕರಕುಶಲ ಗ್ರಾಮಗಳ ನಿರ್ಮಿಸಬೇಕೆಂದು ಕೇಂದ್ರ ಸರ್ಕಾರವನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸಿದ್ದಾರೆ.

ಚನ್ನಪಟ್ಟಣದ ಗೊಂಬೆಗಳು, ಕರಕುಶಲ ಇನ್ನಿತರೆ ವಸ್ತುಗಳು ಹೀಗೆ ಕುಶಲಕರ್ಮಿಗಳು ತಯಾರಿಸಿದ ನಾನಾ ಗುಡಿ ಕೈಗಾರಿಕಾ ವಸ್ತುಗಳಿಗೆ ಮಾರುಕಟ್ಟೆ ಕಲ್ಪಿಸುವ ಜೊತೆಗೆ ಈ ಉದ್ಯಮ ಪ್ರೋತ್ಸಾಹಿಸಲು ಕರಕುಶಲ ಗ್ರಾಮಗಳ ನಿರ್ಮಿಸುವುದು ಸೂಕ್ತವೆಂದು ಲೆಹರ್‌ಸಿಂಗ್ ಸಿರೋಯ ಆಗ್ರಹಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ ಯೋಜನೆಯಲ್ಲಿ ಹೆಚ್ಚುವರಿಯಾಗಿ ಕ್ರಾಫ್ಟ್ ವಿಲೇಜಸ್ ಪ್ರಾಜೆಕ್ಟ್ ಅನ್ನು ಸೇರಿಸಿ ಸದ್ಯದಲ್ಲೇ ಸಮಗ್ರ ಯೋಜನಾ ವರದಿ (ಡಿಪಿಆರ್) ತಯಾರಿಸಿ ಪ್ರಸ್ತಾವನೆಗೆ ಅನುಮೋದನೆ ಪಡೆಯಲಾಗುವುದು ಎಂದು ದೆಹಲಿ ಮೂಲದ ಅಧಿಕಾರಿಗಳು ತಿಳಿಸಿದ್ದಾರೆ. ಮದ್ದೂರಿನಿಂದ ಚನ್ನಪಟ್ಟಣವರೆಗೆ ಈ ಕರಕುಶಲ ಗ್ರಾಮ, ಕರಕುಶಲ ಕ್ಲಸ್ಟರ್ ನಿರ್ಮಿಸುವ ಬಗ್ಗೆ ಅದರ ರೂಪುರೇಷೆ, ಗೊಂಬೆಗಳು, ಸಾಂಪ್ರದಾಯಿಕ ಆಟಿಕೆ, ಗುಡಿ ಕೈಗಾರಿಕೆ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಬೇಕಾದ ಸೌಲಭ್ಯ ಒದಗಿಸಲು ಡಿಪಿಆರ್‌ನಲ್ಲಿ ಸೇರಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಅದೇ ರೀತಿ ರಸ್ತೆ ಬದಿ ಅಲ್ಲಲ್ಲಿ ರೆಸ್ಟೋರೆಂಟ್‌ಗಳನ್ನೂ ನಿರ್ಮಿಸಬೇಕು, ಬಿಡದಿ, ಮದ್ದೂರು, ರಾಮನಗರ, ಚನ್ನಪಟ್ಟಣಗಳಲ್ಲಿ ಪ್ರಸಿದ್ಧಿಯಾಗಿರುವ ಬಿಡದಿ ತಟ್ಟೆ ಇಡ್ಲಿ, ಮದ್ದೂರು ವಡೆಯಂತಹ ತಿಂಡಿ–ತಿನಿಸುಗಳಿಗೂ ಉತ್ತೇಜನ ನೀಡುವ ಜೊತೆಗೆ ಚನ್ನಪಟ್ಟಣದ ಬೊಂಬೆಗಳಿಗೂ ಮಾರುಕಟ್ಟೆ ಒದಗಿಸಿದಂತಾಗುತ್ತದೆ ಎಂದು ಲೆಹರ್ ಸಿಂಗ್ ಪ್ರಸ್ತಾಪಿಸಿದ್ದಾರೆ.

ಅದರಿಂದ ಮೈಸೂರು ಪ್ರಾಂತ್ಯದ ಕರಕುಶಲ ಕರ್ಮಿಗಳಿಗೂ ತಾವು ತಯಾರಿಸಿದ ಆಟಿಕೆ, ಕಲಾಕೃತಿ, ಜಾನಪದ ಕಲಾ ಪ್ರಾಕಾರಗಳನ್ನು ಪ್ರಚುರಪಡಿಸಿ ಮಾರಾಟ ಮಾಡಲು ವೇದಿಕೆ ಕಲ್ಪಿಸಿದಂತಾಗುತ್ತದೆ. ಪ್ರವಾಸಿಗರಿಗೂ ಒಂದೇ ಸೂರಿನಡಿ ವಿವಿಧ ಬಗೆಯ ಕರಕುಶಲ ಸಾಮಗ್ರಿಗಳನ್ನು ಖರೀದಿಸಲು ಅನುಕೂಲವಾಗುತ್ತದೆ ಎಂದು ಲೆಹರ್ ಸಿಂಗ್ ಅಭಿಪ್ರಾಯಪಟ್ಟಿದ್ದಾರೆ. ಪ್ರತಿದಿನ ಮೈಸೂರು–ಬೆಂಗಳೂರು ಹೆದ್ದಾರಿಯ ಚನ್ನಪಟ್ಟಣ ಮತ್ತು ಸಮೀಪದ ಗ್ರಾಮಗಳ ಬಳಿ ಈ ಹಿಂದೆ ಆಟಿಕೆಗಳು, ಬೊಂಬೆಗಳು ಹೆಚ್ಚಾಗಿ ಮಾರಾಟವಾಗುತ್ತಿದ್ದು, 10 ಪಥದ ಎಕ್ಸ್‌ಪ್ರೆಸ್ ಕಾರಿಡಾರ್ ನಿರ್ಮಾಣವಾದ ಬಳಿಕ ಗ್ರಾಹಕರ ಸಂಖ್ಯೆ ಇಳಿಮುಖವಾಗಿದೆ. ಅದರಿಂದಾಗಿ ಆ ವೃತ್ತಿಯನ್ನೇ ಅವಲಂಬಿಸಿರುವ ನೂರಾರು ಮಂದಿ ಆರ್ಥಿಕ ಸಂಕಷ್ಟ ಅನುಭವಿಸುವಂತಾಗಿದೆ ಎಂದು ಅವರು ತಿಳಿಸಿದ್ದಾರೆ. ಈ ಕುರಿತು ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಗೆ ಪತ್ರ ಬರೆದಿರುವ ಲೆಹರ್‌ಸಿಂಗ್ ಸಿರೋಯ ಅವರು, ಕರಕುಶಲ ಗ್ರಾಮ ನಿರ್ಮಿಸುವ ಬಗ್ಗೆ ಹೆದ್ದಾರಿ ಸಚಿವರು, ರಾಜ್ಯ ಸರ್ಕಾರ ಹಾಗೂ ಸ್ಥಳೀಯ ಜನಪ್ರತಿನಿಧಿಗಳ ಸಹಕಾರ ಪಡೆದು ಈ ಯೋಜನೆ ಅನುಷ್ಠಾನಗೊಳಿಸಬೇಕೆಂದು ಕೋರಿಕೊಂಡಿದ್ದಾರೆ.

ಮನ್ ಕಿ ಬಾತ್‌ನಲ್ಲಿ ಪ್ರಧಾನಿ ಮೋದಿ ಪ್ರಸ್ತಾಪ: 2020ರ ಆಗಸ್ಟ್ ತಿಂಗಳ 'ಮನ್ ಕಿ ಬಾತ್'ನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಚನ್ನಪಟ್ಟಣ ಟಾಯ್ಸ್ ಸೇರಿದಂತೆ ಸ್ಥಳೀಯ ಕರಕುಶಲ ವಸ್ತುಗಳ ಬಗ್ಗೆ ಪ್ರಸ್ತಾಪಿಸಿದ್ದರು. ಕೊರೊನಾ ಸಂದರ್ಭ ಈ ಉದ್ಯಮ ನೆಲಕಚ್ಚಿದ್ದರ ಬಗ್ಗೆಯೂ ಪ್ರಸ್ತಾಪಿಸಿದ್ದ ಅವರು, ಮುಂದೆ ಅದಕ್ಕೆ ಪ್ರೋತ್ಸಾಹ ನೀಡಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಜೆ.ಕೆ.ಟೈರ್ಸ್‌ನಿಂದ ಸಿಎಸ್‌ಆರ್ ನಿಧಿಯಡಿ ಮಾನಸ ಗಂಗೋತ್ರಿಯ ಮಹಿಳಾ ಹಾಸ್ಟೆಲ್, ಶಾಲೆಗೆ

ಮೂಲಭೂತ ಸೌಲಭ್ಯ: ಸಂಸದ ಪ್ರತಾಪ್ ಸಿಂಹ

ಮೈಸೂರು, ಡಿ.20(ಪಿಎಂ)– ಮೈಸೂರು ವಿವಿಯ ಮಾನಸ ಗಂಗೋತ್ರಿಯ ಮಹಿಳಾ ಹಾಸ್ಟೆಲ್ ಹಾಗೂ ಇಲ್ಲಿನ ಗಂಗೋತ್ರಿ ಶಾಲೆಗೆ ಶೌಚಾಲಯ ನಿರ್ಮಾಣ ಮತ್ತು ವಿವಿಯ ಸಂಶೋಧನಾ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡುವುದಾಗಿ ಜೆಕೆ ಟೈರ್ಸ್ ಅಂಡ್ ಇಂಡಸ್ಟ್ರೀಸ್ ಕಂಪನಿ, ಖಚಿತ ಭರವಸೆ ನೀಡಿದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.



ಮೈಸೂರಿನ ತಮ್ಮ ಕಚೇರಿಯಲ್ಲಿ ಡಿ.17ರಂದು ಸಂಸದ ಪ್ರತಾಪ್ ಸಿಂಹ, ಜೆ.ಕೆ.ಟೈರ್ಸ್ ಕಂಪನಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು.

ಜೆಕೆ ಟೈರ್ಸ್ ಅಂಡ್ ಇಂಡಸ್ಟ್ರೀಸ್ ಕಂಪನಿ ತನ್ನ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ನಿಧಿಯಡಿ (ಸಿಎಸ್‌ಆರ್) ಸೌಲಭ್ಯ ಕಲ್ಪಿಸಲು ಮುಂದಾಗಿದೆ. ಆ ಮೂಲಕ ತಮ್ಮ ಮನವಿಗೆ ಸದರಿ ಕಂಪನಿ ಸ್ಪಂದಿಸಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಂಗೋತ್ರಿ ಶಾಲೆಯಲ್ಲಿ ಬಾಲಕ–ಬಾಲಕಿಯರ ಪ್ರತ್ಯೇಕ ಶೌಚಾಲಯ ನಿರ್ಮಿಸಬೇಕು. ಮೈಸೂರು ವಿವಿ ಮಾನಸ ಗಂಗೋತ್ರಿಯ ಮಹಿಳಾ ಹಾಸ್ಟೆಲ್ ಬ್ಲಾಕ್–1ರ ಶೌಚಾಲಯ ಕಟ್ಟಡದಲ್ಲಿ ಉಂಟಾಗಿರುವ ಸೋರಿಕೆ ಸಮಸ್ಯೆ ನಿವಾರಣೆಗಾಗಿ ಇದನ್ನು ನವೀಕರಣಗೊಳಿಸಬೇಕೆಂದು ಕೋರಲಾಗಿತ್ತು. ಸದರಿ ಕಂಪನಿ ಇದಕ್ಕೆ ಸಮ್ಮತಿಸಿದೆ. ಜೊತೆಗೆ ಈ ಹಾಸ್ಟೆಲ್‌ಗೆ ಟೇಬಲ್, ಚೇರ್ ಹಾಗೂ ಉತ್ತಮ ಬೆಳಕಿನ ಸೌಲಭ್ಯ ಒಳಗೊಂಡ ಅಧ್ಯಯನ ಕೊಠಡಿ ನಿರ್ಮಿಸಿಕೊಡಬೇಕೆಂಬ ಮನವಿಗೂ ಸ್ಪಂದಿಸಿದೆ. ವಿವಿಯ ಸಂಶೋಧನಾ ವಿದ್ಯಾರ್ಥಿಗಳಿಗೆ 60 ಲ್ಯಾಪ್‌ಟಾಪ್ ಒದಗಿಸಬೇಕೆಂಬ ಕೋರಿಕೆಗೂ ಸದರಿ ಕಂಪನಿ ಒಪ್ಪಿಗೆ ಸೂಚಿಸಿದೆ.

ವಿದ್ಯಾರ್ಥಿ ಗಳ ಈ ಎಲ್ಲಾ ಸಮಸ್ಯೆಗಳ ಸಂಬಂಧ ವಿವಿ ಸಿಂಡಿಕೇಟ್ ಸದಸ್ಯೆ ಡಾ.ಚೈತ್ರಾ ನಾರಾಯಣ್ ನನ್ನ ಗಮನಕ್ಕೆ ತಂದಿ ದ್ದರು. ಈ ಹಿನ್ನೆಲೆಯಲ್ಲಿ ಡಿ.17ರಂದು ಜೆಕೆ ಟೈರ್ಸ್‌ನ ಮೈಸೂರು ಮುಖ್ಯಸ್ಥ ಈಶ್ವರ್ ಅವರ ಜೊತೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದೆ. ನನ್ನ ಮನವಿ ಮೇರೆಗೆ ಈ ಎಲ್ಲಾ ಸೌಲಭ್ಯ ಕಲ್ಪಿಸಲು ಕಂಪನಿ ಸಂಪೂರ್ಣ ಭರವಸೆ ನೀಡಿದೆ ಎಂದು ಸಂಸದರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪರಾಧ ತನಿಖೆಯಲ್ಲಿ ಡಿಜಿಟಲ್ ಸಾಕ್ಷ್ಯ ಸಂಬಂಧ ವಿಚಾರಗೋಷ್ಠಿ

ಡಿವೈಎಸ್‌ಪಿ ಯಶವಂತ ಕುಮಾರ್ ವಿಷಯ ಮಂಡನೆ

ಮೈಸೂರು: ನ್ಯಾಷನಲ್ ಅಸೋಸಿಯೇಷನ್ ಆಫ್ ಸಾಫ್ಟ್‌ವೇರ್ ಅಂಡ್ ಸರ್ವೀಸ್ ಕಂಪನೀಸ್(NASSCOM)ನ ಡಾಟಾ ಸೆಕ್ಯೂರಿಟಿ ಕೌನ್ಸಿಲ್ ಆಫ್ ಇಂಡಿಯಾ(DSCI) ವತಿಯಿಂದ ಹರಿಯಾಣದ ಗುರುಗ್ರಾಮ್‌ನಲ್ಲಿ ವಾರ್ಷಿಕ ಮಾಹಿತಿ ಭದ್ರತಾ ಶೃಂಗಸಭೆಯ (AISS) 17ನೇ ಆವೃತ್ತಿ ಆಯೋಜಿಸಿದ್ದು, 'ಅಪರಾಧ ತನಿಖೆಯಲ್ಲಿ ಡಿಜಿಟಲ್ ಸಾಕ್ಷ್ಯವನ್ನು ನಿರ್ವಹಿಸುವ ಕುರಿತ ಮೂಟ್ ಕೋರ್ಟ್ ಸೆಷನ್'ನಲ್ಲಿ ಬೆಂಗಳೂರಿನ ಸೈಬರ್ ಕ್ರೈಂ ವಿಭಾಗದ ಡಿಎಸ್‌ಪಿ ಕೆ.ಎನ್. ಯಶವಂತಕುಮಾರ್ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡು, ವಿಷಯ ಮಂಡನೆ ಮಾಡಲಿದ್ದಾರೆ. ಈ ಗೋಷ್ಠಿಯಲ್ಲಿ ನ್ಯಾಯಾಧೀಶರು, ತನಿಖಾಧಿಕಾರಿ, ನ್ಯಾಯವಾದಿಗಳು, ವಿಚಾರಣಾಧಿಕಾರಿಗಳು, ಸಾಕ್ಷಿಗಳು, ಫೊರೆನ್ಸಿಕ್ ತಜ್ಞರು ಪಾಲ್ಗೊಳ್ಳಲಿದ್ದಾರೆ.



ಗಡಿ ವಿವಾದ: ಮಹಾರಾಷ್ಟ್ರ ಸರ್ಕಾರ ವಿರುದ್ಧ ಖಂಡನಾ ನಿರ್ಣಯ ಮಂಡನೆ

ಬೆಳಗಾವಿ: ಕುಂದಾ ನಗರಿ ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ನಾಳೆ ಮಹಾರಾಷ್ಟ್ರ ಸರ್ಕಾರದ ವಿರುದ್ಧ ಖಂಡನಾ ನಿರ್ಣಯವನ್ನು ಉಭಯ ಸದನಗಳಲ್ಲಿ ಮಂಡಿಸಲು ರಾಜ್ಯ ಸರ್ಕಾರ ತೀರ್ಮಾನ ಮಾಡಿದೆ.



ಮಹಾರಾಷ್ಟ್ರ, ಕೇರಳ ಹಾಗೂ ಕರ್ನಾಟಕ ಗಡಿ ವಿಚಾರವಾಗಿ ನಿಲುವಳಿ ಸೂಚನೆ ಸಂದರ್ಭದಲ್ಲಿ ಮಹಾರಾಷ್ಟ್ರ ಸರ್ಕಾರ ಹಾಗೂ ಅವರ ನಡೆ ವಿರುದ್ಧ ಉಭಯ ಸದನ ಮೂಲಕ ಖಂಡನಾ ನಿರ್ಣಯ ಮಂಡಿಸೋಣ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಇದಕ್ಕೆ ಎಲ್ಲಾ ಸದಸ್ಯರ ಒಪ್ಪಿಗೆ ವಿಧಾನಸಭೆಯಲ್ಲಿ ದೊರಕಿದ್ದು, ಈ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನಿರ್ಣಯ ಪಾಸ್ ಮಾಡಿ ಪಾಠ ಕಲಿಸೋಣ ಎನ್ನುವ ಮೂಲಕ ಶಾಸಕರ ಒಗ್ಗಟ್ಟು ಪ್ರದರ್ಶನ ಮಾಡಲಾಯಿತು.

ಈ ವೇಳೆ ಮಾತನಾಡಿದ ಸಿಎಂ ಬೊಮ್ಮಾಯಿ, ಗಡಿ ವಿವಾದದ ವಿಚಾರದಲ್ಲಿ ಕನ್ನಡಿಗರ ಹಿತ ಕಾಪಾಡಲು ಸರ್ಕಾರ ಬದ್ಧವಾಗಿದೆ. ಗಡಿ ವಿವಾದ ಮುಚ್ಚಿದ ಅಧ್ಯಾಯ ಎಂಬುದಾಗಿ ಮಹಾರಾಷ್ಟ್ರಕ್ಕೆ ಬಲವಾದ ಸಂದೇಶ ರವಾನಿಸಲು ವಿಧಾನಸಭೆಯಲ್ಲಿ ನಿರ್ಣಯ ಅಂಗೀಕರಿಸಲಾಗುವುದು. ಕರ್ನಾಟಕಕ್ಕೆ, ರಾಜ್ಯಗಳ ಮರುಸಂಘಟನೆಯ ನಂತರ ಕರ್ನಾಟಕ ರಾಜ್ಯ ರಚನೆಯು ಅಂತಿಮ ಮತ್ತು ಬದ್ಧವಾಗಿದೆ ಎಂದರು. ಈ ವೇಳೆ ಮಾತನಾಡಿದ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು, ಉಭಯ ರಾಜ್ಯಗಳ ನಡುವಿನ ಗಡಿ ವಿವಾದ ಮುಕ್ತಾಯವಾಗಿದೆ ಎಂದು ರಾಜ್ಯ ಸರ್ಕಾರ ಪದೇ ಪದೇ ಪ್ರತಿಪಾದಿಸುತ್ತಿರುವಾಗ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕರೆದಿರುವ ಸಭೆಯಲ್ಲಿ ಪಾಲ್ಗೊಳ್ಳುವ ಅಗತ್ಯವೇನು ಎಂದು ವಿವಾದದ ಮೇಲಿನ ಚರ್ಚೆಯ ವೇಳೆ ಸಿಎಂಗೆ ಪ್ರಶ್ನಿಸಿದರು. 'ಮಹಾರಾಷ್ಟ್ರದ ನಾಯಕತ್ವವು ತನ್ನ ರಾಜಕೀಯ ಲಾಭಕ್ಕಾಗಿ ಪದೇ ಪದೇ ಈ ವಿಷಯವನ್ನು ಕೆದಕಲು ಪ್ರಯತ್ನಿಸುತ್ತಿರುವ ಕಾರಣ ನೀವು (ಸಿಎಂ) ಅಮಿತ್ ಶಾ ಅವರ ಸಭೆಗೆ ಹಾಜರಾಗಬಾರದಿತ್ತು. ಈ ವಿಚಾರ ಸತ್ತರೂ ಮಹಾರಾಷ್ಟ್ರ ಸರ್ಕಾರ ವಿವಾದ ಸೃಷ್ಟಿಸಲು ಮುಂದಾಗಿದೆ. ರಾಜ್ಯ ಸರ್ಕಾರ ತನ್ನ ನಿಲುವಿನಲ್ಲಿ ದೃಢವಾಗಿರಬೇಕು ಮತ್ತು ನೆರೆ ರಾಜ್ಯದವರ ಒತ್ತಡ ತಂತ್ರಕ್ಕೆ ಎಂದಿಗೂ ಮಣಿಯಬಾರದು ಎಂದರು. ಅಂತೆಯೇ, 'ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದಾಗಿನಿಂದ ಎರಡು ರಾಜ್ಯಗಳ ನಡುವಿನ ಗಡಿ ರೇಖೆಗೆ ಸಂಬಂಧಿಸಿದಂತೆ ನಡೆದ ಘಟನೆಗಳ ತಿರುವುಗಳನ್ನು ನೆನಪಿಸಿಕೊಂಡ ಸಿದ್ದರಾಮಯ್ಯ, ಮಹಾರಾಷ್ಟ್ರ ರಾಜ್ಯ ರಚನೆಯಾಗಿದ್ದರೂ ಮಹಾಜನ್ ಆಯೋಗದ ಶಿಫಾರಸುಗಳನ್ನು 1966 ರಲ್ಲಿ ಮಹಾರಾಷ್ಟ್ರ ಸರ್ಕಾರದ ಆದೇಶದ ಮೇರೆಗೆ ಕೇಂದ್ರ ಸರ್ಕಾರ ತಿರಸ್ಕರಿಸಿದೆ. ಮಹಾಜನ್ ಆಯೋಗವು ವಿವಾದದ ಅಂತ್ಯವಾಗಿದೆ. 1881 ರ ಜನಗಣತಿಯ ಪ್ರಕಾರ, ಬೆಳಗಾವಿ ಪ್ರದೇಶದಲ್ಲಿ 64.39 ಪ್ರತಿಶತ ಜನರು ಕನ್ನಡ ಮಾತನಾಡುವವರಾಗಿದ್ದರೆ ಕೇವಲ 24.04 ಮರಾಠಿ ಭಾಷಾ ಶಾಸ್ತ್ರಜ್ಞರು. ಹಾಗಾಗಿ ಫಜಲ್ ಅಲಿ ಆಯೋಗವು ಸತ್ಯಾಸತ್ಯತೆಯ ಆಧಾರದ ಮೇಲೆ ಬೆಳಗಾವಿಯನ್ನು ಕರ್ನಾಟಕಕ್ಕೆ ಸರಿಯಾಗಿ ಹಂಚಿಕೆ ಮಾಡಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಸುಪ್ರೀಂಕೋರ್ಟ್‌ನಲ್ಲಿ ಗಡಿ ಪ್ರಕರಣದ ಕಾನೂನು ಬದ್ಧತೆಯನ್ನು ಎತ್ತಿ ಹಿಡಿದ ಬೊಮ್ಮಾಯಿ, ಗಡಿ ಪ್ರಕರಣದ ನಿರ್ವಹಣೆಯ ಬಗ್ಗೆ ರಾಜ್ಯ ಸರ್ಕಾರವು ನ್ಯಾಯಾಲಯದಲ್ಲಿ ವಾದಿಸುತ್ತದೆ ಎಂದು ಹೇಳಿದರು. ಗಡಿ ವಿವಾದದ ವಿಷಯ ಸುಪ್ರೀಂ ಕೋರ್ಟ್‌ನ ವ್ಯಾಪ್ತಿಗೆ ಬರುವುದಿಲ್ಲ ಮತ್ತು ಅದನ್ನು ನಿಭಾಯಿಸುವ ಅಧಿಕಾರ ಸಂಸತ್ತಿಗೆ ಮಾತ್ರ ಎಂಬುದು ಕರ್ನಾಟಕದ ಪರವಾದ ವಾದವಾಗಿದೆ. 2004 ರಲ್ಲಿ ಮಹಾರಾಷ್ಟ್ರವು ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣವನ್ನು ದಾಖಲಿಸಿದೆ ಆದರೆ ಅದರ ವಿಚಾರಣೆ ಇನ್ನೂ ನಡೆಯಬೇಕಿದೆ ಎಂದು ಬೊಮ್ಮಾಯಿ ಹೇಳಿದರು. ಪ್ರತಿ ರಾಜ್ಯದಿಂದ ಮೂವರನ್ನೊಳಗೊಂಡ ಆರು ಸಚಿವರ ಸಮಿತಿಯನ್ನು ರಚಿಸುವ ಅಮಿತ್ ಶಾ ಅವರ ಸಲಹೆಗೆ ನೀವು ಏಕೆ ಒಪ್ಪಿದ್ದೀರಿ ಎಂದು ಮಾಜಿ ಸಚಿವ ಎಚ್‌ಕೆ ಪಾಟೀಲ್ ಸಿಎಂ ಅವರನ್ನು ಪ್ರಶ್ನಿಸಿದಾಗ, ರಾಜ್ಯ ಸರ್ಕಾರವು ಗಡಿ ವಿವಾದವು ಮುಚ್ಚಿದ ಅಧ್ಯಾಯ ಎಂದು ಪದೇ ಪದೇ ಪ್ರತಿಪಾದಿಸಿದೆ. 'ಕಾನೂನು ಸುವ್ಯವಸ್ಥೆಗೆ ಸಂಬಂಧಿಸಿದ ವಿಷಯವಾಗಿರುವುದರಿಂದ ಕೇಂದ್ರ ಗೃಹ ಸಚಿವರು ಸಭೆ ಕರೆದರೆ ನಾನು ಸಭೆಗೆ ಹಾಜರಾಗಬೇಕು ಎಂದು ಸ್ಪಷ್ಟನೆ ನೀಡಿದರು. ದೇಶದ ಒಳಗೆ ಮತ್ತು ಹೊರಗೆ ವಾಸಿಸುತ್ತಿರುವ ಎಲ್ಲ ಕನ್ನಡಿಗರ ಹಿತ ಕಾಪಾಡಲು ತಮ್ಮ ಸರ್ಕಾರ ಬದ್ಧವಾಗಿದೆ. ಎರಡೂ ರಾಜ್ಯಗಳ ನಡುವಿನ ಗಡಿರೇಖೆಯ ವಿಷಯವು ಮುಚ್ಚಿದ ಅಧ್ಯಾಯವಾಗಿದೆ ಮತ್ತು ಕರ್ನಾಟಕದ ಒಂದು ಇಂಚು ಭೂಮಿಯನ್ನು ಯಾರೂ ಕಸಿದುಕೊಳ್ಳಲು ಸಾಧ್ಯವಿಲ್ಲ ಎಂದು ನಾನು ಪುನರುಚ್ಚರಿಸುತ್ತೇನೆ ಎಂದು ಅವರು ಸ್ಪಷ್ಟಪಡಿಸಿದರು.

ಡಿ.24ಕ್ಕೆ ಕೆ.ವಿ.ವಾಸು ಪುಸ್ತಕ ಬಿಡುಗಡೆ



ಮೈಸೂರು, ಡಿ.20– ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಹಿಮಾಲಯ ಪ್ರತಿಷ್ಠಾನ ಸಹಯೋಗದಲ್ಲಿ ಲೇಖಕ ಕೆ.ವಿ.ವಾಸು ಅವರ 'ಕಾತ್ಯಾಯನಿ ಮತ್ತು ಇತರ ಕಥೆಗಳು' ಕೃತಿ ಬಿಡುಗಡೆ ಕಾರ್ಯಕ್ರಮವನ್ನು ಡಿ.24ರಂದು ಏರ್ಪಡಿಸಲಾಗಿದೆ.

ವಿಜಯನಗರ 1ನೇ ಹಂತದ ಜಿಲ್ಲಾ ಕಸಾಪ ಭವನದಲ್ಲಿ ಅಂದು ಬೆಳಗ್ಗೆ 11ಕ್ಕೆ ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ ಕಾರ್ಯಕ್ರಮ ಉದ್ಘಾಟಿಸಲಿದ್ದು, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ ಕೃತಿ ಬಿಡುಗಡೆ ಮಾಡಲಿದ್ದು, ಡಾ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನದ ನಿರ್ದೇಶಕಿ ಡಾ.ಕೆ.ಲೀಲಾಪ್ರಕಾಶ್ ಕೃತಿ ಕುರಿತು ಮಾತನಾಡಲಿದ್ದಾರೆ. ಹಿರಿಯ ಸಂಶೋಧಕ ಎನ್.ಅಶ್ವತ್ಥ ನಾರಾಯಣ, ಮಕ್ಕಳ ಸಾಹಿತಿ ಎಂ.ಮುತ್ತುಸ್ವಾಮಿ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತ ಹಾಗೂ ಜಿಲ್ಲಾ ಕಸಾಪ ಕಾರ್ಯದರ್ಶಿ ಲತಾ ಮೋಹನ್ ತಿಳಿಸಿದ್ದಾರೆ.

ಸಿಬಿಐ ದಾಳಿ: ಡಿಕೆಶಿ ಬೆನ್ನಿಗೆ ನಿಂತ ಲಕ್ಷ್ಮೀ ಹೆಬ್ಬಾಳ್ಕರ್

ಬೆಂಗಳೂರು: ಇತ್ತೀಚಿನ ದಿನಗಳಲ್ಲಿ ಸಿಬಿಐ ದಾಳಿ ಸರ್ವೆ ಸಾಮಾನ್ಯ, ಡಿ.ಕೆ ಶಿವಕುಮಾರ್ ಅವರು ಕಾನೂನಾತ್ಮಕವಾಗಿ ಹೋರಾಟ ಮಾಡುತ್ತಾರೆ ಎಂದು ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ್ ತಿಳಿಸಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾಲೀಕತ್ವದ ಶಿಕ್ಷಣ ಸಂಸ್ಥೆ ಮೇಲೆ ಸಿಬಿಐ ಅಧಿಕಾರಿಗಳ ತಂಡ ದಾಳಿ ನಡೆಸಿದ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಸಿಬಿಐ ದಾಳಿ ಸರ್ವೇ ಸಾಮಾನ್ಯವಾಗಿದೆ. ವಿರೋಧ ಪಕ್ಷಗಳ ಮೇಲೆ ಸಿಬಿಐ, ಇ.ಡಿ, ಐಟಿ ದಾಳಿ ಮಾಡ್ತಾ ಇರೋದು ದೇಶದಲ್ಲಿ ಹಾಗೂ ರಾಜ್ಯದಲ್ಲಿ ಜಗಜ್ಜಾಹೀರಾಗಿದೆ. ಅದರಲ್ಲಿ ಹೊಸದೇನು ಇಲ್ಲ. ಡಿ.ಕೆ ಶಿವಕುಮಾರ್ ಅವರು ಕಾನೂನಾತ್ಮಕವಾಗಿ ಹೋರಾಟ ಮಾಡುತ್ತಾರೆ ಎಂದು ಹೇಳಿದ್ದಾರೆ. ಇದೇ ವೇಳೆ ಪಂಚಮಸಾಲಿ ಸಮುದಾಯ ಮೀಸಲಾತಿ ವಿಚಾರಕ್ಕೆ ಪ್ರತಿಕ್ರಿಯಿಸಿದ ಲಕ್ಷ್ಮಿ ಹೆಬ್ಬಾಳ್ಕರ್, ಮುಖ್ಯಮಂತ್ರಿಗಳು ಮೀಸಲಾತಿ ಕೊಡ್ತೀವಿ ಎಂದು 4 ಸಲ ಹೇಳಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು,ಡಿ.20– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2022–2023 ಸಾಲಿನಲ್ಲಿ ಪ್ರಥಮ ವರ್ಷದ ಪೂರ್ಣ ಅವಧಿ PHD ಅಧ್ಯಯನದಲ್ಲಿ ತೊಡಗಿರುವ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ –1, 2ಎ, 3ಎ ಹಾಗೂ 3ಬಿಗೆ ಸೇರಿದ ಅರ್ಹ ವಿದ್ಯಾರ್ಥಿಗಳಿಂದ ಮಾಸಿಕ ವ್ಯಾಸಂಗವೇತನ /ಫೆಲೋಶಿಪ್‌ಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು https://bcwd.karnataka.gov.in, ಮಾಹಿತಿಗೆ ದೂ.ಸಂ. 8050770004 ಸಂಪರ್ಕಿಸಿ.

ವಿಧಾನಪರಿಷತ್ ಸಭಾಪತಿ ಸ್ಥಾನಕ್ಕೆ ಬಿಜೆಪಿ ಅಭ್ಯರ್ಥಿಯಾಗಿ ಹೊರಟ್ಟಿ ನಾಮಪತ್ರ

ಬೆಳಗಾವಿ: ಇತ್ತೀಚೆಗಷ್ಟೇ ಕೇಸರಿ ಪಕ್ಷಕ್ಕೆ ಸೇರ್ಪಡೆಯಾದ ಬಿಜೆಪಿ ಎಂಎಲ್‌ಸಿ ಹಾಗೂ ಹಿರಿಯ ರಾಜಕಾರಣಿ ಬಸವರಾಜ್ ಹೊರಟ್ಟಿ ಅವರು ಮಂಗಳವಾರ ವಿಧಾನಪರಿಷತ್ ಸಭಾಪತಿ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದಾರೆ.



ಬೆಳಗಾವಿ ಸುವರ್ಣ ಸೌಧದಲ್ಲಿ ಎಂಎಲ್‌ಸಿ ಬಸವರಾಜ ಹೊರಟ್ಟಿ ಅವರು ವಿಧಾನ ಪರಿಷತ್ ಕಾರ್ಯದರ್ಶಿಗಳಿಗೆ ನಾಮಪತ್ರ ಸಲ್ಲಿಸಿದರು. ಈ ವೇಳೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಹಿರಿಯ ಮುಖಂಡರು ಉಪಸ್ಥಿತರಿದ್ದರು. ನಾಳೆ (ಡಿ. 21) ಚುನಾವಣೆ ನಡೆಯಲಿದೆ. ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಸಭೆಯಲ್ಲಿ ಆಡಳಿತಾರೂಢ ಬಿಜೆಪಿ ಸಭಾಪತಿ ಸ್ಥಾನಕ್ಕೆ ಬಸವರಾಜ ಹೊರಟ್ಟಿ ಅವರ ಹೆಸರನ್ನು ಅಂತಿಮಗೊಳಿಸಿತ್ತು. ಇದೀಗ ಹಂಗಾಮಿ ಸಭಾ ಪತಿಯಾಗಿರುವ ಬಿಜೆಪಿ ಎಂಎಲ್‌ಸಿ ರಘುನಾಥ ಮಲ್ಕಾಪುರೆ ಅವರು ಸಭಾಪತಿ ಸ್ಥಾನದ ಆಕಾಂಕ್ಷಿಯಾಗಿದ್ದರು. ಆದರೆ, ಈ ಹಿಂದೆಯೂ ಪರಿಷತ್ತಿನ ಸಭಾಪತಿಯಾಗಿದ್ದ ಹೊರಟ್ಟಿ ಅವರಿಗೆ ಅದೇ ಹುದ್ದೆ ನೀಡಲಾಗುವುದು ಎಂದು ಪಕ್ಷವು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಸಮ್ಮುಖದಲ್ಲಿ ಬಿಜೆಪಿಗೆ ಸೇರ್ಪಡೆಗೊಂಡಾಗ ಭರವಸೆ ನೀಡಿತ್ತು.

ಹಾಳಾಗಿರುವ ರಸ್ತೆ ದುರಸ್ತಿಗೆ ಆಗ್ರಹಿಸಿ ವಾರ್ಡ್ ನಿವಾಸಿಗಳ ಪ್ರತಿಭಟನೆ



ಮೈಸೂರು, ಡಿ.20(ಆರ್‌ಕೆಬಿ)– ಮೈಸೂರಿನ ವಿವೇಕಾನಂದ ವೃತ್ತದಿಂದ ಬಸ್ ಡಿಪೋ ವೃತ್ತದವರೆಗಿನ ತೀರಾ ಹಾಳಾಗಿರುವ ರಸ್ತೆ ದುರಸ್ತಿಗೆ ಆಗ್ರಹಿಸಿ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ಮಂಗಳವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಈ ಕೆಟ್ಟ ರಸ್ತೆಯಲ್ಲಿ ಮಕ್ಕಳು, ವಯೋವೃದ್ಧರು, ಮಹಿಳೆಯರು ನಡೆದಾಡಲು ಹಾಗೂ ದ್ವಿಚಕ್ರ ವಾಹನ ಸವಾರರು ಕಷ್ಟ ಎದುರಿಸುತ್ತಿದ್ದು, ಪ್ರತಿದಿನ 3–4 ಅಪಘಾತಗಳು ಸಂಭವಿಸುತ್ತಿದ್ದರೂ ಸಂಬಂಧಿಸಿದ ಅಧಿಕಾರಿಗಳು ಕಣ್ಣಿದ್ದೂ ಕುರುಡರಂತೆ ವರ್ತಿಸುತ್ತಿದ್ದಾರೆ ಎಂದು ನಿವಾಸಿಗಳು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕಳೆದ 15 ದಿನಗಳ ಹಿಂದೆ ರಸ್ತೆ ಅಗೆದು ಕಾಮಗಾರಿ ವಿಳಂಬ ಮಾಡುತ್ತಿದ್ದಾರೆ. ಸಂಬಂಧಪಟ್ಟ ನಗರಪಾಲಿಕೆ ಅಧಿಕಾರಿಗಳು, ವಲಯ ಆಯುಕ್ತರು, ನಗರ ಪಾಲಿಕೆ ಸದಸ್ಯರು ವಾರದೊಳಗೆ ಈ ರಸ್ತೆಯನ್ನು ಸರಿಪಡಿಸದಿದ್ದರೆ 59 ಹಾಗೂ 64ನೇ ವಾರ್ಡ್‌ನ ನಿವಾಸಿಗಳು ರಸ್ತೆ ತಡೆ ಚಳುವಳಿ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ಸೇನಾ ಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಕಾಂಗ್ರೆಸ್ ಮುಖಂಡ ಪ್ರದೀಪ್‌ಕುಮಾರ್, ಮೊಹಲ್ಲಾದ ನಿವಾಸಿಗಳಾದ ವೆಜಿಟೇಬಲ್ ರಘು, ಮಂಜುನಾಥ್, ಸಿ.ಎಚ್.ಕೃಷ್ಣಯ್ಯ, ಪ್ರಭಾಕರ್, ಕೃಷ್ಣಮೂರ್ತಿ, ಸ್ವಾಮಿ, ವಿಜಯೇಂದ್ರ, ಶಾಂತರಾಜೇ ಅರಸ್ ಇನ್ನಿತರರು ಉಪಸ್ಥಿತರಿದ್ದರು.

ಬಂಡವಾಳ ಹೂಡಿಕೆ ಸಮಾವೇಶದಿಂದ 6 ಲಕ್ಷ ಹುದ್ದೆ ಸೃಷ್ಟಿ

ಬೆಳಗಾವಿ: ನವೆಂಬರ್‌ನಲ್ಲಿ ನಡೆದ ಬಂಡವಾಳ ಸಮಾವೇಶದಿಂದ ರಾಜ್ಯದಲ್ಲಿ 6 ಲಕ್ಷ ಉದ್ಯೋಗ ಸೃಷ್ಟಿಯಾಗಲಿದೆ ಎಂದು ಕೈಗಾರಿಕೆ ಸಚಿವ ಮುರುಗೇಶ್ ನಿರಾಣಿ ಭರವಸೆ ನೀಡಿದರು.

ವಿಧಾನಪರಿಷತ್ ಕಲಾಪದ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್ ಯು.ಬಿ. ವೆಂಕಟೇಶ್, ನಾಗರಾಜ್ ಯಾದವ್, ಮಂಜುನಾಥ್ ಭಂಡಾರಿ ಪ್ರಶ್ನೆ ಕೇಳಿದರು.

ಬಂಡವಾಳ ಹೂಡಿಕೆ ಸಮಾವೇಶದಿಂದ ಯಾವುದೇ ಅನುಕೂಲ ಆಗುತ್ತಿಲ್ಲ. ಸಮಾವೇಶ ಮಾಡಲು 75 ಕೋಟಿ ಖರ್ಚು ಮಾಡಲಾಗಿದೆ. ಕಳೆದ ಜಿಮ್‌ನ ಬಂಡವಾಳದಲ್ಲಿ 14% ಮಾತ್ರ ಬಂಡವಾಳ ಬಂದಿದೆ. ಹಾಗಾದರೆ ಈ ಬಂಡವಾಳ ಹೂಡಿಕೆ ಸಮಾವೇಶದ ಲಾಭವೇನು. ಸುಮ್ಮನೆ ಸಮಾವೇಶಕ್ಕೆ ಹಣ ಖರ್ಚಾಗಿದೆ ಅಷ್ಟೆ, ಬೆಂಗಳೂರು ಬಿಟ್ಟು ಹೊರಗೆ ಬಂಡವಾಳ ಹೂಡಿಕೆ ಆಗಿಲ್ಲ ಯಾಕೆ ಕೇವಲ ಎನರ್ಜಿ ಸೆಕ್ಟರ್‌ಗೆ ಮಾತ್ರ ಅವಕಾಶ ಕೊಡಲಾಗಿದೆ. ಸರ್ಕಾರ ಹೇಳಿದ ಹಾಗೆ ಉದ್ಯೋಗ ಸೃಷ್ಟಿ ಆಗಲ್ಲ ಎಂದು ಕಿಡಿಕಾರಿದರು. ಇದಕ್ಕೆ ಸಚಿವ ನಿರಾಣಿ ಉತ್ತರ ನೀಡಿದರು. ನವೆಂಬರ್‌ನಲ್ಲಿ ನಡೆದ ಬಂಡವಾಳ ಹೂಡಿಕೆ ಸಮಾವೇಶದಲ್ಲಿ 9,81,784 ಕೋಟಿ ಹೂಡಿಕೆ ಆಗಿದೆ. ಸಮಾವೇಶದಲ್ಲಿ 15 ಸಾವಿರ ಪ್ರತಿನಿಧಿಗಳು ಭಾಗವಹಿಸಿದ್ದರು. ಜಪಾನ್, ಜರ್ಮನ್, ಫ್ರಾನ್ಸ್, ಆಸ್ಟ್ರೇಲಿಯಾ, ದಕ್ಷಿಣ ಕೊರಿಯಾ, ನೆದರ್ಲೆಂಡ್ ದೇಶಗಳ ನಿಯೋಗ ಬಂದಿತ್ತು. 2012ರಲ್ಲಿ ನಮಗೆ 1 ಸಾವಿರ ಎಕರೆ ಟಾಟಾಗೆ ಅವರಿಗೆ ಕೊಡಲು ಆಗದೇ ಟಾಟಾ ಗುಜರಾತ್‌ಗೆ ಹೋಯ್ತು. 2012ರಲ್ಲಿ 1 ಲಕ್ಷ ಎಕರೆ ರೈತರಿಂದ ಭೂಮಿ ಸ್ವಾಧೀನ ಮಾಡಿಕೊಂಡೆವು. 2013ರಲ್ಲಿ ಸಿದ್ದರಾಮಯ್ಯ ಸರ್ಕಾರ ನಾವು ವಶಪಡಿಸಿಕೊಂಡಿದ್ದ 1 ಲಕ್ಷ ಎಕರೆಯನ್ನು ಡೀನೋಟಿಫೈ ಮಾಡಿದರು. ಇದರಿಂದ ಭೂಮಿ ನಮಗೆ ಸಮಸ್ಯೆ ಆಯ್ತು ಎಂದರು. 2012ರಲ್ಲಿ ಸುಮಾರು 2 ಸಾವಿರ ಕೋಟಿ ಬಂಡವಾಳ ಇನ್ವೆಸ್ಟ್ ಆಗಿತ್ತು. ಅದರ ಬಡ್ಡಿಯಲ್ಲಿ ನಾವು ಸಮಾವೇಶ ಮಾಡಿದ್ದೇವೆ. ಈ ಬಾರಿಯ ಸಮಾವೇಶದಿಂದ 6 ಲಕ್ಷ ಉದ್ಯೋಗ ಸೃಷ್ಟಿ ಆಗಲಿದೆ. 75% ಬಂಡವಾಳ ಹೂಡಿಕೆ ಆಗೋಕೆ ಸರ್ಕಾರ ಕ್ರಮವಹಿಸಲಾಗಿದೆ. ಬಂಡವಾಳ ಹೂಡಿಕೆ ಸಮಾವೇಶಕ್ಕೆ ಬೇರೆ ರಾಜ್ಯಕ್ಕೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಕಡಿಮೆ ಹಣ ಖರ್ಚು ಮಾಡಿದ್ದೇವೆ. ಬೆಂಗಳೂರು ಬಿಟ್ಟು ಬೇರೆ ನಗರದಲ್ಲೂ ಬಂಡಾಯ ಹೂಡಿಕೆಗೆ ಕ್ರಮವಹಿಸಿದ್ದೇವೆ ಎಂದು ಹೇಳಿದರು.



'ಅಂತರ ರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ'ಗೆ ವಿದ್ಯಾರ್ಥಿಗಳು



ಮಡಿಕೇರಿ, ಡಿ.20– ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆ ಆಳ್ವಾಸ್ ಕಾಲೇಜಿನಲ್ಲಿ ನಡೆಯುವ 'ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ'ಗೆ ಕೊಡಗು ಜಿಲ್ಲೆಯಿಂದ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ 564 ವಿದ್ಯಾರ್ಥಿಗಳು ಮಂಗಳವಾರ ತೆರಳಿದರು.

ನಗರದ ಗಾಂಧಿ ಮೈದಾನದಲ್ಲಿ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ ಪ್ರಯಾಣಕ್ಕೆ ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ ಹಸಿರು ನಿಶಾನೆ ಮೂಲಕ ಬೀಳ್ಕೊಟ್ಟು ಜಾಂಬೂರಿಗೆ ಶುಭ ಹಾರೈಸಿದರು. ಸುಮಾರು 10 ಬಸ್‌ಗಳಲ್ಲಿ 20 ಶಿಕ್ಷಕರನ್ನು ಒಳಗೊಂಡ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ತೆರಳಿದರು. ಡಿ.21 ರಿಂದ 27 ರವರೆಗೆ ಒಂದು ವಾರಗಳ ಕಾಲ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ ನಡೆಯಲಿದ್ದು, ಜಿಲ್ಲೆಯ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಪ್ರಧಾನ ಆಯುಕ್ತ ಕೆ.ಟಿ.ಬೇಬಿ ಮ್ಯಾಥ್ಯೂ ತಿಳಿಸಿದರು.

ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯಲ್ಲಿ ವಿಜ್ಞಾನ, ಕೃಷಿ, ಪುಸ್ತಕ ಮಳಿಗೆಗಳನ್ನು ಒಳಗೊಂಡಿದೆ. ಹಾಗೆಯೇ ಆಹಾರ ಮೇಳ ನಡೆಯಲಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಂಸ್ಕೃತಿಕ ಜಾಂಬೂರಿ ನಡೆಯಲಿದ್ದು, ಸಾರ್ವಜನಿಕರ ವೀಕ್ಷಣೆಗೂ ಅವಕಾಶವಿದೆ ಎಂದರು. ಕೊಡಗು ಜಿಲ್ಲೆಯಿಂದ 1260 ಕೆಜಿ ಕಾಫಿ ಪುಡಿ, ಜೊತೆಗೆ 30 ಕೆಜಿ ಜೇನುತುಪ್ಪ ಪೂರೈಸಲಾಗಿದೆ ಎಂದು ಕೆ.ಟಿ.ಬೇಬಿಮ್ಯಾಥ್ಯು ತಿಳಿಸಿದರು.

ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಂಗಧಾಮಯ್ಯ, ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಉಪಾಧ್ಯಕ್ಷೆ ರಾಣಿ ಮಾಚಯ್ಯ, ಕಾರ್ಯದರ್ಶಿ ವಸಂತಿ, ಖಜಾಂಜಿ ಪುಷ್ಪವೇಣಿ, ಸಂಪರ್ಕ ಅಧಿಕಾರಿ ಟಿ.ಜಿ.ಪ್ರೇಮ್ ಕುಮಾರ್, ಸ್ಥಾನಿಕ ಆಯುಕ್ತರಾದ ಎಚ್.ಆರ್.ಮುತ್ತಪ್ಪ, ಬಿ.ಎನ್.ರಮೇಶ್, ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಸಂಘಟಕರಾದ ದಮಯಂತಿ, ಇತರರು ಇದ್ದರು. ಪೋಷಕರು, ಶಿಕ್ಷರು ಮಕ್ಕಳಿಗೆ ಬೀಳ್ಕೊಟ್ಟರು.

ಜ.8ಕ್ಕೆ ಹುದಿಕೇರಿಯಲ್ಲಿ 5ಕೆ ಮ್ಯಾರಥಾನ್

ಗೋಣಿಕೊಪ್ಪ, ಡಿ.20– ಅಂಜಿಕೇರಿ ನಾಡ್ ಕೂಟದಿಂದ ಜ.8 ರಂದು ಹುದಿಕೇರಿಯಲ್ಲಿ 5ಕೆ ಮ್ಯಾರಥಾನ್ ಆಯೋಜಿಸಲಾಗಿದೆ ಎಂದು ಕೂಟದ ಸದಸ್ಯ ಚೆಕ್ಕೇರ ಚಂದ್ರಪ್ರಕಾಶ್ ತಿಳಿಸಿದ್ದಾರೆ.

ಮಕ್ಕಳು, ಮಹಿಳೆಯರು ಹಾಗೂ ಪುರುಷರು ಪಾಲ್ಗೊಳ್ಳಬಹುದಾಗಿದೆ. 14 ರಿಂದ 40, 41 ಮೇಲ್ಪಟ್ಟವರಿಗೆ ಮೂರು ವಿಭಾಗದಲ್ಲಿ ಸ್ಪರ್ಧೆ ನಡೆಯಲಿದೆ. ಹುದಿಕೇರಿ ಸರ್ಕಾರಿ ಪ್ರಾಥಮಿಕ ಶಾಲಾ ಆವರಣದಿಂದ ಗ್ರಾಮದ ರಸ್ತೆಗಳಲ್ಲಿ ಸ್ಪರ್ಧೆ ನಡೆಯಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಡಿ.28ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕಾಗಿದ್ದು, ಪ್ರಥಮ 3 ಬಹುಮಾನ, 4–6 ಸ್ಥಾನಕ್ಕೆ ಬಹುಮಾನ ನೀಡಲಾಗುವುದು. ಪ್ರಮಾಣಪತ್ರ ಕೂಡ ನೀಡಲಾಗುವುದು ಎಂದು ತಿಳಿಸಿದರು.

ಹೆಚ್ಚಿನ ಮಾಹಿತಿಗೆ 9620598720, 9986252474 ಸಂಪರ್ಕಿಸಬಹುದಾಗಿದೆ. ಗೋಷ್ಠಿಯಲ್ಲಿ ಕೂಟದ ಸದಸ್ಯರಾದ ಚೆಕ್ಕೇರ ಬೋಪಣ್ಣ, ಚಂಗುಲಂಡ ಪೊನ್ನಪ್ಪ, ನೂರೇರ ಕುಟ್ಟಪ್ಪ ಇದ್ದರು.

ಗೆಣಸಿನ ಮೂಟೆಗಳ ಮಧ್ಯ ಅಕ್ರಮವಾಗಿ ಸಾಗಿಸುತ್ತಿದ್ದ ಬೀಟೆ ಮರದ ನಾಟಾಗಳ ವಶ

ವಾಹನ ವಶ, ಆರೋಪಿ ಬಂಧನ, ಉಳಿದವರು ಪರಾರಿ



ಸಿದ್ದಾಪುರ, ಡಿ.20– ವಿರಾಜಪೇಟೆ ಅರಣ್ಯ ವಲಯದ ಹೆಗ್ಗಳ ಕೊಟ್ಟೋಳಿ – ವಿರಾಜಪೇಟೆ ಮಾರ್ಗದ ಮುಖ್ಯ ರಸ್ತೆಯಲ್ಲಿ ಮಹೀಂದ್ರ ಪಿಕಪ್ ವಾಹನದಲ್ಲಿ ಸಿಹಿ ಗೆಣಸು ಮೂಟೆಗಳ ಮಧ್ಯೆ ಅಕ್ರಮವಾಗಿ ಸಾಗಿಸುತ್ತಿದ್ದ ಬೀಟೆ ಮರದ 11 ನಾಟಾಗಳನ್ನು ವಿರಾಜಪೇಟೆ ವಲಯದ ಅರಣ್ಯ ಇಲಾಖೆ ಸಿಬ್ಬಂದಿ ವಶಪಡಿಸಿಕೊಂಡು ಆರೋಪಿಯನ್ನು ಬಂಧಿಸಿದ್ದಾರೆ.

ಬೇತು ಗ್ರಾಮದ ವಾಹನ ಚಾಲಕ ಆರೀಸು ಎಂಬಾತನೇ ಬಂಧಿತ ಆರೋಪಿ. ಇತರ ಆರೋಪಿಗಳಾದ ಕೊಟ್ಟಮುಡಿ– ಹೊದವಡ ಗ್ರಾಮದ ಅಬ್ಬಾಸ್ ಕೆ.ಯು. ಹಾಗೂ ನಾಪೋಕ್ಲುವಿನ ಹಳೆ ತಾಲೂಕು ಗ್ರಾಮದ ರಿಜ್ವಾನ್ ಪರಾರಿಯಾಗಿದ್ದಾರೆ.

ಕೊಡಗು ಜಿಲ್ಲೆಯಿಂದ ಕೇರಳ ರಾಜ್ಯಕ್ಕೆ ಸಾಗಾಟ ಮಾಡುತ್ತಿದ್ದಾಗಿ ತಿಳಿದು ಬಂದಿದೆ. ಆರೋಪಿ ಆರೀಸು ಮಹೇಂದ್ರ ಪಿಕಪ್ ವಾಹನದಲ್ಲಿ 5 ಲಕ್ಷ ರೂ. ಮೌಲ್ಯದ ಬೀಟೆ ಮರದ 11 ತುಂಡುಗಳನ್ನು ಇಟ್ಟು, ಅದರ ಮೇಲೆ ಅನುಮಾನ ಬಾರದಿರಲಿ ಎಂದು ಗೆಣಸು ತುಂಬಿದ್ದ ಪ್ಲಾಸ್ಟಿಕ್ ಚೀಲಗಳನ್ನು ಜೋಡಿಸಿ ಸಾಗಿಸುತ್ತಿದ್ದಾಗ ಸಂಶಯಗೊಂಡ ಅರಣ್ಯ ಇಲಾಖೆ ಸಿಬ್ಬಂದಿಗಳು, ಅಧಿಕಾರಿಗಳ ಮಾರ್ಗದರ್ಶನದಲ್ಲಿ ವಾಹನ ತಡೆದು ತಪಾಸಣೆ ನಡೆಸಿದಾಗ ಈ ಅಕ್ರಮ ಬಯಲಿಗೆ ಬಂದಿದೆ.

ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಕೊಡಗು ವೃತ್ತದ ಸಂರಕ್ಷಾಧಿಕಾರಿ ಬಿಎನ್‌ಎನ್ ಮೂರ್ತಿ, ವಿರಾಜಪೇಟೆ ವಿಭಾಗದ ಉಪ ಅರಣ್ಯ ಸಂರಕ್ಷಾಧಿಕಾರಿಗಳಾದ ಶಿವರಾಮ ಬಾಬು, ಚಕ್ರಪಾಣಿ, ವಿರಾಜಪೇಟೆ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನೆಹರು ಮಾರ್ಗದರ್ಶನದಲ್ಲಿ, ವಿರಾಜಪೇಟೆ ವಲಯ ಅರಣ್ಯಾಧಿಕಾರಿ ಕಳ್ಳಿರ.ಎಂ. ದೇವಯ್ಯ, ವಿರಾಜಪೇಟೆ ಉಪ ವಲಯ ಅರಣ್ಯಾಧಿಕಾರಿ ಸಂಜಿತ್ ಸೋಮಯ್ಯ, ಆನಂದ ಕೆ.ಆರ್. ಕುಮಾರಿ ಮೋನಿಷಾ, ಎಂ.ಎಸ್, ಅರಣ್ಯ ರಕ್ಷಕರಾದ ಚಂದ್ರಶೇಖರ ಅಮರಗೋಳ, ಮಾಲತೇಶ ಬಡಿಗೇರ, ವಾಹನ ಚಾಲಕ ಅಶೋಕ ಹಾಗೂ ಆರ್.ಆರ್.ಟಿ ಸಿಬ್ಬಂದಿಗಳಾದ ನಾಚಪ್ಪ, ಪವಿತ್ರ ಕುಮಾರ್, ಲಾರೆನ್, ವಿಕಾಸ್, ಮಹೇಶ್, ಲತೇಶ ಭಾಗವಹಿಸಿದ್ದರು.

ಪೊಲೀಸ್ ಪೇದೆ ಮೇಲೆ ಹಲ್ಲೆ ನಡೆಸಿದ ಶಿಕ್ಷಕ ಜೈಲಿಗೆ

ಕುಶಾಲನಗರ, ಡಿ.20– ಗ್ರಾಮಾಂತರ ಪೊಲೀಸ್ ಠಾಣೆ ಪೇದೆ ಯೋಗೇಶ್ ಎಂಬುವರ ಮೇಲೆ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಡಗು ಜಿಲ್ಲೆಯ ಬೇತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕ ಕೆ.ಜಿ.ನಾಗೇಂದ್ರ ಜೈಲು ಪಾಲಾಗಿದ್ದಾರೆ.

ಕುಶಾಲನಗರ ನಗರ ಠಾಣೆ ಮಹಿಳಾ ಪೊಲೀಸ್ ಸಿಬ್ಬಂದಿ ಪತಿಯಾದ ನಾಗೇಂದ್ರ ತಾನು ವಾಸವಿರುವ ಪೊಲೀಸ್ ಕ್ವಾಟ್ರರ್ಸ್ ಪಕ್ಕದ ವಸತಿಗೃಹದಲ್ಲಿ ವಾಸವಿದ್ದ ಪೊಲೀಸ್ ಪೇದೆಯೊಂದಿಗೆ ಕಲಹ ಮಾಡಿಕೊಂಡಿದ್ದ. ಈ ಬಗ್ಗೆ ವಿಚಾರಿಸಲು ನವೆಂಬರ್ ತಿಂಗಳಲ್ಲಿ ಕುಶಾಲನಗರ ಪೊಲೀಸ್ ಠಾಣೆಯಿಂದ ಬರ ಹೇಳಿದ್ದ ಸಂದರ್ಭ ಠಾಣೆಯಲ್ಲಿಯೂ ಕೂಡ ಪೊಲೀಸರೊಂದಿಗೆ ವಾಗ್ವಾದ ನಡೆಸಿದ್ದ.

ಇದೇ ಸಂದರ್ಭ ಕರ್ತವ್ಯ ನಿಮಿತ್ತ ನಗರ ಠಾಣೆಗೆ ಆಗಮಿಸಿದ್ದ ಗ್ರಾಮಾಂತರ ಠಾಣೆ ಪೇದೆ ಯೋಗೇಶ್ ಮೇಲೆ ಶಿಕ್ಷಕ ನಾಗೇಂದ್ರ ಹಲ್ಲೆ ನಡೆಸಿದ್ದಾರೆ. ಮೊಬೈಲ್ ನೋಡುತ್ತಾ ಒಳಗೆ ಬಂದ ಯೋಗೇಶ್ ಅವರನ್ನು ಮೊಬೈಲ್‌ನಲ್ಲಿ ವಿಡಿಯೋ ಮಾಡುತ್ತಿದ್ದೀಯ ಎಂದು ಆಕ್ಷೇಪಿಸಿ ಶಿಕ್ಷಕ ಕೈ ಮಾಡಿದ್ದಾನೆ.

ಈ ಬಗ್ಗೆ ಪೊಲೀಸ್ ಪೇದೆ ಯೋಗೇಶ್ ನ.29 ರಂದು ದೂರು ನೀಡಿದ್ದರು. ಆದರೆ ಅಂದಿನಿಂದ ತಲೆಮರೆಸಿಕೊಂಡಿದ್ದ ಶಿಕ್ಷಕ ನಾಗೇಂದ್ರ ಅಯ್ಯಪ್ಪಸ್ವಾಮಿ ವ್ರತ ಆರಂಭಿಸಿ ಮಾಲೆ ಧರಿಸಿ ಮಡಿಕೇರಿಯಲ್ಲಿ ಸ್ನೇಹಿತರೊಂದಿಗೆ ತಂಗಿದ್ದ ಎನ್ನಲಾಗಿದೆ. ಭಾನುವಾರ ಕುಶಾಲನಗರಕ್ಕೆ ಆಗಮಿಸಿದ್ದ ಎಂಬ ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿದ ಕುಶಾಲನಗರ ಪೊಲೀಸರು ಶಿಕ್ಷಕನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಜ.14, ತೆಂಗಿನಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆ

ಮಡಿಕೇರಿ, ಡಿ.20– ನೆಲಜಿ ಫಾರ್ಮರ್ಸ್ ಡೆವಲೆಪ್‌ಮೆಂಟ್ ಮತ್ತು ರಿಕ್ರಿಯೇಶನ್ಸ್ ಅಸೋಸಿಯೇಷನ್ ವತಿಯಿಂದ ಜ.14 ರಂದು ಪ್ರಥಮ ವರ್ಷದ ಕೊಡವ ಕುಟುಂಬಗಳ ನಡುವೆ ತೆಂಗಿನಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆ ನಡೆಯಲಿದೆ ಎಂದು ಅಸೋಸಿಯೇಷನ್ ಅಧ್ಯಕ್ಷ ಮಂಡಿರ ನಂದ ನಂಜಪ್ಪ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 8.30ಕ್ಕೆ ನಾಪೋಕ್ಲುವಿನ ಜನರಲ್ ತಿಮ್ಮಯ್ಯ ಮೈದಾನದಲ್ಲಿ ಪಂದ್ಯಾವಳಿ ಉದ್ಘಾಟನೆಗೊಳ್ಳಲಿದೆ. 0.22 ಮತ್ತು 12 ಬೋರ್ ಬಂದೂಕಿನ ವಿಭಾಗದಲ್ಲಿ ಸ್ಪರ್ಧೆ ನಡೆಯಲಿದೆ ಎಂದರು. ಒಂದು ಕುಟುಂಬದಿಂದ ಒಂದಕ್ಕಿಂತ ಹೆಚ್ಚಿನ ತಂಡಗಳು ಭಾಗವಹಿಸಬಹುದಾಗಿದ್ದು, ಒಂದು ತಂಡದಲ್ಲಿ ಇಬ್ಬರಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಪಂದ್ಯಾವಳಿಯಲ್ಲಿ 1 ಸಾವಿರಕ್ಕೂ ಅಧಿಕ ತಂಡಗಳು ಭಾಗವಹಿಸುವ ನಿರೀಕ್ಷೆಯಿದ್ದು, ಆಸಕ್ತರು ಜ.5ರೊಳಗೆ ಮೈದಾನ ಶುಲ್ಕ 1 ಸಾವಿರ ರೂ. ಪಾವತಿಸಿ ತಂಡದ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವವರು ಕೊಡವ ಉಡುಪಿನಲ್ಲಿ ಆಗಮಿಸುವಂತೆ ಮನವಿ ಮಾಡಿದರು.

ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದವರಿಗೆ ರೂ.50 ಸಾವಿರ, ದ್ವಿತೀಯ ರೂ.30 ಸಾವಿರ ಮತ್ತು ತೃತೀಯ 20 ಸಾವಿರ ನಗದು ಬಹುಮಾನ ಮತ್ತು ಆಕರ್ಷಕ ಟ್ರೋಫಿ ಕೂಡ ನೀಡಲಾಗುವುದು ಎಂದು ತಿಳಿಸಿದರು.

ರಾಜ್ಯ ಮಟ್ಟದ ಸ್ಪರ್ಧೆ: ಅಸೋಸಿಯೇಷನ್ ಸಂಚಾಲಕ ಮಾಳೆಯಂಡ ಅಪ್ಪಣ್ಣ ಮಾತನಾಡಿ, 3ನೇ ವರ್ಷದ ರಾಜ್ಯ ಮಟ್ಟದ ತೆಂಗಿನಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆ ನಾಪೋಕ್ಲುವಿನ ಜನರಲ್ ತಿಮ್ಮಯ್ಯ ಮೈದಾನದಲ್ಲಿ ಜ.15ರಂದು ನಡೆಯಲಿದೆ. ಕ್ರೀಡಾಕೂಟಕ್ಕೆ ಜಿಲ್ಲೆಯ ಜನತೆ ಸೇರಿದಂತೆ ರಾಜ್ಯದ ಆಸಕ್ತರು ಮುಕ್ತವಾಗಿ ಪಾಲ್ಗೊಳ್ಳಬಹುದಾಗಿದೆ ಎಂದರು.

ಪ್ರಥಮ ಸ್ಥಾನ ರೂ.50 ಸಾವಿರ, ದ್ವಿತೀಯ ರೂ.30 ಸಾವಿರ ಮತ್ತು ತೃತೀಯ ರೂ.20 ಸಾವಿರ ರೂ. ನಗದು ಬಹುಮಾನ ಹಾಗೂ ಆಕರ್ಷಕ ಟ್ರೋಫಿ ಕೂಡ ನೀಡಲಾಗುವುದು ಎಂದು ತಿಳಿಸಿದರು.

ಅಸೋಸಿಯೇಷನ್ ಉಪಾಧ್ಯಕ್ಷ ಕೈಬುಲಿರ ಉಮೇಶ್, ಕಾರ್ಯದರ್ಶಿ ಮಾಳೆಯಂಡ ಪ್ರದೀಪ್ ಉತ್ತಪ್ಪ ಖಜಾಂಚಿ ನವೀನ್ ನಾಚಪ್ಪ ಹಾಗೂ ನಿರ್ದೇಶಕ ಮಾಳೆಯಂಡ ಸಿ.ವಿಜಯ್ ಉಪಸ್ಥಿತರಿದ್ದರು.

ಮತದಾನ ಜಾಗೃತಿ

ಮಡಿಕೇರಿ, ಡಿ.20– ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ, ಗೋಣಿಕೊಪ್ಪಲು ಕಾವೇರಿ ಕಾಲೇಜು, ಎನ್‌ಸಿಸಿ ಘಟಕ ಮತ್ತು ವಿ.ಪೇಟೆ ಕೊಡಗು ದಂತ ಮಹಾವಿದ್ಯಾಲಯ ಸಂಯುಕ್ತಾಶ್ರಯದಲ್ಲಿ ಡಿ.23ರಂದು ಬೆಳಗ್ಗೆ 10 ಗಂಟೆಗೆ ನಗರದ ಗಾಂಧಿ ಮೈದಾನದಲ್ಲಿ ಮತದಾನ ಜಾಗೃತಿ ಅಭಿಯಾನಕ್ಕೆ ಚಾಲನೆ ದೊರೆಯಲಿದೆ.

ಜಾನಕಿ ನಿಧನ



ನಾಪೋಕ್ಲು, ಡಿ.20– ಇಲ್ಲಿಗೆ ಸಮೀಪದ ಬಲ್ಲಮಾವಟ್ಟಿಯ ಪೇರೂರು ಗ್ರಾಮದ ಮೂವೇರ ಕುಟ್ಟಪ್ಪನವರ ಲೈನ್ ಮನೆಯಲ್ಲಿ ವಾಸವಾಗಿರುವ ಬಿಲ್ಲವರ ಲೋಕೇಶ್ ಅವರ ಧರ್ಮಪತ್ನಿ ಜಾನಕಿ (51) ಭಾನುವಾರ ರಾತ್ರಿ ನಿಧನರಾದರು.

ಮೃತರ ಅಂತ್ಯಕ್ರಿಯೆ ಸೋಮವಾರ ಪೇರೂರು ಲೈನ್ ಮನೆಯಲ್ಲಿ ಜರುಗಿತು. ಮೃತರು ಪತಿ ಲೋಕೇಶ್, ಪುತ್ರ ಶೀತಲ್, ಪುತ್ರಿ ಮೋನಿಷಾ ಸೇರಿದಂತೆ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

ಇಂದು ಜನ ಸಂಪರ್ಕ ಸಭೆ

ಮಡಿಕೇರಿ, ಡಿ.20– ವಿರಾಜಪೇಟೆ ಉಪವಿಭಾಗ ವ್ಯಾಪ್ತಿಯ ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ನಿವಾರಿಸಲು ಡಿ.21ರಂದು ಬೆಳಗ್ಗೆ 11ರಿಂದ 12 ಗಂಟೆವರೆಗೆ ವಿರಾಜಪೇಟೆ ಉಪವಿಭಾಗ ಕಚೇರಿ ಆವರಣದಲ್ಲಿ ಅಧೀಕ್ಷಕ ಎಂಜಿನಿಯರ್, ಸೆಸ್ಕ್, ಕೊಡಗು ಮತ್ತು ಚಾಮರಾಜನಗರ ವೃತ್ತ ಅವರ ಅಧ್ಯಕ್ಷತೆಯಲ್ಲಿ ಜನಸಂಪರ್ಕ ಸಭೆ ನಡೆಯಲಿದೆ.

ಗೋಣಿಕೊಪ್ಪಲು ವ್ಯಾಪ್ತಿಯ ವಿದ್ಯುತ್ ಗ್ರಾಹಕರ ಕುಂದು ಕೊರತೆ ನಿವಾರಿಸುವ ಸಭೆ ಡಿ.21 ರಂದು ಮಧ್ಯಾಹ್ನ 1 ರಿಂದ 2 ಗಂಟೆವರೆಗೆ ಗೋಣಿಕೊಪ್ಪಲು ಉಪವಿಭಾಗ ಕಚೇರಿ ಆವರಣದಲ್ಲಿ ಅಧೀಕ್ಷಕ ಎಂಜಿನಿಯರ್, ಸೆಸ್ಕ್, ಕೊಡಗು ಮತ್ತು ಚಾಮರಾಜನಗರ ವೃತ್ತರವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಹೊದ್ದೂರು ಶ್ರೀಶಾಸ್ತ ಈಶ್ವರನಿಗೆ ಬೆಳ್ಳಿ–ಕಂಚಿನ ಕವಚಧಾರಣೆ



ಮಡಿಕೇರಿ, ಡಿ.20– ಹೊದ್ದೂರು ಶ್ರೀ ಶಾಸ್ತ–ಈಶ್ವರ ದೇವರಿಗೆ ಬೆಳ್ಳಿ ಹಾಗೂ ಕಂಚಿನ ಕವಚಧಾರಣೆ ಮತ್ತು ಶ್ರೀ ಮಹಾ ಗಣಪತಿ ದೇವರಿಗೆ ಕಂಚಿನ ಕವಚಧಾರಣೆ ಮಹೋತ್ಸವ ಶ್ರದ್ಧಾಭಕ್ತಿಯಿಂದ ನಡೆಯಿತು. ಉದ್ಯಮಿಗಳಾದ ಎ.ಆರ್. ರಾಜೇಶ್, ರಾಜೇಂದ್ರ ಹಾಗೂ ವೆಂಕಟೇಶ್ ಕುಮಾರ್ ನೀಡಿದ ಬೆಳ್ಳಿಯ ಮತ್ತು ಕಂಚಿನ ಕವಚವನ್ನು ಅಭಿಷೇಕದ ನಂತರ ದೇವರಿಗೆ ತೊಡಿಸಲಾಯಿತು.

ನಂತರ ಶ್ರೀ ಬೇಟೆ ಅಯ್ಯಪ್ಪ ಹಾಗೂ ಶ್ರೀ ವಿಷ್ಣುಮೂರ್ತಿ(ಚಾಮುಂಡಿ) ದೇವರಿಗೆ ಕಲಶಾಭಿಷೇಕ ನಡೆಯಿತು. ಲೋಕ ಕಲ್ಯಾಣಾರ್ಥವಾಗಿ ಸಾಮೂಹಿಕ ಸತ್ಯನಾರಾಯಣ ಪೂಜೆ ಶ್ರದ್ಧಾಭಕ್ತಿಯಿಂದ ನೆರವೇರಿತು. ಬೆಂಗಳೂರಿನ ಪುರೋಹಿತರಾದ ಜನಾರ್ದನ ಹಾಗೂ ತಂಡದ ನೇತೃತ್ವದಲ್ಲಿ ದೇವಾಲಯದ ಅರ್ಚಕರಾದ ಹರಿಪ್ರಸಾದ್ ಮುಂದಾಳತ್ವದಲ್ಲಿ ಪೂಜಾ ಕೈಂಕರ್ಯಗಳು ನಡೆದವು.

ಮೈತಾಡಿ ಮಾಧವ ತಂಡದವರ ಚಂಡೆ ಮದ್ದಳೆಯೊಂದಿಗೆ ಪುಣ್ಯಾಹವನ, ಸ್ಥಳಶುದ್ಧಿ, ಗಣಪತಿ ಹೋಮ, ಮಹಾ ಮಂಗಳಾರತಿ, ತೀರ್ಥ ಪ್ರಸಾದ ವಿತರಣೆ ಹಾಗೂ ಅನ್ನಸಂತರ್ಪಣೆ ನಡೆಯಿತು. ದೇವಾಲಯ ಸಮಿತಿ ಅಧ್ಯಕ್ಷ ಕೂಡಂಡ ರಾಜೇಂದ್ರ ಅಯ್ಯಮ್ಮ, ಪದಾಧಿಕಾರಿಗಳು ಹಾಗೂ ಭಕ್ತ ಸಮೂಹ ಪೂಜಾ ಮಹೋತ್ಸವಕ್ಕೆ ಸಾಕ್ಷಿಯಾದರು.

ಮಳವಳ್ಳಿಯಲ್ಲಿ ಪಂಚರತ್ನ ಯಾತ್ರೆ ಯಶಸ್ವಿ

ಶಾಸಕ ಡಾ.ಕೆ.ಅನ್ನದಾನಿ ನೇತೃತ್ವದ ಜೆಡಿಎಸ್ ಮುಖಂಡರಿಂದ ಅದ್ದೂರಿ ಸ್ವಾಗತ

ಮಳವಳ್ಳಿ, ಡಿ.20– ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಆರಂಭಿಸಿರುವ ಪಂಚರತ್ನ ರಥಯಾತ್ರೆ ಮಳವಳ್ಳಿ ತಾಲೂಕಿನ ಹಲಗೂರು ಹೋಬಳಿ ದೇವಿರಹಳ್ಳಿ ಮೂಲಕ ಸಕ್ಕರೆ ನಾಡಿಗೆ ಪ್ರವೇಶಿಸಿದ್ದು, ಡಿ.26ರವರೆಗೆ ಜಿಲ್ಲೆಯ ಎಲ್ಲಾ ತಾಲೂಕಿನಲ್ಲಿ ಸಂಚರಿಸಲಿದೆ.

ಪಂಚರತ್ನ ರಥಯಾತ್ರೆಯನ್ನು ಶಾಸಕ ಡಾ.ಕೆ.ಅನ್ನದಾನಿ ನೇತೃತ್ವದಲ್ಲಿ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಅದ್ದೂರಿಯಾಗಿ ಸ್ವಾಗತಿಸಿದರು. ಜೆಸಿಬಿಗಳಲ್ಲಿ ಹೂವಿನ ಸುರಿಮಳೆ, ಕ್ರೇನ್‌ಗಳ ಮೂಲಕ ಬೃಹತ್ ಹೂವಿನ ಹಾರ ಹಾಕುವ ಮೂಲಕ ದೇವಿರಹಳ್ಳಿ ಗ್ರಾಮದಲ್ಲಿ ಮಹಿಳೆಯರು ಪೂರ್ಣಕುಂಭ ಸ್ವಾಗತ ನೀಡಿ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರನ್ನು ಬರಮಾಡಿಕೊಂಡರು. ಹಲಗೂರಿನ ಸರ್ಕಲ್‌ನಲ್ಲಿ ನೆರೆದಿದ್ದ ಸಾವಿರಾರು ಕಾರ್ಯಕರ್ತರನ್ನು ಕಂಡು ಎಚ್‌ಡಿಕೆ ಸಂತಸಪಟ್ಟರು.

ಈ ವೇಳೆ ವಿಶೇಷವಾಗಿ ಬೆಲ್ಲ ಹಾಗೂ ವಿವಿಧ ಬಗೆಯ ಹೂವುಗಳಿಂದ ಮಾಡಿದ ಬೃಹತ್ ಹಾರವನ್ನು ಎಚ್‌ಡಿಕೆ ಅವರಿಗೆ ಹಾಕಲಾಯಿತು. ನಂತರ ಹಾಡ್ಲಿ ಸರ್ಕಲ್ ಬಳಿ ಬಂದ ಪಂಚರತ್ನ ರಥಯಾತ್ರೆಯನ್ನು ಕಾರ್ಯಕರ್ತರು ಪಟಾಕಿ ಸಿಡಿಸಿ ಬರಮಾಡಿಕೊಂಡರು. ಇದೇ ವೇಳೆ ಬೃಹತ್ ಹೂವಿನ ಹಾರ ಹಾಕಿ, ಜೆಡಿಎಸ್ ಯುವ ಘಟಕದ ಜಿಲ್ಲಾ ಅಧ್ಯಕ್ಷ ಬಿ.ರವಿ ಕಂಸಾಗರ ನೇತೃತ್ವದಲ್ಲಿ 100 ಕೆ.ಜಿ.ತೂಕದ ಕೇಕ್ ಕತ್ತರಿಸುವ ಮೂಲಕ ಎಚ್‌ಡಿಕೆ ಅವರ ಜನ್ಮ ದಿನವನ್ನು ಆಚರಿಸಿದರು.

ಪಟ್ಟಣದ ಅನಂತ್ ರಾಂ ಸರ್ಕಲ್ ಬಳಿ ಕುಮಾರಸ್ವಾಮಿ ಅವರಿಗೆ ಹೆಲಿಕಾಪ್ಟರ್ ಮೂಲಕ ಪುಷ್ಪ ಮಳೆ ಸುರಿಸಲಾಯಿತು. ಬಳಿಕ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ಎಚ್.ಡಿ.ಕುಮಾರಸ್ವಾಮಿ, ಪಂಚರತ್ನ ರಥಯಾತ್ರೆ 25 ವಿಧಾನಸಭಾ ಕ್ಷೇತ್ರಗಳಲ್ಲಿ ಸಂಚಾರ ಮಾಡಿದ್ದು, ಜನರ ಆಶೀರ್ವಾದ ಪಡೆಯುವ ನಿಟ್ಟಿನಲ್ಲಿ ಸಹಕಾರಿಯಾಗಿದ್ದು, ಕಾರ್ಯಕರ್ತರ ಉತ್ಸಾಹಕ್ಕೆ ತಲೆಬಾಗಿರುವೆ ಎಂದರು. ಎರಡು ಬಾರಿ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾದರೂ ಆರೋಗ್ಯವನ್ನು ಲೆಕ್ಕಿಸದೇ ನಾಡಿನ ಜನರಿಗಾಗಿ ಹೋರಾಟ ನಡೆಸುತ್ತಿರುವೆ. ಪ್ರತಿದಿನ 70ರಿಂದ 80 ಗ್ರಾಮಗಳಿಗೆ ಭೇಟಿ ನೀಡುತ್ತಿರುವೆ. ಒಂದು ಸಲ 123 ಸ್ಥಾನ ನೀಡುವ ಮೂಲಕ ಪೂರ್ಣ ಪ್ರಮಾಣದ ಸರ್ಕಾರದ ರಚನೆಗೆ ಅವಕಾಶ ನೀಡಿ. ನಿಮ್ಮ ಎಲ್ಲ ಸಮಸ್ಯೆಗಳಿಗೂ ಪರಿಹಾರ ಕಲ್ಪಿಸುವೆ ಎಂದರು.

ನಮ್ಮ ಪಂಚರತ್ನ ಯೋಜನೆ ಜಾರಿಗೆ 1 ಲಕ್ಷ 25 ಸಾವಿರ ಕೋಟಿ ರೂ. ಬೇಕು. ಎರಡೂ ರಾಷ್ಟ್ರೀಯ ಪಕ್ಷಗಳಿಂದ ಜನರಿಗೆ ದ್ರೋಹವಾಗಿದೆ. ಈ ಬಾರಿಯ ಚುನಾವಣೆಯಲ್ಲಿ ಮಣ್ಣಿನ ಮಕ್ಕಳ ಸರ್ಕಾರ ಬರಲಿದೆ ಕೆಎಸ್‌ಆರ್‌ಟಿಸಿ ನೌಕರರ ಖಾಯಂಗೆ ಹಾಗೂ ಹಳೆ ಪಿಂಚಣಿ ಮರುಜಾರಿಗಾಗಿ ಹೋರಾಟ ನಡೆಯುತ್ತಿದೆ. ಒಳ ಮೀಸಲಾತಿ ಜಾರಿಯ ಬಗ್ಗೆ ಮನವಿ ಮಾಡಿದ್ದೀರಾ, ಕಳೆದ ಏಳೆಂಟು ವರ್ಷಗಳಿಂದ ಸದಾಶಿವ ಆಯೋಗ ವರದಿ ಬಂದರೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ನಮ್ಮ ಸರ್ಕಾರದಲ್ಲಿ ಎಲ್ಲರ ಸಭೆ ಕರೆದು ಒಂದು ತಿಂಗಳಲ್ಲಿ ಕ್ರಮ ವಹಿಸುವೆ. ಸ್ವಾರ್ಥಕ್ಕಾಗಿ ಹೋರಾಟ ಮಾಡುತ್ತಿಲ್ಲ. ಜನರಿಗಾಗಿ ಮಾಡುತ್ತಿರುವೆ. ಡಾ.ಕೆ.ಅನ್ನದಾನಿ ಅವರನ್ನು ಈ ಬಾರಿ 50 ಸಾವಿರ ಮತದಿಂದ ಆಯ್ಕೆ ಮಾಡಿ ಎಂದರು.

ತಾಲೂಕಿನ ಕಂದೇಗಾಲದ ಗ್ರಾಮದ ಶಿವಮಾದು ಹಾಗೂ ಸ್ನೇಹಿತರು ಎಚ್‌ಡಿಕೆಗೆ ಹಸು ಮತ್ತು ಕರು ಹಾಗೂ ಪಟ್ಟಣದ ಗಣೇಶ್ ಕಾಂಪ್ಲೆಕ್ಸ್‌ನ ಶಿವಲಿಂಗೇಗೌಡ ಎಂಬುವರು ಚುನಾವಣೆ ಖರ್ಚಿಗಾಗಿ 50 ಸಾವಿರ ರೂ. ನಗದು ನೀಡಿದರು. ಈ ವೇಳೆ ಪ್ರತಿಕ್ರಿಯಿಸಿದ ಕುಮಾರಣ್ಣ 2023ಕ್ಕೆ ಹಸು ಮತ್ತು ಕರುವಿನೊಂದಿಗೆ ಹೋಗಿ ಪ್ರಮಾಣ ವಚನ ಸ್ವೀಕರಿಸುವೆ ಎಂದರು.

ಶಾಸಕರಾದ ಡಾ.ಕೆ.ಅನ್ನದಾನಿ, ಸಿ.ಎಸ್.ಪುಟ್ಟರಾಜು, ಮಾಜಿ ಎಂಎಲ್‌ಸಿ ಕೆ.ಟಿ.ಶ್ರೀಕಂಠೇಗೌಡ, ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಡಿ.ರಮೇಶ್, ಯುವ ಘಟಕದ ಅಧ್ಯಕ್ಷ ಬಿ.ರವಿ ಕಂಸಾಗರ, ತಾಲೂಕು ಘಟಕದ ಅಧ್ಯಕ್ಷ ವಿ.ಎಂ. ವಿಶ್ವನಾಥ್, ಪುರಸಭೆ ಅಧ್ಯಕ್ಷೆ ರಾಧಾ, ಉಪಾಧ್ಯಕ್ಷ ಎಂ.ಟಿ.ಪ್ರಶಾಂತ್, ಮಾಜಿ ಅಧ್ಯಕ್ಷ ದೊಡ್ಡಯ್ಯ ಇದ್ದರು.

ಅವಮಾನ ಮಾಡಿಲ್ಲ: 2006ರಲ್ಲಿ ಮುಖ್ಯಮಂತ್ರಿಯಾಗಿದ್ದ ವೇಳೆ ಕೆ.ಆರ್.ನಗರದ 10 ವರ್ಷದ ದಲಿತ ಹೆಣ್ಣು ಮಗುವಿಗೆ ಹೃದಯ ಚಿಕಿತ್ಸೆ ಕೊಡಿಸಿ ಮುಖ್ಯಮಂತ್ರಿಗಳ ಕಚೇರಿಗಳಲ್ಲಿ 3 ತಿಂಗಳು ವಾಸ್ತವ್ಯ ಮಾಡಿಸಿದ್ದೆ ಮೈಸೂರಿನಲ್ಲಿ ದಲಿತರ ಮನೆಯಲ್ಲಿ ವಾಸ್ತವ್ಯ ಮಾಡಿದ್ದೆ. ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪನವರ ಜಿಲ್ಲೆಯಿಂದ ದಲಿತ ಮಹಿಳೆಯೊಬ್ಬರು ಸಹಾಯ ಕೇಳಿ ಬಂದಿದ್ದರು. ಹೀಗೆ ಸಾಕಷ್ಟು ಉದಾಹರಣೆಗಳಿವೆ. ದಲಿತರಿಗೆ ಅವಮಾನ ಮಾಡಿಲ್ಲ ಎಂದು ಅವರು ಸಿ.ಎಂ.ಇಬ್ರಾಹಿಂ ವಿಚಾರದಲ್ಲಿ ಮುಸ್ಲಿಂ ಮುಖ್ಯಮಂತ್ರಿ ವಿಷಯವನ್ನು ಎತ್ತಿದ ತಂದ ಮುಖಂಡರ ಪ್ರಶ್ನೆಗೆ ಉತ್ತರಿಸಿದರು.

ಮಳವಳ್ಳಿ ಪಟ್ಟಣ ಪ್ರವೇಶಿಸಿದ ಎಚ್.ಡಿ.ಕುಮಾರಸ್ವಾಮಿ ಅವರು ಗೋ ಮಾತೆಗೆ ಪೂಜೆ ಸಲ್ಲಿಸಿದರು. ನಂತರ ಕೃಷ್ಣ ಎಂಬ ಹಳ್ಳಿಕಾರ್ ಹೋರಿಯೊಂದಿಗೆ ಪಟ್ಟಣದ ಅನಂತ್ ರಾಂ ಸರ್ಕಲ್ ಬಳಿ ಬಂದರು. ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಎಚ್.ಡಿ.ಕುಮಾರಸ್ವಾಮಿ ಅವರು ಮಧ್ಯಾಹ್ನದ ಭೋಜನವಾಗಿ ಮುದ್ದೆ, ಸೊಪ್ಪು ಸಾರು ಸೇವಿಸಿದರು. ಅವರಿಗೆ ಶಾಸಕರಾದ ಸಿ.ಎಸ್.ಪುಟ್ಟರಾಜು ಹಾಗೂ ಡಾ.ಕೆ.ಅನ್ನದಾನಿ ಸಾಥ್ ನೀಡಿದರು.





ಇಂದು ಭಾರತೀನಗರಕ್ಕೆ ಪಂಚರತ್ನ ಯಾತ್ರೆ

ಭಾರತೀನಗರ, ಡಿ.20– ಡಿ. 21ರಂದು ಬೆಳಗ್ಗೆ 10 ಗಂಟೆಗೆ ಮದ್ದೂರು ವಿಧಾನಸಭಾ ಕ್ಷೇತ್ರದ ಭಾರತೀನಗರಕ್ಕೆ ಆಗಮಿಸುವ ಪಂಚರತ್ನ ರಥಯಾತ್ರೆ ಸ್ವಾಗತಿಸಲು ಕಾರ್ಯಕರ್ತರು ಸಜ್ಜುಗೊಂಡಿದ್ದಾರೆ.

ಪಟ್ಟಣದಲ್ಲಿ ಆಯೋಜನೆಗೊಂಡಿರುವ ಸಾರ್ವಜನಿಕ ಸಭೆಯಲ್ಲಿ ಭಾಗಿಯಾಗುವ ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ ಹಾಗೂ ಇತರ ನಾಯಕರಿಗೆ ಹೆಲಿಕಾಪ್ಟರ್ ಮೂಲಕ ಪುಷ್ಪಾರ್ಚನೆ ಮಾಡಲು ಸಿದ್ಧತೆ ನಡೆಸಲಾಗಿದೆ.


ಮದ್ದೂರು ವಿಧಾನಸಭಾ ಕ್ಷೇತ್ರದ ಭಾರತೀನಗರ, ದೊಡ್ಡರಸಿನಕೆರೆಗೇಟ್, ಗುರುದೇವರಹಳ್ಳಿ, ತೊರೆಚಾಕನಹಳ್ಳಿ, ನಗರಕೆರೆ, ಮದ್ದೂರು, ಸೋಮನಹಳ್ಳಿ, ತೊರೆಶೆಟ್ಟಿಹಳ್ಳಿ, ಕೆಸ್ತೂರು, ಮುಳ್ಳಹಳ್ಳಿ, ಬೆಸಗರಹಳ್ಳಿ, ಚಾಮನಹಳ್ಳಿ ಮೂಲಕ ಮದ್ದೂರು ಪಟ್ಟಣ ಹಾಗೂ ಅಂತಿಮವಾಗಿ ಗೆಜ್ಜಲಗೆರೆಯಲ್ಲಿ ಕುಮಾರಸ್ವಾಮಿ ವಾಸ್ತವ್ಯ ಹೂಡಲು ಸಿದ್ಧತೆ ಮಾಡಲಾಗಿದೆ. ಡಿ.22ರಂದು ಮಂಡ್ಯ ತಾಲೂಕಿನ ಹನಕೆರೆ ಗ್ರಾಮದ ಮೂಲಕ ಮಂಡ್ಯ ವಿಧಾನ ಸಭಾ ಕ್ಷೇತ್ರಕ್ಕೆ ಆಗಮಿಸಲಿದೆ.

ಉಪ್ಪಾರಹಳ್ಳಿ ಸರ್ಕಾರಿ ಶಾಲೆಯಲ್ಲಿ ಕಳ್ಳತನ

ನಾಗಮಂಗಲ, ಡಿ.20– ಸರ್ಕಾರಿ ಶಾಲಾ ಕೊಠಡಿ ಬೀಗ ಒಡೆದು ಸಿಲಿಂಡರ್ ಮತ್ತು ಡೆಸ್ಕ್‌ನ ಕಬ್ಬಿಣದ ಸ್ಟ್ಯಾಂಡ್‌ಗಳನ್ನು ಕಳವು ಮಾಡಿರುವ ಘಟನೆ ತಾಲೂಕಿನ ಉಪ್ಪಾರಹಳ್ಳಿ ಶನಿವಾರ ರಾತ್ರಿ ನಡೆದಿದೆ.

ಈ ಸಂಬಂಧ ಪಟ್ಟಣ ಠಾಣೆಯಲ್ಲಿ ದೂರು ದಾಖಲಾಗಿದ್ದು, ಎಎಸ್ಐ ಚನ್ನಬಸಪ್ಪ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ವಾರದ ಹಿಂದೆ ಇದೇ ಶಾಲೆಯ ಗೋದಾಮಿನಲ್ಲಿದ್ದ 5 ಸಿಲಿಂಡರ್ ಕಳವಾಗಿದ್ದನ್ನು ಸ್ಮರಿಸಬಹುದು.

ಪಂಚರತ್ನ ಯಾತ್ರೆಗೆ ಬಿಜೆಪಿ ಧೂಳೀಪಟ: ಮಹಾಲಿಂಗೇಗೌಡ



ಮಂಡ್ಯ, ಡಿ.20– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಕಂದಾಯ ಸಚಿವ ಆರ್.ಅಶೋಕ್ ಅವರು ಮಂಡ್ಯದಲ್ಲಿ ನಾಲ್ಕೈದು ಕ್ಷೇತ್ರಗಳನ್ನು ಬಿಜೆಪಿ ಗೆಲ್ಲುತ್ತದೆ ಎಂದು ಕನಸು ಕಾಣುತ್ತಿದ್ದಾರೆ. ಜೆಡಿಎಸ್‌ನ ಪಂಚರತ್ನ ಯಾತ್ರೆ ಚಂಡ ಮಾರುತಕ್ಕೆ ಸಿಲುಕಿ ಮಂಡ್ಯದಲ್ಲಿ ಬಿಜೆಪಿ ಧೂಳೀಪಟವಾಗಲಿದೆ ಎಂದು ಜಿಲ್ಲಾ ಜೆಡಿಎಸ್ ವಕ್ತಾರ ಮಹಾಲಿಂಗೇಗೌಡ ಮುದ್ದನಘಟ್ಟ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿಗಳೇ ನೀವು ಬದಲಾವಣೆ ಬಿರುಗಾಳಿ ಆರಂಭವಾಗಿದೆ ಎಂದಿರಿ. ಆದರೆ ನಮ್ಮ ಕುಮಾರಣ್ಣ ಅವರ ಪಂಚರತ್ನ ಯೋಜನೆಗಳು ಈಗಾಗಲೇ ಜನರ ಮನಸೂರೆಗೊಂಡಿದ್ದು, ನಿಮ್ಮ ಬಿರುಗಾಳಿಯನ್ನು ನಮ್ಮ ಪಂಚರತ್ನ ಯೋಜನೆ ಚಂಡಮಾರುತ ಕೊಚ್ಚಿ ಹಾಕುತ್ತದೆ ಎಂದು ತಿರುಗೇಟು ನೀಡಿದರು.

ಡಿ.22 ರಂದು ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ಯಾತ್ರೆ ಸಂಚಾರ ಮಾಡಲಿದೆ. ಯಾತ್ರೆ ಭಾಗವಾಗಿ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಬೃಹತ್ ಬಹಿರಂಗ ಸಭೆ ನಡೆಯಲಿದ್ದು, ಸಭೆಯನ್ನುದ್ದೇಶಿಸಿ ಎಚ್.ಡಿ.ಕುಮಾರಸ್ವಾಮಿ ಹಾಗೂ ಜೆಡಿಎಸ್ ಮುಖಂಡರು ಮಾತನಾಡಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಜೆಡಿಎಸ್ ಮುಖಂಡರಾದ ವೆಂಕಟೇಶ್, ಶಶಿಕುಮಾರ್, ರಾಮಕೃಷ್ಣ, ಗೌತಮ್ ಸೇರಿದಂತೆ ಇದ್ದರು.

ಮೈಸೂರು ಮಿತ್ರ



ಚಾಮರಾಜನಗರ ಕ್ಷೇತ್ರದ ಶಾಸಕರ ಪರಂಪರೆ

1952	ಯು.ಎಂ.ಮಾದಪ್ಪ –ಕೆಎಂಪಿಐ	
1957	ದ್ವಿ ಸದಸ್ಯ ಕ್ಷೇತ್ರ– ಯು.ಎಂ.ಮಾದಪ್ಪ– ಪಿಎಸ್ಪಿ	
	ಬಿ.ರಾಚಯ್ಯ	ಕಾಂಗೆಸ್
1962	ಎಂ.ಸಿ.ಬಸಪ್ಪ	ಕಾಂಗ್ರೆಸ್
1967	ಎಸ್.ಪುಟ್ಟಸ್ವಾಮಿ	ಪಕ್ಷೇತರ
1972	ಎಸ್.ಪುಟ್ಟಸ್ವಾಮಿ	ಕಾಂಗ್ರೆಸ್
1978	ಎಂ.ಸಿ.ಬಸಪ್ಪ	ಜನತಾ ಪಕ್ಷ
1983	ಎಸ್.ಪುಟ್ಟಸ್ವಾಮಿ	ಕಾಂಗ್ರೆಸ್
1985	ಎಸ್.ಪುಟ್ಟಸ್ವಾಮಿ	ಕಾಂಗ್ರೆಸ್
1989	ವಾಟಾಳ್ ನಾಗರಾಜ್	ಪಕ್ಷೇತರ
1994	ವಾಟಾಳ್ ನಾಗರಾಜ್	ಪಕ್ಷೇತರ
1999	ಸಿ.ಗುರುಸ್ವಾಮಿ	ಬಿಜೆಪಿ
2004	ವಾಟಾಳ್ ನಾಗರಾಜ್	ವಾಟಾಳ್ ಪಕ್ಷ
2008	ಸಿ.ಪುಟ್ಟರಂಗಶೆಟ್ಟಿ	ಕಾಂಗ್ರೆಸ್
2013	ಸಿ.ಪುಟ್ಟರಂಗಶೆಟ್ಟಿ	ಕಾಂಗ್ರೆಸ್
2018	ಸಿ.ಪುಟ್ಟರಂಗಶೆಟ್ಟಿ	ಕಾಂಗ್ರೆಸ್


ಚಾ.ನಗರದ 'ಮೂಢನಂಬಿಕೆ' ಧೂಳು ಗುಡಿಸಿ ಹೊರಹಾಕಿದ ನಂತರ

ಕೈ ಸಾಮ್ರಾಜ್ಯದಲ್ಲಿ ಕಮಲ ಕೋಟೆ ಕಟ್ಟಲು ಪೈಪೋಟಿ







ಸಿ.ಪುಟ್ಟರಂಗಶೆಟ್ಟಿ


ಮಲ್ಲಿಕಾರ್ಜುನಪ್ಪ


ನಾಗಶ್ರೀ ಪ್ರತಾಪ್


ಎಂ.ರಾಮಚಂದ್ರ



ನಿಜಗುಣರಾಜು


ಅಮ್ಮನಪುರ ಮಲ್ಲೇಶ್


ಡಾ.ಎ.ಆರ್.ಬಾಬು


ಪಿ.ವೃಷಬೇಂದ್ರಪ್ಪ


ಎಂ.ರುದ್ರೇಶ್


ವಾಟಾಳ್ ನಾಗರಾಜು


ಜಿ.ಎಂ.ಗಾಡ್ಕರ್

● ಸಿದ್ದಲಿಂಗಸ್ವಾಮಿ

ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್‌ಗಾಗಿ ಬಿಜೆಪಿಯಿಂದ ಮಾತ್ರ ಆಕಾಂಕ್ಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪೈಪೋಟಿ ನಡೆಸುತ್ತಿದ್ದಾರೆ.

ಈ ಕ್ಷೇತ್ರ ಕಾಂಗ್ರೆಸ್‌ನ ಭದ್ರಕೋಟೆಯಾಗಿದ್ದರೂ ಹಾಲಿ ಶಾಸಕ ಸಿ. ಪುಟ್ಟರಂಗಶೆಟ್ಟಿ ಹೊರತು ಪಡಿಸಿ ಬೇರ‍್ಯಾರು ಟಿಕೆಟ್‌ಗಾಗಿ ಕೆಪಿಸಿಸಿಗೆ ಅರ್ಜಿ ಸಲ್ಲಿಸಿಲ್ಲ. ಹಾಲಿ ಶಾಸಕರಿಗೆ ಟಿಕೆಟ್ ನೀಡುವ ಕಾಂಗ್ರೆಸ್‌ನ ಸಂಪ್ರದಾಯದಂತೆಯೋ ಏನೋ ಪುಟ್ಟರಂಗಶೆಟ್ಟಿ ಅವರಿಗೆ ಟಿಕೆಟ್ ಗಟ್ಟಿ ಎಂಬ ಭಾವನೆಯಿಂದ ಇತರ ಯಾವುದೇ ಮುಖಂಡರು ಅರ್ಜಿ ಸಲ್ಲಿಸುವ ಗೋಜಿಗೆ ಹೋಗಿಲ್ಲ. ಈ ಕ್ಷೇತ್ರದಲ್ಲಿ ಇದುವರೆಗೆ ನಡೆದಿರುವ 15 ಚುನಾವಣೆಗಳ ಪೈಕಿ ಕಾಂಗ್ರೆಸ್ 8 ಬಾರಿ ಗೆಲುವು ಸಾಧಿಸುವ ಮೂಲಕ ಈ ಕ್ಷೇತ್ರ ತನ್ನ ಭದ್ರಕೋಟೆ ಎಂಬುದನ್ನು ಸಾಬೀತುಪಡಿಸಿದೆ. ನಾಲ್ಕು ಬಾರಿ ಪಕ್ಷೇತರ ಅಭ್ಯರ್ಥಿಗಳನ್ನು ಇಲ್ಲಿನ ಮತದಾರರು ಆಯ್ಕೆ ಮಾಡಿದ್ದು, ಅದರಲ್ಲಿ ವಾಟಾಳ್ ನಾಗರಾಜ್ 3 ಬಾರಿ ಹಾಗೂ ಎಸ್. ಪುಟ್ಟಸ್ವಾಮಿ ಒಮ್ಮೆ ಆಯ್ಕೆಯಾಗಿದ್ದಾರೆ. ವಿಶೇಷವೆಂದರೆ ಎಸ್.ಪುಟ್ಟಸ್ವಾಮಿ ಅವರು ಮೊದಲ ಚುನಾವಣೆಯಲ್ಲಿ ಪಕ್ಷೇತರರಾಗಿ ಆಯ್ಕೆಯಾದ ನಂತರ ಮೂರು ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದ್ದಾರೆ. ಕ್ಷೇತ್ರ ಪುನರ್‌ವಿಂಗಡನೆಯಾದ ನಂತರ ಈ ಕ್ಷೇತ್ರದಲ್ಲಿ 2008ರಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿಯಿಂದ ಪ್ರಬಲ ಅಭ್ಯರ್ಥಿ ಎಂದು ಹೇಳಲಾಗಿದ್ದ ಮಾಜಿ ಸಚಿವ ಎಂ. ಮಹದೇವು ಸ್ಪರ್ಧಿಸಿದ್ದರು. ಆಗ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ, ಮಹದೇವು ಅವರ ಶಿಷ್ಯನೇ ಆಗಿದ್ದ ಸಿ.ಪುಟ್ಟರಂಗಶೆಟ್ಟಿ ಅಚ್ಚರಿಯ ಗೆಲುವು ಸಾಧಿಸಿದ್ದರು. ಆ ನಂತರ ನಡೆದ ಎರಡು ಚುನಾವಣೆಗಳಲ್ಲೂ ಗೆಲ್ಲುವ ಮೂಲಕ ಚಾಮರಾಜನಗರದಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿದ ಶಾಸಕ ಎಂಬ ದಾಖಲೆ ನಿರ್ಮಿಸಿದ್ದಾರೆ.

ಜನತಾ ಪಕ್ಷ ಒಮ್ಮೆ ಮಾತ್ರ ಈ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದು, 1962ರಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದ್ದ ಎಂ.ಸಿ.ಬಸಪ್ಪ ಅವರಿಗೆ ಟಿಕೆಟ್ ತಪ್ಪಿದ ಕಾರಣದಿಂದ ಅವರು 1978ರಲ್ಲಿ ಜನತಾ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು. ಬಿಜೆಪಿ ಕೂಡ ಒಮ್ಮೆ ಚಾಮರಾಜನಗರ ಕ್ಷೇತ್ರದಲ್ಲಿ ಗೆಲುವು ಸಾಧಿಸಿದೆ. 1999ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಸಿ. ಗುರುಸ್ವಾಮಿ ಗೆಲ್ಲುವ ಮೂಲಕ ವಾಟಾಳ್ ನಾಗರಾಜ್ ಅವರಿಗೆ ಹ್ಯಾಟ್ರಿಕ್ ಗೆಲುವನ್ನು ತಪ್ಪಿಸಿದ್ದರು.

ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಬಗ್ಗೆ ಎರಡು ವಿಷಯಗಳಲ್ಲಿ ಮೂಢನಂಬಿಕೆ ಮನೆ ಮಾಡಿತ್ತು. ಈ ಕ್ಷೇತ್ರದಿಂದ ಗೆಲ್ಲುವ ಅಭ್ಯರ್ಥಿಯ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬರುವುದಿಲ್ಲ. ಹೀಗಾಗಿ ಈ ಕ್ಷೇತ್ರದ ಶಾಸಕರಿಗೆ ಸಚಿವರಾಗುವ ಯೋಗ ಇಲ್ಲ ಎಂಬ ಮಾತುಗಳು ಕೇಳಿಬಂದವು. ಅದಕ್ಕೆ ಪೂರಕವೆಂಬಂತೆ ಮೂರು ಬಾರಿ ಎಸ್.ಪುಟ್ಟಸ್ವಾಮಿ ಅವರು ಕಾಂಗ್ರೆಸ್‌ನ ಶಾಸಕರಾದರೂ ಕೂಡ ಆ ವೇಳೆ ಪಕ್ಷ ಅಧಿಕಾರಕ್ಕೆ ಬಾರದ ಕಾರಣ ಹಿರಿಯರಾದ ಅವರು ಸಚಿವರಾಗಲು ಸಾಧ್ಯವೇ ಆಗಲಿಲ್ಲ. ಇದು ಬರೀ ಮೂಢನಂಬಿಕೆ ಎಂಬುದು ಸಾಬೀತಾಗಿದ್ದು 2013ರ ಚುನಾವಣೆಯಲ್ಲಿ. ಆಗ ಪುಟ್ಟರಂಗಶೆಟ್ಟಿ ಎರಡನೇ ಬಾರಿಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದರು. ಆ ವೇಳೆ ಬಹುಮತದೊಂದಿಗೆ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಸಿದ್ದರಾಮಯ್ಯ ಸಂಪುಟದಲ್ಲಿ ಪುಟ್ಟರಂಗಶೆಟ್ಟಿ ಸಚಿವರಾದರು.

ಮತ್ತೊಂದು ವಿಚಾರವೆಂದರೆ ಚಾಮರಾಜನಗರಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿಗಳು ಆರು ತಿಂಗಳ ಒಳಗಾಗಿ ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬುದು. ಈ ಮೂಢನಂಬಿಕೆಯನ್ನು ಬಹುತೇಕ ಎಲ್ಲಾ ಮುಖ್ಯಮಂತ್ರಿಗಳು ಬಲವಾಗಿ ನಂಬಿದ್ದರು. ಸಮಾಜವಾದಿ ಹಿನ್ನೆಲೆ ಹೊಂದಿರುವ ಜೆ.ಹೆಚ್. ಪಟೇಲ್ ಅವರು ಮುಖ್ಯಮಂತ್ರಿಗಳಾಗಿದ್ದಾಗಲೇ ಚಾಮ ರಾಜನಗರ ಜಿಲ್ಲೆ ಅಸ್ತಿತ್ವಕ್ಕೆ ಬಂತು. ನೂತನ ಜಿಲ್ಲಾ ಕೇಂದ್ರದ ಉದ್ಘಾಟನೆಗಾಗಿ ಚಾಮರಾಜನಗರಕ್ಕೆ ಬರಲು ಹಿಂಜರಿದ ಪಟೇಲರು ಮಹದೇಶ್ವರಬೆಟ್ಟದಲ್ಲಿ ನೂತನ ಜಿಲ್ಲೆ ಉದ್ಘಾ ಟಿಸಿದ್ದರು. ಮೊದಲ ಬಾರಿಗೆ ಮುಖ್ಯಮಂತ್ರಿಯಾದಾಗ ಹೆಚ್.ಡಿ. ಕುಮಾರಸ್ವಾಮಿ ಇಲ್ಲಿಗೆ ಭೇಟಿ ನೀಡಿದ್ದರಾದರೂ ಬಿಜೆಪಿಯೊಂದಿಗಿನ ಅವರ ಒಪ್ಪಂದದಂತೆ ಅವರ ಅಧಿಕಾರದ ಅವಧಿ ಆರು ತಿಂಗಳಿಗಿಂತ ಕಡಿಮೆ ಇತ್ತು. ಮುಖ್ಯಮಂತ್ರಿಗಳು ಜಿಲ್ಲಾ ಕೇಂದ್ರಕ್ಕೆ ಬರುವುದೇ ಇಲ್ಲ ಎಂದು ಕೊರಗುತ್ತಿದ್ದ ಚಾಮರಾಜ ನಗರ ಜನತೆ ಅಂದು ಹಬ್ಬದಂತೆ ಆಚರಿಸಿ ಸಂಭ್ರಮಿಸಿದ್ದರು.

ಆದರೂ ಕೂಡ ನಂತರ ಮುಖ್ಯಮಂತ್ರಿಗಳಾದವರು ಚಾಮರಾಜನಗರಕ್ಕೆ ಬರಲು ಹಿಂದೇಟು ಹಾಕುತ್ತಿದ್ದರು. ಆದರೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಬರೋಬ್ಬರಿ 16 ಬಾರಿ ಚಾಮರಾಜನಗರಕ್ಕೆ ಭೇಟಿ ನೀಡಿ, ತಮ್ಮ 5 ವರ್ಷದ ಅಧಿಕಾರಾವಧಿಯನ್ನು ಪೂರ್ಣಗೊಳಿಸುವ ಮೂಲಕ ಈ ಮೂಢನಂಬಿಕೆಯನ್ನು ಕೂಡ ತೊಡೆದು ಹಾಕಿದರು. ಅದರ ಫಲವೋ ಏನೋ ಹಾಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 2 ಬಾರಿ ಜಿಲ್ಲಾ ಕೇಂದ್ರಕ್ಕೆ ಭೇಟಿ ನೀಡಿದ್ದಾರೆ. ಕಾಂಗ್ರೆಸ್‌ನಲ್ಲಿ ಹಾಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಬಹುತೇಕ ಟಿಕೆಟ್ ಖಚಿತವಾಗಿದ್ದು, ಈಗಾಗಲೇ ಹ್ಯಾಟ್ರಿಕ್ ಗೆಲುವು ಸಾಧಿಸಿರುವ ಅವರು, ನಾಲ್ಕನೇ ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. ಬಿಜೆಪಿ ಬಗ್ಗೆ ಹೇಳಬೇಕಾದರೆ, ಒಮ್ಮೆ ಈ ಕ್ಷೇತ್ರದಲ್ಲಿ ಗೆದ್ದಿದ್ದಲ್ಲದೆ, ಇತ್ತೀಚಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ನೇರ ಪೈಪೋಟಿ ನೀಡುತ್ತಿದೆ. 2008ರ ಚುನಾವಣೆಯಲ್ಲಿ ಮಾಜಿ ಸಚಿವ ದಿವಂಗತ ಎಂ. ಮಹದೇವು 2ನೇ ಸ್ಥಾನ ಪಡೆದರೆ, ಯಡಿಯೂರಪ್ಪನವರು ಕೆಜೆಪಿ ಸ್ಥಾಪಿಸಿದಾಗ ಬಿಜೆಪಿಯಲ್ಲಿದ್ದ ಪ್ರೊ. ಮಲ್ಲಿಕಾರ್ಜುನಪ್ಪ ವಿಧಾನಪರಿಷತ್ ಸ್ಥಾನಕ್ಕೆ ರಾಜೀನಾಮೆ ನೀಡಿ ಕೆಜೆಪಿಯಿಂದ ಸ್ಪರ್ಧಿಸಿ 2ನೇ ಸ್ಥಾನ ಪಡೆದಿದ್ದರು. ನಂತರ 2018ರ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದಾಗಲೂ 2ನೇ ಸ್ಥಾನ ಪಡೆದರು. ಹೀಗಾಗಿ ಬಿಜೆಪಿ ಟಿಕೆಟ್ ಪಡೆಯಲು ಆಕಾಂಕ್ಷಿಗಳ ಸಂಖ್ಯೆ ಹೆಚ್ಚಾಗಿದೆ.

ಕಳೆದ 2 ಚುನಾವಣೆಗಳಲ್ಲಿ 2ನೇ ಸ್ಥಾನ ಪಡೆದಿದ್ದ ಪ್ರೊ. ಮಲ್ಲಿಕಾರ್ಜುನಪ್ಪ ಅವರು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಆಪ್ತರಾಗಿದ್ದು, ಮೂರನೇ ಬಾರಿ ಸ್ಪರ್ಧಿಸಿ, ಗೆಲುವು ಸಾಧಿಸುವ ಮೂಲಕ ಶಾಸಕರಾಗುವ ಉದ್ದೇಶದಿಂದ ಟಿಕೆಟ್‌ಗಾಗಿ ಪ್ರಯತ್ನಿಸುತ್ತಿದ್ದಾರೆ. ಬಿಜೆಪಿಯಿಂದ ಗೆದ್ದು ಶಾಸಕರಾಗುವ ಮೂಲಕ ಈ ಕ್ಷೇತ್ರದಲ್ಲಿ ಪಕ್ಷದ ಖಾತೆ ತೆರೆದವರು ಸಿ.ಗುರುಸ್ವಾಮಿ. ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿಯಿಂದ ಗೆದ್ದು ಶಾಸಕರಾಗುವ ಮೂಲಕ ತಮ್ಮ ತಂದೆಯ ನಂತರ ತಾನು ಪಕ್ಷದ ಶಾಸಕಿ ಎಂಬ ಹೆಗ್ಗಳಿಕೆ ಪಡೆಯುವ ಮಹದಾಸೆಯೊಂದಿಗೆ ಸಿ. ಗುರುಸ್ವಾಮಿ ಪುತ್ರಿ ಜಿಪಂ ಮಾಜಿ ಅಧ್ಯಕ್ಷೆ ನಾಗಶ್ರೀ ಪ್ರತಾಪ್ ಅವರು ಟಿಕೆಟ್‌ಗಾಗಿ ತೀವ್ರ ಪೈಪೋಟಿ ನಡೆಸುತ್ತಿದ್ದಾರೆ. ಚಾಮರಾಜನಗರ ನಗರಸಭೆಯ ಮಾಜಿ ಅಧ್ಯಕ್ಷರೂ ಆದ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಕಾಡಾ ಅಧ್ಯಕ್ಷ ಜಿ. ನಿಜಗುಣರಾಜು, ರೈತ ಮುಖಂಡ ಅಮ್ಮನಪುರ ಮಲ್ಲೇಶ್, ವೈದ್ಯರಾಗಿರುವ ಡಾ. ಎ.ಆರ್.ಬಾಬು, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಪಿ. ವೃಷಭೇಂದ್ರಪ್ಪ ಅವರುಗಳು ಬಿಜೆಪಿ ಟಿಕೆಟ್ ಪಡೆಯಲು ತೀವ್ರ ಕಸರತ್ತು ನಡೆಸುತ್ತಿದ್ದಾರೆ. ಈ ಮಧ್ಯೆ ಕೆಆರ್‌ಡಿಎಲ್ ಅಧ್ಯಕ್ಷ ಎಂ. ರುದ್ರೇಶ್ ಅವರು ಚಾಮರಾಜನಗರದಲ್ಲಿ ಸಾಮಾಜಿಕ ಸೇವೆ ಮಾಡುತ್ತಾ ತಾನೂ ಕೂಡ ಬಿಜೆಪಿ ಟಿಕೆಟ್ ಆಕಾಂಕ್ಷಿ ಎಂಬುದನ್ನು ಪರೋಕ್ಷವಾಗಿ ಬಿಂಬಿಸುತ್ತಿದ್ದಾರೆ. ಇದರಿಂದಲೋ ಏನೋ ಒಮ್ಮೆ ಎಲ್ಲಾ ಸ್ಥಳೀಯ ಆಕಾಂಕ್ಷಿಗಳು ಒಗ್ಗಟ್ಟಾಗಿ ಸುದ್ದಿಗೋಷ್ಠಿ ನಡೆಸಿ, ರುದ್ರೇಶ್ ಅವರಿಗೆ ಟಿಕೆಟ್ ನೀಡಬಾರದು. ಸ್ಥಳೀಯರಲ್ಲಿ ಯಾರಿಗೇ ಟಿಕೆಟ್ ಕೊಟ್ಟರೂ ಒಗ್ಗಟ್ಟಾಗಿ ದುಡಿದು ಗೆಲ್ಲಿಸುತ್ತೇವೆ ಎಂದು ಘೋಷಿಸಿದ್ದರು. ಈ ಕ್ಷೇತ್ರದಲ್ಲಿ ಜೆಡಿಎಸ್ ಅಸ್ತಿತ್ವದಲ್ಲೇ ಇಲ್ಲ ಎಂಬಂತಾಗಿದೆ. ಇನ್ನು ಇಲ್ಲಿಂದ 3 ಬಾರಿ ಶಾಸಕರಾಗಿದ್ದ ವಾಟಾಳ್ ನಾಗರಾಜ್ ಕಳೆದ ಮೂರು ಚುನಾವಣೆಗಳಲ್ಲಿ 2ನೇ ಸ್ಥಾನವನ್ನೂ ಪಡೆಯಲಾಗದೆ ಪರಾಭವಗೊಂಡಿದ್ದರೂ ಕೂಡ ಈ ಚುನಾವಣೆಯಲ್ಲೂ ಸಹ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ. ಬಿಎಸ್ಪಿ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸುವುದು ಖಚಿತವಾದರೂ ಆಕಾಂಕ್ಷಿಗಳು ಯಾರು ಎಂಬ ಗುಟ್ಟು ಬಿಟ್ಟುಕೊಡಲಿಲ್ಲ. ಉಪ್ಪಾರ ಸಮಾಜದ ಮುಖಂಡ ಜಿ.ಎಂ. ಗಾಡ್ಕರ್ ಅವರು ಸಮಾಜವಾದಿ ಪಕ್ಷದಿಂದ ಸ್ಪರ್ಧಿಸುವ ಸಾಧ್ಯತೆ ಇದೆ.

ಕಂಡಕಂಡಲ್ಲಿ ಕಸ ಹಾಕಿದರೆ ದಂಡ

ಘನತ್ಯಾಜ್ಯ ನಿರ್ವಹಣೆ ನಿಯಮ ಪಾಲಿಸಲು ನಗರಸಭೆಯಿಂದ ಸೂಚನೆ

ಚಾಮರಾಜನಗರ, ಡಿ.20– ನಗರಸಭಾ ವ್ಯಾಪ್ತಿಯಲ್ಲಿ ಘನ ತ್ಯಾಜ್ಯವಸ್ತು ವಿಲೇವಾರಿ ನಿಯಮ–2016ರ ಅನ್ವಯ ಕರ್ನಾಟಕ ರಾಜ್ಯಪತ್ರ ನಗರಾಭಿವೃದ್ಧಿ ಇಲಾಖೆಯಿಂದ ಹೊರಡಿಸಿರುವ ಅಧಿಸೂಚನೆಯಂತೆ ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮ ಉಲ್ಲಂಘನೆ ಮಾಡುವವರಿಗೆ ದಂಡ ವಿಧಿಸಲಾಗುವುದು ಎಂದು ನಗರಸಭೆ ತಿಳಿಸಿದೆ.

ಕಂಡಕಂಡಲ್ಲಿ ಕಸ ಎಸೆಯುವುದು, ಉಗುಳುವುದು, ಸ್ನಾನ ಮಾಡುವುದು, ಮೂತ್ರ ವಿಸರ್ಜನೆ ಮತ್ತು ಬಯಲು ಮಲ ವಿಸರ್ಜನೆ ಮಾಡಿ ಸಾರ್ವಜನಿಕ ಉಪದ್ರವ ಉಂಟು ಮಾಡಿದರೆ ಮೊದಲನೆ ದಂಡವಾಗಿ 100 ರೂ., ಎರಡನೇ ಮತ್ತು ನಂತರದ ಅಪರಾಧಕ್ಕಾಗಿ ದಂಡವಾಗಿ 150ರೂ., ವಿಧಿಸಲಾಗುವುದು. ಬೃಹತ್ ತ್ಯಾಜ್ಯ ಉತ್ಪಾದಕರು ಘನ ತ್ಯಾಜ್ಯ ವಿಂಗಡನೆ ಮಾಡಲು ವಿಫಲರಾದಲ್ಲಿ 500 ರೂ., ನಂತರದ ದಂಡವಾಗಿ 750ರೂ., ನಿವಾಸಿಗಳು ತ್ಯಾಜ್ಯಗಳನ್ನು ವಿಂಗಡನೆ ಮಾಡದಿದ್ದಲ್ಲಿ ಅಥವಾ ಹಸ್ತಾಂತರ ಮಾಡಲು ವಿಫಲರಾದಲ್ಲಿ 50 ರೂ., ನಂತರದ ದಂಡವಾಗಿ 75ರೂ., ಕಟ್ಟಬೇಕು ಮತ್ತು ಕೆಡವಿದ ತ್ಯಾಜ್ಯವನ್ನು ವಿಂಗಡಿಸಿ ಹಸ್ತಾಂತರಿಸಲು ವಿಫಲರಾದ ಸಂದರ್ಭದಲ್ಲಿ ಅಥವಾ ನಿಯಮಾನುಸಾರ ನಿಗದಿತ ರೀತಿಯಲ್ಲಿ ಶೇಖರಣೆ ಮಾಡಲು ವಿಫಲರಾದಲ್ಲಿ ದಂಡವಾಗಿ 500ರೂ. ವಿಧಿಸಲಾಗುವುದು.

ತ್ಯಾಜ್ಯವನ್ನು ಸುಡುವುದು/ಸುರಿಯುವುದು ಅಥವಾ ಅನಧಿಕೃತವಾಗಿ ಹೂಳುವ ಮೂಲಕ ವಿಲೇವಾರಿ ಮಾಡಿದ್ದಲ್ಲಿ ದಂಡವಾಗಿ 5000 ರೂ. ವಿಧಿಸಲಾಗುವುದು. ಮೀನು, ಕೋಳಿ ಮತ್ತು ಕಸಾಯಿ ಖಾನೆ ತ್ಯಾಜ್ಯವನ್ನು ಸಮುದಾಯಿಕ ತೊಟ್ಟಿ, ಬುಟ್ಟಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಅಥವಾ ಇತರೆ ಅನಧಿಕೃತ ಸ್ಥಳಗಳಲ್ಲಿ ಸುರಿದಲ್ಲಿ 100 ರೂ., ನಂತರದ ದಂಡವಾಗಿ 150ರೂ., ಸಾರ್ವಜನಿಕ ಸ್ಥಳಗಳಾದ ಸಾರ್ವಜನಿಕ ರಸ್ತೆ, ರೈಲು ನಿಲ್ದಾಣ, ಆಟದ ಮೈದಾನ ಹಾಗೂ ಇತರೆ ಸಾರ್ವಜನಿಕ ಸೌಲಭ್ಯಗಳ ಸ್ವಚ್ಛತೆ ಕಾಪಾಡುವ ನಿರ್ದೇಶನಗಳನ್ನು ಪಾಲನೆ ಮಾಡಲು ವಿಫಲರಾದಲ್ಲಿ 100 ರೂ., ನಂತರದ ದಂಡವಾಗಿ 200ರೂ.. ಕೊಳೆತ/ಕಳಪೆ ಅಥವಾ ಇತರೆ ಘನತ್ಯಾಜ್ಯ ವಸ್ತುಗಳ ಅನಿಯಮಿತ ಶೇಖರಣೆ ಮಾಡಿದ್ದಲ್ಲಿ 100 ರೂ., ನಂತರದ ದಂಡವಾಗಿ 200ರೂ. ವಿಧಿಸಲಾಗುವುದು.

ಕಟ್ಟಡದ ತ್ಯಾಜ್ಯವನ್ನು ಅನಧಿಕೃತವಾಗಿ ಸುರಿಯುವುದು ಕಂಡುಬಂದಲ್ಲಿ 1000 ರೂ., ನಂತರದ ದಂಡವಾಗಿ 2000ರೂ.. ಫೀಕಲ್ ಸ್ಲಡ್ಜ್ ಅನ್ನು ಅನಿಯಮಿತ ಜಾಗದಲ್ಲಿ ಸುರಿದಿದ್ದಲ್ಲಿ 500 ರೂ., ನಂತರದ ದಂಡವಾಗಿ 1000ರೂ., ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್, ಪ್ಲಾಸ್ಟಿಕ್ ಲೋಟ, ತಟ್ಟೆ, ಚಮಚ, ಪ್ಲಾಸ್ಟಿಕ್ ಫ್ಲೆಕ್ಸ್, ಕಪ್, ಸ್ಟ್ರಾ ಬಳಕೆ/ಮಾರಾಟ ಮಾಡಿದಲ್ಲಿ 5000 ರೂ., ನಂತರದ ದಂಡವಾಗಿ 10000ರೂ., ಸರಿಯಾದ ಚರಂಡಿ ಸಂಪರ್ಕ ಪಡೆಯದೇ ತ್ಯಾಜ್ಯ ನೀರನ್ನು ಮುಖ್ಯ ತೆರೆದ ಚರಂಡಿ/ಮಳೆ ನೀರು ಚರಂಡಿಗೆ ಬಿಡುವುದು ಕಂಡುಬಂದಲ್ಲಿ ದಂಡವಾಗಿ 2500ರೂ. ವಿಧಿಸಲಾಗುವುದು.

ಚಾಮರಾಜನಗರ ನಗರಸಭೆ ಸ್ವಚ್ಛ ಸರ್ವೇಕ್ಷಣ್–2023ರಲ್ಲಿ ಭಾಗವಹಿಸುತ್ತಿದ್ದು, ಉತ್ತಮ ಸ್ಥಾನಗಳಿಸಲು ಸಾರ್ವಜನಿಕರು ಸಹಕರಿಸಬೇಕೆಂದು ನಗರಸಭೆ ಅಧ್ಯಕ್ಷೆ ಸಿ.ಎಂ. ಆಶಾ, ಉಪಾಧ್ಯಕ್ಷೆ ಪಿ. ಸುಧಾ ಹಾಗೂ ಪೌರಾಯುಕ್ತ ಎಸ್.ವಿ. ರಾಮದಾಸ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಂಸ್ಕೃತಿಕ ಜಾಂಬೂರಿಗೆ ವಿದ್ಯಾರ್ಥಿಗಳ ಪ್ರಯಾಣ



ಚಾಮರಾಜನಗರ, ಡಿ.20– ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ ನಡೆಯಲಿರುವ ಅಂತ ರಾಷ್ಟ್ರೀಯ ಮಟ್ಟದ ಸಾಂಸ್ಕೃತಿಕ ಜಾಂಬೂರಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಜಿಲ್ಲೆಯಿಂದ ಹೊರಟ ಬಸ್‌ಗಳಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯತ್ರಿ ಅವರು ಚಾಲನೆ ನೀಡಿದರು.

ಡಿ.21 ರಿಂದ 27ರವರೆಗೆ ನಡೆಯಲಿರುವ ಅಂತರಾಷ್ಟ್ರೀಯ ಮಟ್ಟದ ಸಾಂಸ್ಕೃತಿಕ ಜಾಂಬೂರಿ ಕಾರ್ಯಕ್ರಮದಲ್ಲಿ ಚಾಮರಾಜನಗರ ಜಿಲ್ಲೆಯಿಂದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಸಂಸ್ಥೆ, ವಿವಿಧ ಶಾಲಾ ಕಾಲೇಜು ವಿದ್ಯಾರ್ಥಿಗಳು ಹಾಗೂ ಶಿಕ್ಷಕ, ಶಿಕ್ಷಕಿಯರು ಸೇರಿದಂತೆ 600 ಕ್ಕೂ ಮಂದಿ ಭಾಗವಹಿಸಲು ಹೊರಟ ಬಸ್ಸುಗಳಿಗೆ ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯತ್ರಿ ಅವರು ಹಸಿರು ನಿಶಾನೆ ತೋರಿ ಶುಭ ಹಾರೈಸಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಉಪಾಧ್ಯಕ್ಷೆ ಡಾ. ಎಚ್.ಎಂ. ನಿರ್ಮಲ, ಕಾರ್ಯದರ್ಶಿ ರಾಮಚಂದ್ರ, ಯತೀಶ್, ಜ್ಯೋತಿ, ಜಿಲ್ಲಾ ಯುವ ಸಮಿತಿ ಅಧ್ಯಕ್ಷ ಶ್ರೀನಿಧಿ, ವಿದ್ಯಾರ್ಥಿಗಳು, ಶಿಕ್ಷಕರು ಇದೇ ವೇಳೆ ಹಾಜರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಡಿ.20– ಕಾವೇರಿ ನೀರಾವರಿ ನಿಗಮ ವತಿಯಿಂದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ಬೃಹತ್ ಕಾಮಗಾರಿ ವಿಭಾಗ ಏತ ನೀರಾವರಿ ಘಟಕದ ಕೋಡಿಮೋಳೆ ಟವರ್ ಕಾಮಗಾರಿಯನ್ನು ಡಿ.21ರಂದು ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಚಂದಕವಾಡಿ ಉಪಕೇಂದ್ರದಿಂದ ಹೊರಹೊಮ್ಮುವ ಫೀಡರ್‌ನಲ್ಲಿ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಹಿರಿಕೆರೆ ಎನ್.ಜೆ.ವೈ ಫೀಡರ್‌ನ ಹೆಬ್ಬಸೂರು, ಅರಳೀಪುರ ಗ್ರಾಮಗಳಲ್ಲಿ ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್‌ನ ಕಾರ್ಯ ಮತ್ತು ಪಾಲನಾ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೂಚಿತ ಪ್ರದೇಶದಲ್ಲಿ ಡೆಬ್ರೀಸ್ ವಿಲೇವಾರಿ ಮಾಡಲು ಸೂಚನೆ

ಚಾಮರಾಜನಗರ, ಡಿ.20– ನಗರಸಭೆಯ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಮಾಡುತ್ತಿರುವವರು ಹಾಗೂ ಕಟ್ಟಡ ನಿರ್ಮಿಸಲು ತಯಾರಿ ನಡೆಸುತ್ತಿರುವವರು ಮತ್ತು ಸಿವಿಲ್ ಎಂಜಿನಿಯರ್‌ಗಳು ಕಟ್ಟಡ ನಿರ್ಮಾಣದ ಸಂದರ್ಭದಲ್ಲಿ ಉಳಿದಿರುವ ಭಗ್ನಾವಶೇಷಗಳನ್ನು (ಡೆಬ್ರೀಸ್) ಎಲ್ಲೆಂದರಲ್ಲಿ ಬಿಸಾಡದೇ ಹಾಗೂ ಸಾರ್ವಜನಿಕರಿಗೆ ಓಡಾಡಲು ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ಕ್ರಮವಹಿಸಬೇಕು ಎಂದು ನಗರಸಭೆ ತಿಳಿಸಿದೆ.

ಕಟ್ಟಡದ ಭಗ್ನಾವಶೇಷ ಸೇರಿದಂತೆ ಇತರೆ ತ್ಯಾಜ್ಯಗಳನ್ನು ನಗರಸಭೆ ಅನುಮತಿ ಪಡೆದು ನಗರಸಭೆಗೆ ಸೇರಿದ ಸೋಮವಾರಪೇಟೆ ರಸ್ತೆಯಲ್ಲಿರುವ ತಾವರೆಕಟ್ಟೆಮೋಳೆಯ ಸರ್ವೆ ನಂ.361ರ ಸ್ಥಳದಲ್ಲಿರುವ ಘನತ್ಯಾಜ್ಯ ನಿರ್ವಹಣೆ ಘಟಕದಲ್ಲಿ ಹಾಕಬೇಕು. ತಪ್ಪಿದಲ್ಲಿ ಕಟ್ಟಡ ಪರವಾನಿಗೆಯನ್ನು ರದ್ದುಪಡಿಸಿ, ಕರ್ನಾಟಕ ಮುನ್ಸಿಪಲ್ ಕಾಯ್ದೆ 1964ರ ಪ್ರಕಾರ ಕಾನೂನು ರೀತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸ್ಪರ್ಧಾತ್ಮಕ ಪರೀಕ್ಷೆಗಳು ವಿದ್ಯಾರ್ಥಿಗಳಿಗೆ ದಾರಿದೀಪ



ಚಾಮರಾಜನಗರ, ಡಿ.20– ಇದು ಸ್ಪರ್ಧಾತ್ಮಕ ಯುಗ. ಇಲ್ಲಿ ನೌಕರಿ ಸಿಗಬೇಕೆಂದರೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಬೇಕು. ಆದ್ದರಿಂದ ಸ್ಪರ್ಧಾತ್ಮಕ ಪರೀಕ್ಷೆಗಳು ವಿದ್ಯಾರ್ಥಿಗಳಿಗೆ ದಾರಿದೀಪವಾಗಿದೆ ಎಂದು ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ ಹೇಳಿದರು.

ನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ಧಾರವಾಡದ ಸ್ಪರ್ಧಾ ವಿಕಾಸ ಕರಿಯರ್ ಅಕಾಡೆಮಿ, ನಗರದ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ ಹಾಗೂ ಭಾರತೀಯ ಪರಿವರ್ತನ ಜಿಲ್ಲಾ ಘಟಕದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ನಾವು ಎಷ್ಟೇ ಉನ್ನತ ವ್ಯಾಸಂಗ ಪಡೆದರು, ಇಂದು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವುದು ಅತಿ ಅವಶ್ಯಕವಾಗಿದೆ. ಉತ್ತರ ಭಾರತದವರು ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಪಡೆದು ಹೆಚ್ಚು ಮಂದಿ ಐಎಎಸ್, ಐಪಿಎಸ್‌ಸ್ ಸೇರಿದಂತೆ ಉನ್ನತ ಹುದ್ದೆಗಳನ್ನು ಪಡೆದಿದ್ದಾರೆ. ರಾಜ್ಯದವರು ಬೆರಳಣಿಕೆಯಷ್ಟು ಮಾತ್ರ ಇದ್ದು, ಈ ರೀತಿಯ ಕಾರ್ಯಾಗಾರಗಳಿಗೆ ನನ್ನ ಸಂಪೂರ್ಣ ಬೆಂಬಲ ವಿದೆ ಎಂದರು. ಜಿಲ್ಲೆಯಾಗಿ 25 ವರ್ಷಗಳಲ್ಲಿ ಇಂತಹ ಕಾರ್ಯಾಗಾರಗಳು ಬೆರಳಣಿಕೆಯಷ್ಟು ಮಾತ್ರ ನಡೆದಿವೆ. ಅದರಲ್ಲೂ ಉಚಿತವಾಗಿ ನಡೆಯುವುದು ಬಹಳ ಕಡಿಮೆ. ಧಾರವಾಡದ ಸ್ಪರ್ಧಾ ವಿಕಾಸ ಕರಿಯರ್ ಅಕಾಡೆಮಿ, ನಗರದ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ ಹಾಗೂ ಭಾರತೀಯ ಪರಿವರ್ತನ ಜಿಲ್ಲಾ ಘಟಕ ಇಂತಹ ಕಾರ್ಯಾಗಾರ ಏರ್ಪಡಿಸಿರುವುದು ಶ್ಲಾಘನೀಯವಾಗಿದೆ ಎಂದರು.

ನೌಕರಿಯ ಅವಶ್ಯಕತೆ ಎಷ್ಟಿದೆ ಎಂಬುದಕ್ಕೆ ವಿದ್ಯಾರ್ಥಿ ಸಮೂಹವೇ ಸಾಕ್ಷಿಯಾಗಿದೆ. ಎಲ್ಲರೂ ಕಾರ್ಯಾಗಾರದ ಸದ್ಬಳಕೆ ಮಾಡಿಕೊಂಡು ಉನ್ನತ ಹುದ್ದೆ ಪಡೆದು ಪ್ರಾಮಾಣಿಕ ಸೇವೆ ಸಲ್ಲಿಸಿ ಜಿಲ್ಲೆಗೆ ಕೀರ್ತಿ ತರಬೇಕು ಎಂದು ಶ್ಲಾಘಿಸಿದರು.

ನಂತರ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಬಿ. ಮಲ್ಲಿಕಾರ್ಜುನ ಮಾತನಾಡಿ, ಜಿಲ್ಲೆಯಲ್ಲಿ ಶೈಕ್ಷಣಿಕವಾಗಿ ಹೆಚ್ಚು ಜನರು ಇದ್ದರು, ಉನ್ನತ ಹುದ್ದೆಗಳನ್ನು ಪಡೆದವರ ಸಂಖ್ಯೆ ಕಡಿಮೆ. ಇದಕ್ಕೆ ಸ್ಪರ್ಧಾತ್ಮಕ ಪರೀಕ್ಷೆಗಳ ಅರಿವಿನ ಕೊರತೆ, ಆದ್ದರಿಂದ ಇಂತಹ ಸ್ಪರ್ಧಾತ್ಮಕ ಪರೀಕ್ಷೆಗಳ ಕಾರ್ಯಾಗಾರ ಅತಿ ಮುಖ್ಯವಾಗಿದ್ದು, ಜಿಲ್ಲಾಡಳಿತದ ಸಂಪೂರ್ಣ ಸಹಕಾರವಿದೆ ಎಂದರು.


ಕಾರ್ಯಾಗಾರದಲ್ಲಿ 500ಕ್ಕೂ ಹೆಚ್ಚು ಉದ್ಯೋಗ ಆಕಾಂಕ್ಷಿಗಳು ಪಾಲ್ಗೊಂಡಿದ್ದರು. ವೇದಿಕೆ ಕಾರ್ಯಕ್ರಮದಲ್ಲಿ ಧಾರವಾಡದ ಸ್ಪರ್ಧಾ ವಿಕಾಸ ಕರಿಯರ್ ಅಕಾಡೆಮಿ ನಿರ್ದೇಶಕ ಎ.ಐ. ಮುಜಾವರ್, ಬಿಪಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ವಾಸು, ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ ಗೋವಿಂದರಾಜು, ಉಪನ್ಯಾಸಕರಾದ ಶ್ರೀಶೈಲಾ, ಮೋಹಿನುದ್ದೀನ್, ಸಮಾಜ ಸೇವಕ ಗಿರೀಶ್ ಇತರರು ಇದ್ದರು.


ಮಾದಪ್ಪನ ಹಾಡು ಹಾಡಿದ ಮುಸ್ಲಿಂ ಯುವತಿ

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ನಗರದ ಸರ್ಕಾರಿ ಜೂನಿಯರ್ ಕಾಲೇಜಿನ ಪಿಯುಸಿ ವಿದ್ಯಾರ್ಥಿನಿ ಉಮ್ಮೇ ಬಸೀರಾ, ಮಹದೇವ... ಮಹದೇವ... ಎಂಬ ಹಾಡು ಹಾಡಿ ಕಿಕ್ಕಿರಿದು ಸೇರಿದ್ದ ಸಭಾಂಗಣದಲ್ಲಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಪ್ರತಿಭೆ ಯಾವ ಧರ್ಮ, ಜಾತಿಗೆ ಅಡ್ಡಿಯಾಗುವುದಿಲ್ಲ ಎಂಬುದನ್ನು ತೋರ್ಪಡಿಸಿ, ಚಪ್ಪಾಳೆ ಗಿಟ್ಟಿಸಿದಳು.

ಕೂಡ್ಲೂರು ಬಳಿಯ ಸೇತುವೆ ನಿರ್ಮಾಣಕ್ಕೆ ಒಂದು ಕೋಟಿ ರೂ. ಬಿಡುಗಡೆ

ಶಾಸಕ ಆರ್. ನರೇಂದ್ರ ಪ್ರಶ್ನೆಗೆ ಸಚಿವ ಸಿ.ಸಿ. ಪಾಟೀಲ್ ಉತ್ತರ


ಸಿಸಿ ಪಾಟೀಲ್


ಆರ್. ನರೇಂದ್ರ

ಹನೂರು, ಡಿ.20– ತಾಲೂಕಿನ ಕೂಡ್ಲೂರು ಸಮೀಪದ ಸೇತುವೆ ನಿರ್ಮಾಣ ಕಾಮಗಾರಿಗೆ ಒಂದು ಕೋಟಿ ಅನುದಾನ ಬಿಡುಗಡೆಯಾಗಿದೆ ಎಂದು ಲೋಕೋಪಯೋಗಿ ಸಚಿವ ಸಿಸಿ ಪಾಟೀಲ್ ತಿಳಿಸಿದ್ದಾರೆ.

ಬೆಳಗಾವಿ ಅಧಿವೇಶನದಲ್ಲಿ ಹನೂರು ವಿಧಾನಸಭಾ ಕ್ಷೇತ್ರದ ಶಾಸಕ ಆರ್ ನರೇಂದ್ರ ಕೇಳಿದ ಪ್ರಶ್ನೆಗೆ ಉತ್ತರಿಸಿ ಈಗಾಗಲೇ ಒಂದು ಕೋಟಿ ಮಂಜೂರಾಗಿದ್ದು, ಇನ್ನು ನಾಲ್ಕು ಕೋಟಿ ಅನುದಾನ ಬೇಕೆಂದು ಅಧಿಕಾರಿಗಳು ವರದಿ ನೀಡಿದ್ದಾರೆ. ಈ ಸಂಬಂಧ ಅನುಮೋದನೆಗಾಗಿ ಹಣಕಾಸು ಇಲಾಖೆಗೆ ವರದಿ ಸಲ್ಲಿಸಲಾಗಿದೆ. ಹಣಕಾಸು ಇಲಾಖೆಯಿಂದ ಹಣ ಬಿಡುಗಡೆಯಾದ ನಂತರ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಇದೇ ವೇಳೆ ಮರು ಪ್ರಶ್ನೆ ಸಲ್ಲಿಸಿದ ಶಾಸಕ ಆರ್ ನರೇಂದ್ರ ವಡಕೆ ಹಳ್ಳ ಗ್ರಾಮದಿಂದ ರಾಮಾಪುರದವರಿಗೆ 72 ಕಿ.ಮೀ ರಸ್ತೆ ಈ ಹಿಂದೆ ಎಂಡಿಆರ್ ರಸ್ತೆಯಾಗಿದ್ದು ಇದೀಗ ಮೇಲ್ದರ್ಜೆಗೇರಿದೆ. ಈ ವ್ಯಾಪ್ತಿಯಲ್ಲಿ ನಾಲ್ಕು ಗ್ರಾಪಂ ಜನರು ಓಡಾಡುತ್ತಿದ್ದಾರೆ. ಪ್ರತಿದಿನ ದ್ವಿಚಕ್ರ ವಾಹನ ಸವಾರು ಸೇರಿದಂತೆ ಪಾದಾಚಾರಿಗಳು ಬಿದ್ದು ಗಾಯಗೊಂಡಿದ್ದಾರೆ. ಈ ಹಿನ್ನೆಲೆ ಸೇತುವೆಯನ್ನು ಆದಷ್ಟು ಬೇಗ ನಿರ್ಮಾಣ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಮಧ್ಯ ಪ್ರವೇಶಿಸಿದ ಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ ಕಾಗೇರಿ ರವರು ಈಗ ನೀವು ಬಿಡುಗಡೆ ಮಾಡಿರುವ ಒಂದು ಕೋಟಿಯಲ್ಲಿ ಅನುದಾನದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಬಹುದೇ ಎಂದು ಪ್ರಶ್ನಿಸಿದರು. ಪ್ರತಿಕ್ರಿಯಿಸಿದ ಸಚಿವ ಒಂದು ಕೋಟಿ ಹಣದಲ್ಲಿ ಕಾಮಗಾರಿ ನಡೆಸಬಹುದೆಂದು ತಿಳಿಸಿದರು. ಶಾಸಕ ನರೇಂದ್ರ ಎರಡೂವರೆ ಕೋಟಿ ಅನುದಾನ ಸಾಕಾಗುತ್ತದೆ. ಆದ್ದರಿಂದ ಇನ್ನೂ ಎರಡು ಕೋಟಿ ಅನುದಾನ ನೀಡಿ ಕಾಮಗಾರಿಯನ್ನು ಪ್ರಾರಂಭಿಸುವುದರ ಮೂಲಕ ಕಾಮಗಾರಿ ಪೂರ್ಣಗೊಳಿಸಿ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಮನವಿ ಸಲ್ಲಿಸಿದರು.

ಬಾಕಿ ಪ್ರೋತ್ಸಾಹಧನ ಶೀಘ್ರವೇ ನೇರವಾಗಿ ಹಾಲು ಉತ್ಪಾದಕರ ಬ್ಯಾಂಕ್ ಖಾತೆಗೆ ಪಾವತಿ

ಬೆಳಗಾವಿ: ಹಾಲು ಉತ್ಪಾದಕ ರೈತರಿಗೆ ಪ್ರಸ್ತುತ ನೀಡುತ್ತಿರುವ 5 ರೂಪಾಯಿ ಪ್ರೋತ್ಸಾಹ ಧನವನ್ನು ಏರಿಕೆ ಮಾಡುವ ಯಾವುದೇ ಪ್ರಸ್ತಾಪ ಸರ್ಕಾರದ ಮುಂದೆ ಇಲ್ಲ ಎಂದು ರಾಜ್ಯ ಸರ್ಕಾರ ಸ್ಪಷ್ಟಪಡಿಸಿದೆ. ಈ ಸಂಬಂಧ ಸ್ಥಳೀಯ ಸಂಸ್ಥೆಗಳ ಮಂಡ್ಯ ಕ್ಷೇತ್ರದ ಶಾಸಕರಾದ ದಿನೇಶ್ ಗೂಳಿಗೌಡ ಅವರು ಸದನದಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸರ್ಕಾರ, ಸದ್ಯಕ್ಕೆ ಅಂತಹ ಯಾವುದೇ ಉದ್ದೇಶ ಇಲ್ಲ ಎಂದು ಹೇಳಿದ್ದು, ಹಾಲಿ ಎಲ್ಲ ರೈತರಿಗೆ ಈಗ ನಿಗದಿ ಮಾಡಿರುವ ಐದು ರೂಪಾಯಿಯನ್ನು ನೀಡುತ್ತಾ ಬಂದಿದೆ ಎಂದು ಸ್ಪಷ್ಟಪಡಿಸಿದೆ. ಪ್ರಸ್ತುತ ನೀಡುತ್ತಿರುವ 5 ರೂಪಾಯಿ ಪ್ರೋತ್ಸಾಹಕ ಧನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ ಎಂದು ಸ್ಥಳೀಯ ಸಂಸ್ಥೆಗಳ ಮಂಡ್ಯ ಕ್ಷೇತ್ರದ ಶಾಸಕರಾದ ದಿನೇಶ್ ಗೂಳಿಗೌಡ ಅವರು ಕೇಳಿದ್ದ ಪ್ರಶ್ನೆಗೆ ಸದನದಲ್ಲಿ ಸಹಕಾರ ಸಚಿವರಾದ ಎಸ್.ಟಿ. ಸೋಮಶೇಖರ್ ಉತ್ತರಿಸಿದ್ದಾರೆ.

ಸಾಮಾನ್ಯ ವರ್ಗದ ಹೈನುಗಾರಿಕೆ ಸೆಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್ 2022ರಲ್ಲಿ ಹಾಲಿ ಪ್ರೋತ್ಸಾಹ ಧನ ರೂ. 339.00 ಕೋಟಿಗಳು ಬಾಕಿಯಿದೆ. ನವೆಂಬರ್-2022ರ ತಿಂಗಳಲ್ಲಿ ಪರಿಶಿಷ್ಟ ಜಾತಿ ವರ್ಗದ ಹೈನುಗಾರರಿಗೆ ರೂ.5.00 ಕೋಟಿ ಮತ್ತು ಪರಿಶಿಷ್ಟ ಪಂಗಡ ವರ್ಗದ ಹೈನುಗಾರರಿಗೆ ರೂ.3.00 ಕೋಟಿಗಳನ್ನು ಪಾವತಿಸಲು ಬಾಕಿ ಇದೆ ಎಂದು ತಿಳಿಸಿದ್ದಾರೆ. ಅದೇ ಮಂಡ್ಯ ಜಿಲ್ಲೆಯಲ್ಲಿ ಸೆಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್ ತಿಂಗಳಿನಲ್ಲಿ ರೈತರಿಗೆ 36.55 ಕೋಟಿ ರೂ. ಬಾಕಿ ನೀಡಬೇಕಿದೆ.

ಪೋಷಕರ ಪತ್ತೆಗೆ ಮನವಿ

ಮೈಸೂರು, ಡಿ.20- ಹಡಜನ ಗ್ರಾಮದ ಸರ್ವೆ ಕಚೇರಿ ಬಳಿ ಡಿಸೆಂಬರ್ 13ರಂದು ರಾತ್ರಿ ನವಜಾತ ಗಂಡು ಮಗುವನ್ನು ಬಟ್ಟೆಯಲ್ಲಿ ಸುತ್ತಿ ಬಯಲು ಪ್ರದೇಶದಲ್ಲಿ ಬಿಟ್ಟು ಹೋಗಿರುವುದಾಗಿ ಮೈಸೂರು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪ್ರಕರಣದಲ್ಲಿ ಎರಡು ದಿನದ ನವಜಾತ ಗಂಡು ಮಗುವಿನ ಪೋಷಕರನ್ನು ಪತ್ತೆ ಮಾಡಬೇಕಿದ್ದು ಯಾರಿಗಾದರೂ ಮಾಹಿತಿ ಇದ್ದಲ್ಲಿ ಮೈಸೂರು ಜಿಲ್ಲಾ ಮಹಿಳಾ ಪೊಲೀಸ್ ದೂರವಾಣಿ ಸಂಖ್ಯೆ:0821-2441552 ಅಥವಾ 9480805061 ಮಾಹಿತಿ ನೀಡಬಹುದು ಎಂದು ಮಹಿಳಾ ಪೊಲೀಸ್ ಠಾಣೆಯ ಪೊಲೀಸ್ ಉಪನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಶೇ.50 ರಿಯಾಯಿತಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ (RDPR) ಇಲಾಖೆಯ ಅಂಕಿ ಅಂಶಗಳ ಪ್ರಕಾರ, ನರೇಗಾ ಯೋಜನೆ ಅಡಿಯಲ್ಲಿ ರಾಜ್ಯವು 1.8 ಕೋಟಿ ಜನರು ನೋಂದಾಯಿಸಿಕೊಂಡಿದ್ದು, ಇದರಲ್ಲಿ 90 ಲಕ್ಷ (ಶೇ.51.42)ಮಹಿಳಾ ಉದ್ಯೋಗಿಗಳಿದ್ದಾರೆಂದು ತಿಳಿದುಬಂದಿದೆ. ಕಳೆದ 5 ವರ್ಷಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ನಿರಂತರವಾಗಿ ಹೆಚ್ಚಾಗುತ್ತಿರುವುದು ಇದರಿಂದ ತಿಳಿದುಬಂದಿದೆ. ಇಲಾಖೆಯು ಕಳೆದ ವರ್ಷದಿಂದ ನರೇಗಾ ಜಾಬ್ ಕಾರ್ಡ್ ಹೊಂದಿಲ್ಲದ ಮಹಿಳೆಯರನ್ನು ಗುರುತಿಸಲು ಮನೆ-ಮನೆ ಸಮೀಕ್ಷೆಯನ್ನು ಪ್ರಾರಂಭಿಸಿತ್ತು. ಇಲಾಖೆಯು ಉದ್ಯೋಗಗಳನ್ನು ಒದಗಿಸುವಲ್ಲಿ ಮಹಿಳೆಯರು ಮತ್ತು ಮಹಿಳೆಯರ ನೇತೃತ್ವದ ಕುಟುಂಬಗಳಿಗೆ ಆದ್ಯತೆ ನೀಡುತ್ತಿದೆ.

> **ಮಾರ್ಚ್ 2023ರ ವೇಳೆಗೆ ಒಟ್ಟು ಉದ್ಯೋಗಿಗಳ ಸಂಖ್ಯೆಯಲ್ಲಿ ಶೇಕಡಾ 60 ರಷ್ಟು ಮಹಿಳೆಯರನ್ನು ತಲುಪುವ ಗುರಿಯನ್ನು ಇಲಾಖೆ ಹೊಂದಿದೆ. ಈ ಉಪಕ್ರಮವು ಮಹಿಳೆಯರ ಸಬಲೀಕರಣಕ್ಕೆ ಸಹಕಾರಿಯಾಗಲಿದೆ. ಮಹಿಳೆಯರಲ್ಲಿ ಹೆಚ್ಚಿನವರು ವಲಸೆ ಹೋಗದ ಕಾರಣ ಯೋಜನೆ ಅನೇಕರಿಗೆ ಅನುಕೂಲವಾಗಿದೆ ಮತ್ತು ಮಹಿಳೆಯರ ಕೆಲಸದ ಸಾಮರ್ಥ್ಯವೂ ಉತ್ತಮವಾಗಿದೆ. ಮಹಿಳೆಯರನ್ನು ಕೇಂದ್ರೀಕರಿಸುವ ನರೇಗಾ ಮತ್ತು ಇತರ ಯೋಜನೆಗಳ ಬಗ್ಗೆ ಮಾಹಿತಿ ನೀಡಲು ಇಲಾಖೆಯು ಎಲ್ಲಾ ಪಂಚಾಯತ್‌ಗಳಲ್ಲಿ ವಿಶೇಷ ಗ್ರಾಮಸಭೆಗಳನ್ನು ನಡೆಸಿದೆ. ಮಹಿಳೆಯರು ಯೋಜನೆಯ ಲಾಭ ಪಡೆದುಕೊಳ್ಳಲು ಗ್ರಾಮ ಸಭೆ ಸ್ಥಳಗಳಲ್ಲಿ ವಿಶೇಷ ಸಹಾಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.**
>
> **- ಶಿಲ್ಪಾ ನಾಗ್, ಆರ್‌ಡಿಪಿಆರ್ ಆಯುಕ್ತೆ**

ಸದ್ಯದಲ್ಲೇ ಸಂಪುಟ ಸೇರ್ಪಡೆ

ಮತ್ತು ಮುಖ್ಯಮಂತ್ರಿಯ ವರಿಗೆ ನಿನ್ನೆಯಷ್ಟೇ ಎಚ್ಚರಿಕೆ ನೀಡಿದ್ದರು. ಈಶ್ವರಪ್ಪ ಎಚ್ಚರಿಕೆ ನೀಡುತ್ತಿದ್ದಂತೆ ಎಚ್ಚೆತ್ತ ಮುಖ್ಯಮಂತ್ರಿಯವರು ಇಂದು ಮುಂಜಾನೆ ಉಭಯ ನಾಯಕರನ್ನು ಸಂಪರ್ಕಿಸಿ, ವರಿಷ್ಠ ರೊಟ್ಟಿಗೆ ಸಮಾಲೋಚಿಸಿ, ಮಂತ್ರಿಮಂಡಲ ವಿಸ್ತರಿಸಿ ತಮ್ಮನ್ನು ಸೇರ್ಪಡೆ ಮಾಡಿಕೊಳ್ಳುವ ಭರವಸೆ ಇತ್ತರು. ಮುಖ್ಯಮಂತ್ರಿ ಹಾಗೂ ವರಿಷ್ಠರ ವಿರುದ್ಧ ಹರಿಹಾಯಲು ಕರೆದಿದ್ದ ಪತ್ರಿಕಾಗೋಷ್ಠಿ ಕೇವಲ ಮೋದಿ ಸರ್ಕಾರವನ್ನು ಹಾಡಿ ಹೊಗಳಲು ಸೀಮಿತವಾಯಿತು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಈಶ್ವರಪ್ಪ ಸಂಪುಟಕ್ಕೆ ರಾಜೀನಾಮೆ ಸಲ್ಲಿಸಿದ್ದ ನನ್ನ ಹಾಗೂ ರಮೇಶ್ ಜಾರಕಿಹೊಳಿ ಅವರನ್ನು ಮತ್ತೆ ಮಂತ್ರಿಮಂಡ ಲಕ್ಕೆ ಸೇರ್ಪಡೆ ಮಾಡಿಕೊಳ್ಳುವ ಭರವಸೆ ಮುಖ್ಯ ಮಂತ್ರಿಯವರಿಂದ ದೊರೆತಿದೆ ಎಂದರು. ಸಚಿವ ಸ್ಥಾನ ಬಯಸಿ ಪ್ರತಿಭಟನೆ ಮಾಡಿದ್ದು ನಿಜ. ಮುಖ್ಯಮಂತ್ರಿ ಮತ್ತು ವರಿಷ್ಠರ ಭರವಸೆ ದೊರೆತ ನಂತರ ನಾನು ಬೆಳಗಾವಿಯಲ್ಲಿ ಜರುಗುತ್ತಿರುವ ವಿಧಾನಮಂಡಲದ ಅಧಿವೇಶನದಲ್ಲಿ ಪಾಲ್ಗೊಳ್ಳುವ ಬಗ್ಗೆ ರಾತ್ರಿ ತೀರ್ಮಾನ ಕೈಗೊಳ್ಳುತ್ತೇನೆ ಎಂದರು. ಪಕ್ಷದ ರಾಷ್ಟ್ರೀಯ ನಾಯಕರು ಪ್ರಕರಣದಲ್ಲಿ ಕ್ಲೀನ್‌ಚಿಟ್ ಲಭಿಸಿದರೆ ಮರಳಿ ಸಂಪುಟಕ್ಕೆ ತೆಗೆದುಕೊಳ್ಳುವ ಭರವಸೆ ಕೊಟ್ಟಿದ್ದರು. ಇದೀಗ ನನಗೆ ಕ್ಲೀನ್‌ಚಿಟ್ ಲಭಿಸಿದೆ. ಮಂತ್ರಿಯಾಗುವ ಅವಕಾಶ ಒದಗಿ ಬಂದಿದೆ. ಸಿದ್ದರಾಮಯ್ಯ ಸರ್ಕಾರದಲ್ಲಿ ಕೆ.ಜೆ.ಜಾರ್ಜ್ ಅವರ ಮೇಲೆ ಆರೋಪ ಬಂದಾಗ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ, ತನಿಖೆ ಎದುರಿಸಿ, ಕ್ಲೀನ್‌ಚಿಟ್ ಪಡೆದು, ಮತ್ತೆ ಸಚಿವರಾದರು.

ಅದೇ ಮಾದರಿಯನ್ನೇ ತಮಗೂ ಅನುಸರಿಸುವುದಾಗಿ ವರಿಷ್ಠರು ಹಾಗೂ ಮುಖ್ಯಮಂತ್ರಿಗಳು ಭರವಸೆ ನೀಡಿದ್ದರು. ಕ್ಲೀನ್‌ಚಿಟ್ ದೊರೆತು ನಾಲ್ಕು ತಿಂಗಳು ಕಳೆದರೂ ಮಂತ್ರಿಯಾಗುವ ಅವಕಾಶ ದೊರೆತಿರಲಿಲ್ಲ. ನಾನು ಬೊಮ್ಮಾಯಿ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲೆಲ್ಲ ಇಂದು, ನಾಳೆ ಎನ್ನುತ್ತಿದ್ದರು. ರಾಜಕೀಯ ಅಂತಿಮ ಕ್ಷಣದಲ್ಲಿ ಆರೋಪ ಹೊತ್ತು, ನಾನು ಜನರ ಮುಂದೆ ಹೋಗಬಾರದೆಂಬ ಉದ್ದೇಶಕ್ಕಾಗಿ ಕೆಲವು ಕಠಿಣ ತೀರ್ಮಾನ ಕೈಗೊಳ್ಳಬೇಕಾಯಿತು.

ಮುಖ್ಯಮಂತ್ರಿಯವರು ಇಂದು ಬೆಳಗ್ಗೆ ದೆಹಲಿಯ ಖಾಸಗಿ ಚಾನಲ್‌ವೊಂದಕ್ಕೆ ನೀಡಿರುವ ಸಂದರ್ಶನವೊಂದರಲ್ಲಿ ತಮ್ಮನ್ನು ಮಂತ್ರಿ ಮಾಡುವುದಾಗಿಯೂ ಹೇಳಿದ್ದಾರೆ. ಅಷ್ಟೇ ಅಲ್ಲ ತಮ್ಮೊಂದಿಗೂ ಮಾತನಾಡಿದ್ದಾರೆ. ಅವರು ನೀಡಿದ ಭರವಸೆ ಹಿನ್ನೆಲೆಯಲ್ಲಿ ಬೆಳಗಾವಿ ಅಧಿವೇಶನದಲ್ಲಿ ಪಾಲ್ಗೊಳ್ಳಲು ತೆರಳುವುದಾಗಿ ತಿಳಿಸಿದರು.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿಯವರು, ರಮೇಶ್ ಜಾರಕಿಹೊಳಿ ಮತ್ತು ಕೆ.ಎಸ್.ಈಶ್ವರಪ್ಪ ಅವರೊಂದಿಗೆ ಸಂಪರ್ಕದಲ್ಲಿದ್ದೇನೆ ಎಂದು ತಿಳಿಸಿದರು. ರಮೇಶ್ ಜಾರಕಿಹೊಳಿ ಮತ್ತು ಕೆ.ಎಸ್.ಈಶ್ವರಪ್ಪ ಅವರು ವಿಧಾನಮಂಡಲ ಅಧಿವೇಶನದಲ್ಲಿ ಭಾಗವಹಿಸದೇ ಇರುವುದು ಬಹಿಷ್ಕಾರವಲ್ಲ. ತಮ್ಮ ಮೇಲಿದ್ದ ಪ್ರಕರಣಗಳಲ್ಲಿ ಮುಕ್ತರಾದ ಮೇಲೆ ಮತ್ತೊಮ್ಮೆ ಸಂಪುಟಕ್ಕೆ ಸೇರಬೇಕೆನ್ನುವ ಅವರ ಚಿಂತನೆ ಸರಿಯಿದೆ. ಅವರ ವಿಚಾರವನ್ನು ದೆಹಲಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಚರ್ಚೆ ಮಾಡಿದ್ದೇನೆ. ಅವರೂ ಕೂಡ ಸಕಾರಾತ್ಮಕ ವಾಗಿದ್ದಾರೆ. ಮಿಕ್ಕ ವಿಚಾರಗಳನ್ನು ಬಹಿರಂಗವಾಗಿ ಹೇಳಲು ಸಾಧ್ಯವಿಲ್ಲ ಎಂದರು. ಸಿಬಿಐ ದಾಳಿ ಬಗ್ಗೆ ಡಿ.ಕೆ.ಶಿವಕುಮಾರ್ ಅವರ ಹೇಳಿಕೆಗೆ ಉತ್ತರಿಸಿ ಸಂವಿಧಾನಾತ್ಮಕವಾಗಿ ಸ್ವಾಯತ್ತವಾಗಿರುವ ಸಂಸ್ಥೆ ಅವರ ಬಳಿ ಇರುವ ಪುರಾವೆ ಆಧರಿಸಿ ಕ್ರಮ ಕೈಗೊಳ್ಳುತ್ತಾರೆ. ಇದು ಡಿ.ಕೆ.ಶಿವಕುಮಾರ್ ಅವರಿಗೂ ತಿಳಿದಿರುವ ವಿಚಾರ ಎಂದರು.

ಮುಡಾ ನೂತನ ಅಧ್ಯಕ್ಷ

ವೇಳೆ ನಾನು ನಗರ ಪ್ರಧಾನ ಕಾರ್ಯ ದರ್ಶಿಯಾಗಿ ಕೆಲಸ ಮಾಡಿದ್ದೇನೆ. ಯುವ ದಸರಾ ಸಮಿತಿಯ ಅಧ್ಯಕ್ಷನಾಗಿ ನಾಡಹಬ್ಬ ದಸರಾ ಉತ್ಸವದಲ್ಲೂ ಸೇವೆ ಸಲ್ಲಿಸುವ ಅವಕಾಶ ಸಿಕ್ಕಿತ್ತು. ಹೋಟೆಲ್ ಉದ್ಯಮದ ಜೊತೆಗೆ 'ನಿರೀಕ್ಷೆ' ವಿಶೇಷಚೇತನರ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಯಾಗಿ, ರೋಟರಿ ಮೈಸೂರು ಉತ್ತರ ಸಹಾಯಕ ರಾಜಪಾಲರಾಗಿ ಕಾರ್ಯ ನಿರ್ವಹಿಸಿದ್ದೇನೆ. ನನ್ನ ಸೇವೆಯನ್ನು ಗುರುತಿಸಿ ಸರ್ಕಾರ ಮುಡಾ ಅಧ್ಯಕ್ಷನನ್ನಾಗಿ ಮಾಡಿದ್ದು ಸಂತಸ ತಂದಿದೆ ಎಂದು ಹೇಳಿದರು. ನಮ್ಮ ತಾತ ಮೈಸೂರು ಅರಮನೆಯಲ್ಲಿ ಸಿಪಾಯಿ ಆಗಿದ್ದರು. ನಮ್ಮ ತಂದೆ ಗುತ್ತಿಗೆದಾರರಾಗಿ ಜನಮನ್ನಣೆ ಗಳಿಸಿದ್ದರು. ಅವರಿಬ್ಬರ ಆಶೀರ್ವಾದ, ಪ್ರೇರಣೆಯಿಂದ ನಾನೂ ಸಮಾಜ ಸೇವೆಯಲ್ಲಿ ತೊಡಗಿದೆ. ಸದ್ಯ ಸರ್ಕಾರ ನೀಡಿರುವ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ, ಸಮರ್ಪಕವಾಗಿ ನಿರ್ವಹಿಸುವ ಮೂಲಕ ಸರ್ಕಾರ ಹಾಗೂ ಪಕ್ಷದ ಹಿರಿಯರ ವಿಶ್ವಾಸ ಉಳಿಸಿಕೊಳ್ಳುತ್ತೇನೆ ಎಂದರು.

ಕಳೆದ ಜುಲೈನಲ್ಲಿ ಒಟ್ಟು 47 ನಿಗಮ ಮಂಡಳಿಗಳ ಪೈಕಿ 22ರ ಅಧ್ಯಕ್ಷರ ನೇಮಕಾತಿಯನ್ನು ರಾಜ್ಯ ಸರ್ಕಾರ ವಾಪಸ್ ಪಡೆದಿತ್ತು. ಅದೇ ಮಾಸಾಂತ್ಯದಲ್ಲಿ ಮುಡಾ ಹೊರತಾಗಿ ಮೈಲ್ಯಾಕ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ, ಮೃಗಾಲಯ, ಕಾಡಾ, ಜಂಗಲ್ ಲಾಡ್ಜಸ್ ಸೇರಿದಂತೆ ಹಲವು ನಿಗಮ ಮಂಡಳಿಗಳಿಗೆ ನೂತನ ಅಧ್ಯಕ್ಷರ ನೇಮಕ ಮಾಡಲಾಗಿತ್ತು. ಹೆಚ್.ವಿ.ರಾಜೀವ್ ಅವರ ನಂತರ ಸದ್ಯ ಯಶಸ್ವಿ ಎಸ್.ಸೋಮಶೇಖರ್ ಅವರನ್ನು ಮುಡಾ ಅಧ್ಯಕ್ಷರಾಗಿ ನಾಮನಿರ್ದೇಶನ ಮಾಡಿದ್ದು, ಈ ಸಂಬಂಧ ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ಸತೀಶ್ ಕಬಾಡಿ ಆದೇಶ ಹೊರಡಿಸಿದ್ದಾರೆ.

ಸರ್ಕಾರಿ ನೌಕರರ ಕ್ರೀಡಾಕೂಟಕ್ಕೆ ಚಾಲನೆ

ಕ್ರೀಡೆ ಮೂಲಕ ದೈಹಿಕ, ಮಾನಸಿಕ ಸದೃಢತೆ ಕಾಪಾಡಿಕೊಳ್ಳಲು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಸಲಹೆ



ಮೈಸೂರು, ಡಿ.20(ಎಂಟಿವೈ)- ಸರ್ಕಾರಿ ನೌಕರರು ಒತ್ತಡ ನಿವಾರಣೆಗಾಗಿ ವರ್ಷವಿಡೀ ಒಂದಲ್ಲ ಒಂದು ಕ್ರೀಡಾ ಚಟುವಟಿಕೆಯಲ್ಲಿ ಪಾಲ್ಗೊಳ್ಳುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಲಹೆ ನೀಡಿದ್ದಾರೆ.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಆಯೋಜಿಸಿದ್ದ 2022-23ನೇ ಸಾಲಿನ ಎರಡು ದಿನಗಳ ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಮಹತ್ತರ ಜವಾಬ್ದಾರಿ ರಾಜ್ಯ ಸರ್ಕಾರಿ ನೌಕರರ ಮೇಲಿರುತ್ತದೆ. ಕೋವಿಡ್ ಸಂದರ್ಭದಲ್ಲಿ ಸರ್ಕಾರಿ ನೌಕರರು ಸಲ್ಲಿಸಿದ ಸೇವೆ ಪ್ರಶಂಸನೀಯ. ಚುನಾವಣೆ ಹಾಗೂ ತುರ್ತು ಸಂದರ್ಭದಲ್ಲಿ ಸರ್ಕಾರಿ ನೌಕರರು ಸಮರೋಪಾದಿಯಲ್ಲಿ ಕೆಲಸ ಮಾಡುತ್ತಾರೆ. ಈ ವೇಳೆ ಮೇಲಾಧಿಕಾರಿಗಳು, ಜನರು, ರಾಜಕಾರಣಿಗಳಿಂದಲೂ ಒತ್ತಡ ಬರುತ್ತಿರುತ್ತದೆ. ಅವೆಲ್ಲದರ ನಡುವೆ ಸರ್ಕಾರಿ ನೌಕರರು ತಮ್ಮ ಜವಾಬ್ದಾರಿಯನ್ನು ಯಾವುದೇ ಲೋಪವಾಗದಂತೆ ಯಶಸ್ವಿಯಾಗಿ ನಿಭಾಯಿಸಿಕೊಂಡು ಬಂದಿದ್ದಾರೆ ಎಂದು ಪ್ರಶಂಸಿಸಿದರು.

ಒತ್ತಡ ನಿವಾರಣೆಗೆ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಅನಿವಾರ್ಯ. ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವುದರೊಂದಿಗೆ ದೈಹಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳುವತ್ತ ಗಮನಹರಿಸಬೇಕು. ವರ್ಷಕ್ಕೊಮ್ಮೆ ನಡೆಯುವ ಕ್ರೀಡಾಕೂಟದಲ್ಲಿ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರು ಪಾಲ್ಗೊಂಡಿರುವುದು ಶ್ಲಾಘನೀಯ. ತಮ್ಮಲ್ಲಿರುವ ಪ್ರತಿಭೆ ಹೊರಹಾಕಲು ಇದು ಉತ್ತಮ ವೇದಿಕೆ. ಆರೋಗ್ಯ ಕಾಪಾಡಿಕೊಳ್ಳಲು ಸಹಕಾರಿ. ಗಾಯಗಳಾಗದಂತೆ ಎಚ್ಚರ ವಹಿಸಬೇಕು. ಸೋಲು-ಗೆಲುವು ಮುಖ್ಯವಲ್ಲ ಕ್ರೀಡಾ ಸ್ಫೂರ್ತಿ ಪ್ರದರ್ಶಿಸಬೇಕು ಎಂದು ಸಲಹೆ ನೀಡಿದರು.

ಮೇಯರ್ ಶಿವಕುಮಾರ್ ಮಾತನಾಡಿ, ಸಾಂಸ್ಕೃತಿಕ ಕಾರ್ಯಕ್ರಮಗಳ ಮುಖಾಂತರ ಒಂದಷ್ಟು ವಿಕಸನ ಮತ್ತು ವಿಶ್ರಾಂತಿ ಪಡೆಯುವ ನಿಟ್ಟಿನಲ್ಲಿ ಇದೊಂದು ಉತ್ತಮ ಪ್ರಯತ್ನವಾಗಿದೆ. ವಿಶೇಷವಾಗಿ ದೈಹಿಕವಾಗಿ ಯಾವಾಗ ನಾವು ಸದೃಢರಾಗಿರುತ್ತೇವೋ ಆಗ ಮಾನಸಿಕವಾಗಿಯೂ ಸಮರ್ಥವಾಗಿರುತ್ತೇವೆ. ಎಷ್ಟೇ ಒತ್ತಡವಿದ್ದರೂ ಸಮಚಿತ್ತವಾಗಿ ಕೆಲಸ ನಿರ್ವಹಿಸಲು ಆಗ ಸಾಧ್ಯವಾಗುತ್ತದೆ. ಈ ಒಂದು ಕಾರ್ಯಕ್ರಮ ನಿಮ್ಮಲ್ಲಿರುವ ಪ್ರತಿಭೆಯನ್ನು ಅನಾವರಣ ಮಾಡಲು ಉತ್ತಮ ವೇದಿಕೆಯಾಗಿದೆ ಎಂದು ತಿಳಿಸಿದರು.

ಆಕರ್ಷಕ ಪಥಸಂಚಲನ: ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದ ಸರ್ಕಾರಿ ನೌಕರರು ಇಲಾಖೆಗೆ ಅನುಗುಣವಾಗಿ ತಂಡ ರಚಿಸಿಕೊಂಡು ಆಕರ್ಷಕ ಪಥಸಂಚಲನ ನಡೆಸಿ, ಗೌರವ ವಂದನೆ ಸಲ್ಲಿಸಿದರು.

> **ಕೋವಿಡ್ ಕಾರಣದಿಂದ ಎರಡು ವರ್ಷದಿಂದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ನಡೆದಿರಲಿಲ್ಲ. ಈ ಬಾರಿ ಜಿಲ್ಲಾಮಟ್ಟದಲ್ಲಿ ಆಯೋಜಿಸಲಾಗಿದೆ. ಸ್ಪರ್ಧಾ ಮನೋಭಾವದಿಂದ ಪ್ರತಿಯೊಬ್ಬರು ಭಾಗವಹಿಸಬೇಕು.**
>
> **-ಡಾ.ಬಿ.ಆರ್.ಪೂರ್ಣಿಮಾ,** ಜಿ.ಪಂ. ಸಿಇಓ

ಕಾರ್ಯಕ್ರಮದಲ್ಲಿ ಜಿ.ಪಂ. ಸಿಇಓ ಡಾ.ಬಿ.ಆರ್.ಪೂರ್ಣಿಮಾ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಉಪ ಮೇಯರ್ ಜಿ.ರೂಪ, ಕರ್ನಾಟಕ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜೆ.ಗೋವಿಂದ ರಾಜು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ರಾವುತ್ ಗಂಗಾಧರ್, ಸರ್ಕಾರಿ ನೌಕರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರೇವಣ್ಣ, ಪದಾಧಿಕಾರಿಗಳಾದ ರಮೇಶ್, ರಮೇಶ್‌ಕುಮಾರ್, ವಿಶ್ವನಾಥ್ ಹಾಗೂ ವಿವಿಧ ಇಲಾಖೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸಂಗೊಳ್ಳಿ ರಾಯಣ್ಣ ಪ್ರತಿಮೆ ತೆರವು ಖಂಡಿಸಿ

ಸಿದ್ದರಾಮಯ್ಯ ಅಭಿಮಾನಿಗಳ ಬ್ರಿಗೇಡ್ ಪ್ರತಿಭಟನೆ



ಮೈಸೂರು, ಡಿ.20(ಆರ್‌ಕೆಬಿ)- ಹೊಳೆನರಸೀಪುರ ತಾಲೂಕಿನ ಶ್ರವಣೂರು ಗ್ರಾಮದಲ್ಲಿ ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ತೆರವುಗೊಳಿಸಿದ್ದನ್ನು ಖಂಡಿಸಿ, ಅಖಿಲ ಕರ್ನಾಟಕ ಸಿದ್ದರಾಮಯ್ಯ ಅಭಿಮಾನಿಗಳ ಬ್ರಿಗೇಡ್ ಕಾರ್ಯಕರ್ತರು ಮಂಗಳವಾರ ಮೈಸೂರು ನ್ಯಾಯಾಲಯದ ಎದುರಿನ ಗಾಂಧಿ ಪುತ್ಥಳಿ ಬಳಿ ಪ್ರತಿಭಟನೆ ನಡೆಸಿದರು.

ಶ್ರವಣೂರು ಗ್ರಾಮದಲ್ಲಿ ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ಜಿಲ್ಲಾಡಳಿತ ತೆರವುಗೊಳಿಸಿ, ಸ್ವಾತಂತ್ರ್ಯ ಹೋರಾಟಗಾರರಿಗೆ ಅವಮಾನ ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಕಾರ್ಯಕರ್ತರು ಸರ್ಕಾರ, ಹಾಸನ ಜಿಲ್ಲಾಡಳಿತ, ಸ್ಥಳೀಯ ಶಾಸಕರ ವಿರುದ್ಧ ಘೋಷಣೆ ಕೂಗಿದರು.

ಸಂಗೊಳ್ಳಿ ರಾಯಣ್ಣ ಗೆರಿಲ್ಲಾ ಮಾದರಿ ಯುದ್ಧ ತಂತ್ರದಿಂದ ಬ್ರಿಟಿಷರ ವಿರುದ್ಧ ಹೋರಾಡಿದ ಮಹಾನಾಯಕ. ಇಂತಹ ಅಪ್ರತಿಮ ವೀರನ ಪುತ್ಥಳಿ ಹಾಗೂ ವೃತ್ತವನ್ನು ತೆರವು ಮಾಡಿ ಜಿಲ್ಲಾಡಳಿತ ಸ್ವಾತಂತ್ರ್ಯ ಹೋರಾಟಗಾರನಿಗೆ ಅಗೌರವ ತೋರಿದೆ ಎಂದು ಅಖಿಲ ಕರ್ನಾಟಕ ಸಿದ್ದರಾಮಯ್ಯ ಅಭಿಮಾನಿಗಳ ಬ್ರಿಗೇಡ್ ರಾಜ್ಯಾಧ್ಯಕ್ಷ ಹಿನಕಲ್ ಉದಯ್ ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರ ಹಾಗೂ ಸ್ಥಳೀಯ ಜಿಲ್ಲಾಡಳಿತ ಕೂಡಲೇ ರಾಯಣ್ಣರ ಪ್ರತಿಮೆ ಇದ್ದ ಸ್ಥಳದಲ್ಲಿಯೇ ಸ್ಥಾಪಿಸಿ, ಗೌರವಿಸಬೇಕು. ರಾಜ್ಯದಲ್ಲಿ ಶಾಂತಿ, ಸಾಮರಸ್ಯ, ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಸರ್ಕಾರ ನಡೆದುಕೊಳ್ಳಬೇಕು. ಇಲ್ಲದಿದ್ದರೆ ರಾಜ್ಯಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಬ್ರಿಗೇಡ್‌ನ ರಾಜ್ಯ ಉಪಾಧ್ಯಕ್ಷ ಜೆ.ಮಹದೇವ್, ಕಾರ್ಯದರ್ಶಿ ಮಾಕನಹುಂಡಿ ಶಿವು, ಪದಾಧಿಕಾರಿಗಳಾದ ಸಚಿನ್ ಮುರುಗಡಗಳ್ಳಿ, ಮರಡಿಹುಂಡಿ ಪುಟ್ಟಸ್ವಾಮಿ, ಮೈಸೂರು ಬಸವಣ್ಣ, ಧನಪಾಲ್ ಕುರುಬಾರಹಳ್ಳಿ, ಕವಿತಾ ಕಾಳೆ, ಯುವ ಕಾಂಗ್ರೆಸ್‌ನ ನಿಶಾಂತ್ ಪಟೇಲ್, ಮುಖಂಡರಾದ ಛಾಯಾ, ಹಿನಕಲ್ ಹರೀಶ್, ಮಹೇಶ್, ಮೋಹನ್, ಕಾಡನಹಳ್ಳಿ ಸ್ವಾಮೀಗೌಡ, ಚನ್ನಪ್ಪ ಇನ್ನಿತರರು ಉಪಸ್ಥಿತರಿದ್ದರು.

ಶುಲ್ಕ ಹೆಚ್ಚಳ ವಿರೋಧಿಸಿ ವಿದ್ಯಾರ್ಥಿಗಳ ಪ್ರತಿಭಟನೆ



ಮೈಸೂರು, ಡಿ.20(ಆರ್‌ಕೆಬಿ)- ಎರಡು ವರ್ಷಗಳಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ 15000 ರೂ. ಶುಲ್ಕ ಹೆಚ್ಚಳವಾಗಿದೆ ಎಂದು ವಿರೋಧಿಸಿ, ಎಐಡಿಎಸ್‌ಓ ಮೈಸೂರು ಜಿಲ್ಲಾ ಘಟಕದ ಆಶ್ರಯದಲ್ಲಿ ವಿದ್ಯಾರ್ಥಿಗಳು ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಸರ್ಕಾರದ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಾಕಾರರು, ರಾಜ್ಯ ಸರ್ಕಾರ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಶುಲ್ಕ ಹೆಚ್ಚಳ ನೀತಿಯನ್ನು ಮುಂದುವರಿಸಿದೆ. ಕಳೆದ ವರ್ಷ 10,000 ರೂ. ಹೆಚ್ಚಿಸಿದ್ದ ರಾಜ್ಯ ಸರ್ಕಾರ ಈ ವರ್ಷವೂ 5000 ರೂ. ಹೆಚ್ಚಿಸುವ ಮೂಲಕ ಎರಡು ವರ್ಷದಲ್ಲಿ 15,000 ರೂ. ಶುಲ್ಕ ಹೆಚ್ಚಳ ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎಐಡಿಎಸ್‌ಓ ಸಂಘಟನೆಯ ಜಿಲ್ಲಾಧ್ಯಕ್ಷ ಸುಭಾಷ್, ಸರ್ಕಾರದ ಈ ವಿದ್ಯಾರ್ಥಿ ವಿರೋಧಿ ನಡೆ, ಮುಕ್ತ ವ್ಯಾಪಾರೀಕರಣದ ಪ್ರತಿಬಿಂಬವಾಗಿದೆ. ಈ ವರ್ಷ ಯಾವುದೇ ಸೂಚನೆ ನೀಡದೆ ಅಪ್ರಜಾಸತ್ತಾತ್ಮಕ ರೀತಿಯಲ್ಲಿ ಸರ್ಕಾರ ಶುಲ್ಕ ಹೆಚ್ಚಿಸಿದೆ. ಶುಲ್ಕ ಪಾವತಿಸಲು ವಿದ್ಯಾರ್ಥಿಗಳನ್ನು ಕೇಳಿದಾಗ, ಏರಿಕೆ ಕಂಡು ಬೆಚ್ಚಿಬಿದ್ದರು. ಒಂದೆಡೆ ವಿದ್ಯಾರ್ಥಿಗಳು ತೀವ್ರ ಆರ್ಥಿಕ ಬಿಕ್ಕಟ್ಟಿನಲ್ಲಿ ತತ್ತರಿಸುತ್ತಿದ್ದರೆ, ಮತ್ತೊಂದೆಡೆ ಸರ್ಕಾರ ನಿರಂತರವಾಗಿ ಶುಲ್ಕವನ್ನು ಹೆಚ್ಚಿಸುತ್ತಿದೆ ವಿದ್ಯಾರ್ಥಿವೇತನದ ಮೊತ್ತವನ್ನೂ ಕಡಿಮೆ ಮಾಡುತ್ತಿದೆ. ಇದರಿಂದ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ದೂರ ಸರಿಯುವಂತೆ ಮಾಡುತ್ತಿದೆ ಎಂದು ಆರೋಪಿಸಿದರು.

ಸರ್ಕಾರಿ ಇಂಜಿನಿಯರಿಂಗ್ ಶುಲ್ಕಗಳು ಪ್ರತಿ ವರ್ಷ ಹೆಚ್ಚಾಗುತ್ತಿದ್ದರೆ, ಇನ್ನೊಂದೆಡೆ ಇಂಜಿನಿಯರ್ ಆಗುವ ತಮ್ಮ ಕನಸನ್ನು ಬಡ ಮತ್ತು ಕೆಳ ಮಧ್ಯಮ ವರ್ಗದ ಕುಟುಂಬಗಳ ಲಕ್ಷಾಂತರ ವಿದ್ಯಾರ್ಥಿಗಳು ಹೊರಗುಳಿಯುವಂತಾಗಿದೆ ಎಂದು ಸರ್ಕಾರದ ವಿರುದ್ಧ ಕಿಡಿ ಕಾರಿದರು.

ಸರ್ಕಾರ ಕೂಡಲೇ ಹೆಚ್ಚಳ ಮಾಡಿರುವ ಶುಲ್ಕವನ್ನು ತಕ್ಷಣ ಹಿಂಪಡೆಯಬೇಕು. ಪ್ರತೀ ಶೈಕ್ಷಣಿಕ ವರ್ಷದಲ್ಲಿ ಶುಲ್ಕವನ್ನು ಹೆಚ್ಚಿಸುವ ನೀತಿಯನ್ನು ಕೈಬಿಡಬೇಕು ಎಂದು ವಿದ್ಯಾರ್ಥಿಗಳು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಚಂದ್ರಕಲಾ, ಉಪಾಧ್ಯಕ್ಷೆ ಆಸಿಯಾ, ಸದಸ್ಯರಾದ ಸ್ವಾತಿ, ನಿತಿನ್, ಚಂದನ, ಹೇಮಾ, ವಿದ್ಯಾರ್ಥಿಗಳಾದ ಪ್ರೀತಂ, ಪಂಕಜ್, ರೊನಾಲ್ಡ್, ಗಣೇಶ್, ಪ್ರವೀಣ್ ಇನ್ನಿತರರು ಉಪಸ್ಥಿತರಿದ್ದರು.

ರಾಷ್ಟ್ರೀಯ ರೋಡ್ ಸ್ಪೀಡ್ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್

ಮೈಸೂರಿನ ಕು.ರಿಯಾ ಎಲಿಜಬೆತ್ ಆಚಯ್ಯಗೆ 5 ಚಿನ್ನ, 1 ಬೆಳ್ಳಿ ಪದಕ



ಮೈಸೂರು, ಡಿ.20(ಆರ್‌ಕೆಬಿ)- ಬೆಂಗಳೂರಿನಲ್ಲಿ ನಡೆಯುತ್ತಿರುವ 60ನೇ ರಾಷ್ಟ್ರೀಯ ಸ್ಪೀಡ್ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್- 2022 ಕ್ರೀಡಾಕೂಟದಲ್ಲಿ ರಾಜ್ಯದ ಹಿರಿಯ ಸ್ಕೇಟರ್, ಮೈಸೂರಿನ ಕು. ರಿಯಾ ಎಲಿಜಬೆತ್ ಆಚಯ್ಯ ಅವರು 5 ಚಿನ್ನ, ಒಂದು ಬೆಳ್ಳಿ ಪದಕ ಪಡೆದು ಮೊದಲ ಸ್ಥಾನ ದಾಖಲಿಸಿದ್ದಾರೆ.

ಅವರು ಪಡೆದ ಪದಕಗಳ ಪಟ್ಟಿ ಇಂತಿದೆ: 10ಕೆ ರೋಡ್ ಪಾಯಿಂಟ್ಸ್ ಪ್ಲಸ್ ಎಲಿಮಿನೇಷನ್ ರೇಸ್‌ನಲ್ಲಿ ಚಿನ್ನ, 15ಕೆ ರೋಡ್ ಎಲಿಮಿನೇಷನ್ ರೇಸ್‌ನಲ್ಲಿ ಚಿನ್ನ, ರೋಡ್ ಒನ್ ಲ್ಯಾಪ್ ರೇಸ್‌ನಲ್ಲಿ ಚಿನ್ನ, ರಿಂಕ್ 500 ಮೀ ಮತ್ತು ಡಿ ರೇಸ್‌ನಲ್ಲಿ ಬೆಳ್ಳಿ, 4ಕೆ ಮಿಕ್ಸೆಡ್ ರಿಲೇ - ಚಿನ್ನ, 3ಕೆ ರಿಲೇ - ಚಿನ್ನ ಪಡೆದಿದ್ದಾರೆ.

ಈ ತಿಂಗಳ ಡಿ.23 ರಿಂದ 25 ರವರೆಗೆ ನಡೆಯಲಿರುವ ರಾಷ್ಟ್ರೀಯ ತಂಡಕ್ಕೆ ಆಯ್ಕೆ ಪ್ರಕ್ರಿಯೆಗೆ ತಾಲೀಮು ನಡೆಸುತ್ತಿದ್ದು, ಮುಂದಿನ ವರ್ಷ ನಡೆಯಲಿರುವ ಏಷಿಯನ್ ಗೇಮ್ಸ್ ಮತ್ತು ವಿಶ್ವ ರೋಲರ್ ಸ್ಕೇಟರ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿ ಪದಕ ಗೆಲ್ಲುವ ಆತ್ಮ ವಿಶ್ವಾಸ ಹೊಂದಿರುವುದಾಗಿ ಅವರು ತಿಳಿಸಿದ್ದಾರೆ.

ಕು. ರಿಯಾ ಎಲಿಜಬೆತ್ ಆಚಯ್ಯ ಮೈಸೂರಿನ ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಇನ್‌ಫಾರ್ಮೇಷನ್ ಸೈನ್ಸ್ ವಿಭಾಗದ 7ನೇ ಸೆಮಿಸ್ಟರ್ ವಿದ್ಯಾರ್ಥಿ. ಅವರ ಈ ಸಾಧನೆಯನ್ನು ಪ್ರಶಂಸಿಸಿದ ಕಾಲೇಜು ಆಡಳಿತ ಮಂಡಳಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ 'ವರ್ಷದ ಅತ್ಯುತ್ತಮ ವಿದ್ಯಾರ್ಥಿ' ಎಂದು ಅಭಿನಂದಿಸಿದೆ.

ಮೈಸೂರು ವಿಶ್ವವಿದ್ಯಾನಿಲಯದ ಚಾಮುಂಡಿ ಜೋನ್ ಅಂತರ ಕಾಲೇಜು ಚೆಸ್ ಪಂದ್ಯಾವಳಿ



ಮೈಸೂರು, ಡಿ.20- ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಚಾಮುಂಡಿ ಜೋನ್ ಅಂತರ ಕಾಲೇಜು ಚೆಸ್ ಪಂದ್ಯಾವಳಿ ನಡೆಯಿತು. ಮೈಸೂರಿನ ಎನ್.ಐ.ಇ ಕಾಲೇಜಿನ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕರಾದ ಕ್ಯಾಪ್ಟನ್. ಹೆಚ್.ಎನ್. ಶಂಕರನಾರಾಯಣ ಕಾರ್ಯಕ್ರಮವನ್ನು ಉದ್ಘಾಟಿಸಿ, ವೃತ್ತಿ ಜೀವನದಲ್ಲಿ ಚದುರಂಗ ಆಟದ ತೀರ್ಪುಗಾರರಾಗಿ ಮತ್ತು ವಿದ್ಯಾರ್ಥಿಯಾಗಿದ್ದಾಗ ಆಟಗಾರನಾಗಿ ಆಡಿದ ಸವಿನೆನಪುಗಳನ್ನು ಆಟಗಾರರಿಗೆ ತಿಳಿಯಪಡಿಸಿದರು. ಹಾಗೂ ಇಂದಿನ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಚದುರಂಗ ಆಟಗಾರರ ಪರಿಚಯ ವಿಶ್ವದ ಶ್ರೇಷ್ಠ ಆಟಗಾರ ವಿಶ್ವನಾಥನ್ ಆನಂದ್ ಕುರಿತಾಗಿ ಮಾತನಾಡಿದರು.

ವಿದ್ಯಾರ್ಥಿನಿ ಕು.ಸೌಮ್ಯ ಆರ್. ಪ್ರಾರ್ಥಿಸಿ, ಪ್ರೊ.ಸೌಮ್ಯ.ಎಂ ಎಲ್ಲರನ್ನೂ ಸ್ವಾಗತಿಸಿದರು. ಸಂಸ್ಥೆಯ ಗೌ॥ಕಾರ್ಯದರ್ಶಿಗಳಾದ ಪಿ.ವಿಶ್ವನಾಥ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಗೌ॥ಕೋಶಾಧ್ಯಕ್ಷರಾದ ಶ್ರೀಶೈಲ ರಾಮಣ್ಣವರ್ ಅತಿಥಿಗಳಾಗಿ ಭಾಗವಹಿಸಿದ್ದರು. ಪ್ರಾಚಾರ್ಯರಾದ ಡಾ॥ಎಸ್.ಮರೀಗೌಡ ಉಪಸ್ಥಿತರಿದ್ದ ಕಾರ್ಯಕ್ರಮವನ್ನು ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ.ಹರಿಪ್ರಸಾದ್.ಕೆ.ಎನ್ ನಿರೂಪಿಸಿ, ಪ್ರೊ.ಹರ್ಷಿತ.ಎಂ ವಂದಿಸಿದರು. ಕಾರ್ಯಕ್ರಮದಲ್ಲಿ ಅಧ್ಯಾಪಕರು, ಅಧ್ಯಾಪಕೇತರರು, ಕಾಲೇಜಿನ ವಿದ್ಯಾರ್ಥಿಗಳು ಹಾಜರಿದ್ದರು.

ಮೈಸೂರನ್ನು ಮತ್ತಷ್ಟು ಸುರಕ್ಷಾ ಸ್ಥಾನವಾಗಿಸಲು ವಿವಿಧ ಸಂಘ-ಸಂಸ್ಥೆಗಳೊಂದಿಗೆ ಸಭೆ ಆಯೋಜನೆ

- ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ನಿರ್ಧಾರ
- ಸಂಚಾರ ಸುಗಮ, ಸಮರ್ಪಕಗೊಳಿಸಲು ಆಟೋ, ಟ್ಯಾಕ್ಸಿ ಚಾಲಕರೊಂದಿಗೂ ಸಭೆ



ಮೈಸೂರು, ಡಿ.20(ಜಿಎ)- ಮೈಸೂರಿನ ಸುರಕ್ಷತೆ ದೃಷ್ಟಿಯಿಂದ ವಿವಿಧ ಸಂಘ-ಸಂಸ್ಥೆಗಳೊಂದಿಗೆ ಶೀಘ್ರದಲ್ಲಿಯೇ ವಿಶೇಷ ಸಭೆ ನಡೆಸುವುದಾಗಿ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದರು.

ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಸ್ಫೋಟದ ಸೂತ್ರಧಾರಿ ಶಾರೀಕ್ ಮೈಸೂರಿನಲ್ಲಿ ನೆಲೆಸಿ, ಇಲ್ಲಿ ಬಾಂಬ್ ತಯಾರಿಸಿದ್ದು, ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಗಿತ್ತು. ಈ ಘಟನೆ ನಂತರ ಮೈಸೂರು ಪೊಲೀಸರು ನಗರಕ್ಕೆ ಆಗಮಿಸುವ ಪ್ರತಿ ವಾಹನ ಮತ್ತು ವ್ಯಕ್ತಿಗಳ ಮೇಲೆ ತೀವ್ರ ನಿಗಾವಹಿಸಿದ್ದು, ನಾಕಾಬಂದಿ ಹಾಕಿ ತಪಾಸಣೆ ಮಾಡುತ್ತಿದ್ದಾರೆ. ಹಾಗೇ ನಗರದ ಒಳ ಭಾಗದಲ್ಲಿಯೂ ವಾಹನಗಳ ತಪಾಸಣೆಯನ್ನು ಚುರುಕುಗೊಳಿಸಿ, ನಿಯಮ ಉಲ್ಲಂಘಿಸಿದವರ ವಿರುದ್ಧ ಪ್ರಕರಣ ದಾಖಲಿಸುತ್ತಿದ್ದಾರೆ.

ಮೈಸೂರಿನಲ್ಲಿ ಕಳೆದ ಹಲವು ದಿನಗಳಿಂದ ವ್ಯಾಪಕ ರೀತಿ ನಡೆಯುತ್ತಿರುವ ವಾಹನಗಳ ತಪಾಸಣೆಯ ಸಂದರ್ಭದಲ್ಲಿ ತಮಗೆ ಕಂಡು ಬರುವ ಪ್ರಮುಖ ನ್ಯೂನತೆಗಳು ಹಾಗೂ ಭದ್ರತಾ ಲೋಪವನ್ನು ಗಮನದಲ್ಲಿಟ್ಟುಕೊಂಡು ಈ ಬಗ್ಗೆ ನಗರದ ವಿವಿಧ ಸಂಘ-ಸಂಸ್ಥೆಗಳೊಂದಿಗೆ ಸಭೆ ನಡೆಸಿ, ಸಲಹೆ-ಸೂಚನೆ ಪಡೆಯುತ್ತೇವೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಆಟೋ, ಟ್ಯಾಕ್ಸಿ ಚಾಲಕರೊಂದಿಗೂ ಸಭೆ : ನಗರದಲ್ಲಿ ವಾಹನಗಳ ತಪಾಸಣೆಯಲ್ಲಿ ತ್ರಿಬಲ್ ರೈಡಿಂಗ್, ನೊಂದಣಿ ಇಲ್ಲದ ವಾಹನ ಚಾಲನೆ, ಲೈಸೆನ್ಸ್ ಇಲ್ಲದೆ ಇರುವುದು ಹೀಗೆ ನಾನಾ ಪ್ರಕರಣಗಳು ಕಂಡು ಬಂದಿವೆ. ಈ ಸಂಬಂಧವೂ ಸದ್ಯದಲ್ಲೇ ನಗರದ ಆಟೋ ಚಾಲಕರು ಹಾಗೂ ಟ್ಯಾಕ್ಸಿ ಚಾಲಕರೊಂದಿಗೂ ಸಭೆ ನಡೆಸಲಾಗುವುದು. ನಂತರ ಆರ್‌ಟಿಓ ಅಧಿಕಾರಿಗಳೊಂದಿಗೆ ಚರ್ಚಿಸಿ, ನೋಂದಣಿಯಾಗದ ವಾಹನಗಳಿಗೆ ತ್ವರಿತ ನೋಂದಣಿ ಹಾಗೂ ಲೈಸೆನ್ಸ್ ನೀಡುವ ವಿಶೇಷ ಅಭಿಯಾನ ಏರ್ಪಡಿಸುವ ಆಲೋಚನೆಯೂ ಇದ್ದು, ಸದ್ಯದಲ್ಲಿ ಅದಕ್ಕೆ ಚಾಲನೆ ನೀಡಲಿದ್ದೇವೆ. ಅದರೊಟ್ಟಿಗೆ ಮೈಸೂರು ಪ್ರವಾಸಿ ತಾಣವಾಗಿರುವುದರಿಂದ ಪ್ರವಾಸಿಗರೊಂದಿಗೆ ಹೇಗೆ ವರ್ತಿಸಬೇಕು, ಮೈಸೂರಿನ ಘನತೆಯನ್ನು ಹೇಗೆ ಕಾಪಾಡಿಕೊಳ್ಳುವುದು ಎಂಬುದನ್ನು ಮನವರಿಕೆ ಮಾಡಿಕೊಡಲಾಗುವುದು ಎಂದರು.

ಬಾಡಿ ಕ್ಯಾಮ್ ಅವಶ್ಯವಿದೆ: ಸಾರ್ವಜನಿಕರ ಹಿತ ದೃಷ್ಟಿಯಿಂದ ನಗರದಲ್ಲಿ ವಾಹನ ತಪಾಸಣೆ ಮಾಡಲಾಗುತ್ತಿದೆ. ಕೆಲವು ಸಂದರ್ಭದಲ್ಲಿ ವಾಹನ ಸವಾರರು ನಾವು ಸಂಚಾರಿ ನಿಯಮ ಉಲ್ಲಂಘನೆ ಮಾಡಿಲ್ಲ ಎಂದು ವಾದಿಸಿ, ವಾಗ್ವಾದಕ್ಕಿಳಿಯುತ್ತಾರೆ. ಬಾಡಿ ಕ್ಯಾಮ್ ಇದ್ದರೆ, ಅವರು ಮಾಡುವ ತಪ್ಪು ಅದರಲ್ಲಿ ರೆಕಾರ್ಡ್ ಆಗುತ್ತದೆ. ಇದರಿಂದ ವಾಹನ ಸವಾರರ ಲೋಪ ತೋರಿಸುವುದರ ಜೊತೆಗೆ ನಮ್ಮ ಸಿಬ್ಬಂದಿಗೂ ಒಳಿತು. ಈಗಾಗಲೇ 5 ಲಕ್ಷ ರೂ. ವೆಚ್ಚದಲ್ಲಿ ಬಾಡಿ ಕ್ಯಾಮ್ ಖರೀದಿ ಮಾಡಲಾಗಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಮಂದಿಗೆ ವ್ಯವಸ್ಥೆ ಮಾಡಲಿದ್ದೇವೆ ಎಂದರು.

ಸುರಕ್ಷಾಗೆ ಒಲವು ತೋರದ ಜನತೆ : ಕುಕ್ಕರ್ ಬಾಂಬ್ ಬ್ಲಾಸ್ಟ್ ಪ್ರಕರಣದ ನಂತರ ಮನೆ ಬಾಡಿಗೆಗೆ ನೀಡುವವರು ಹಾಗೂ ಪಿಜಿಯಲ್ಲಿ ಉಳಿದುಕೊಳ್ಳುವವರು ಸುರಕ್ಷಾ ಅರ್ಜಿಯನ್ನು ಸಲ್ಲಿಸಬೇಕು ಎಂಬ ಆದೇಶವನ್ನು ಹೊರಡಿಸಲಾಗಿದ್ದು, ಸ್ಥಳೀಯ ಪೊಲೀಸ್ ಠಾಣೆ ಹಾಗೂ ನಗರ ಪೊಲೀಸ್ ವೆಬ್‌ಸೈಟ್‌ನಲ್ಲಿ ಕೆಲವರು ಅರ್ಜಿ ಸಲ್ಲಿಸಿದ್ದಾರೆ. ಆದರೆ, ಬಹಳಷ್ಟು ಮಂದಿ ಇನ್ನೂ ಸಲ್ಲಿಸಬೇಕಿದೆ. ಇದಕ್ಕೆ ಪ್ರತಿಕ್ರಿಯೆ ನೀರಸವಾಗಿದೆ ಎಂದರು.

ಸಾರ್ವಜನಿಕರಲ್ಲಿ ಸುರಕ್ಷಾ ಬಗ್ಗೆ ಇನ್ನೂ ಅನೇಕ ಗೊಂದಲಗಳಿದ್ದು, ಕೆಲವರು ನನಗೆ ಕರೆ ಮಾಡುತ್ತಾರೆ. ನಾನು ಸಮರ್ಪಕ ಮಾಹಿತಿ ನೀಡುತ್ತಿದ್ದೇನೆ. ಮುಂದಿನ ದಿನಗಳಲ್ಲಿ ಪಾಲಿಕೆ ಸಹಯೋಗದೊಂದಿಗೆ ವಾರ್ಡ್ ಮಟ್ಟದಲ್ಲಿ ಜನರಿಗೆ ಅರಿವು ಮೂಡಿಸಿ, ಪಾಲಿಕೆಯಿಂದಲೂ ಅರ್ಜಿ ಸಲ್ಲಿಕೆ ಮಾಡುವ ಚಿಂತನೆ ಇದ್ದು, ಈ ಸಂಬಂಧ ಪಾಲಿಕೆ ಆಯುಕ್ತರೊಂದಿಗೂ ಚರ್ಚಿಸಿದ್ದೇನೆ. ಹಾಗೆಯೇ ಏರ್‌ಪೋರ್ಟ್ ಅಧಿಕಾರಿಗಳು, ಹೊಟೇಲ್ ಮತ್ತು ಲಾಡ್ಜ್ ಮಾಲೀಕರು, ಪಿಜಿ ಮಾಲೀಕರೊಂದಿಗೆ ಸಭೆ ನಡೆಸುತ್ತೇನೆ ಎಂದು ತಿಳಿಸಿದರು.

ಶಾಂತಿಯ ನಗರಿ : ಮೈಸೂರು ನಗರ ಎಲ್ಲರಿಗೂ ತಿಳಿದಂತೆ ಶಾಂತಿಯ ನೆಲೆಯಾಗಿದ್ದು, ಇಲ್ಲಿ ಹೇಳಿಕೊಳ್ಳುವಷ್ಟು ಅಪರಾಧ ಪ್ರಕರಣಗಳಿಲ್ಲ. ನಾನು ಮೈಸೂರಿಗೆ ಆಗಮಿಸಿದ ಮೊದಲ ವಾರದಲ್ಲಿಯೇ ನಗರವನ್ನು ಬಹುತೇಕ ಸುತ್ತಿದ್ದೇನೆ. ಕೆಲವೊಂದು ಸಮಸ್ಯೆಗಳು ಕಣ್ಣಿಗೆ ಬಿದಿದ್ದು, ಅದನ್ನು ಪಟ್ಟಿ ಮಾಡಿಕೊಂಡಿದ್ದೇನೆ. ಹಂತ ಹಂತವಾಗಿ ಬಗೆಹರಿಸುವ ವಿಶ್ವಾಸವಿದೆ ಎಂದರು

ನಾಗರಹೊಳೆ ಅರಣ್ಯಕ್ಕೆ ಥರ್ಮಲ್ ಡ್ರೋಣ್ ಕ್ಯಾಮರಾ ಕೊಡುಗೆ

ಹೆಚ್.ಡಿ.ಕೋಟೆ, ಡಿ.20– ಬೇಸಿಗೆ ವೇಳೆ ಕಾಡ್ಗಿಚ್ಚು ತಡೆಗಟ್ಟಲು ಹಾಗೂ ಅರಣ್ಯ ಅಪರಾಧಗಳ ಕಡಿವಾಣಕ್ಕೆ ಅತ್ಯಾಧುನಿಕ ತಂತ್ರಜ್ಞಾನವುಳ್ಳ ಥರ್ಮಲ್ ಡ್ರೋಣ್ ಕ್ಯಾಮರಾ ಬಳಕೆಗೆ ಅರಣ್ಯ ಇಲಾಖೆ ನಿರ್ಧರಿಸಿದ ಬೆನ್ನಲ್ಲೇ ಸ್ವಯಂ ಸೇವಾ ಸಂಸ್ಥೆಯೊಂದು(ಎನ್‌ಜಿಓ) ಥರ್ಮಲ್ ಡ್ರೋಣ್ ಕ್ಯಾಮರಾ(ಕ್ಯೂ4ಐ ಯುಎವಿ) ವೊಂದನ್ನು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಕ್ಕೆ ಕೊಡುಗೆ ನೀಡಿದೆ.



ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲೂಕು ವ್ಯಾಪ್ತಿಗೆ ಒಳಪಡುವ ನಾಗರ ಹೊಳೆ ಹುಲಿ ಸಂರಕ್ಷಿತ ಪ್ರದೇಶದ ಕಾಕನ ಕೋಟೆ ಸಫಾರಿ ಕೇಂದ್ರದ ಆವರಣದಲ್ಲಿ ಮಂಗಳವಾರ ಬೆಳಗ್ಗೆ ನಡೆದ ಕಾರ್ಯ ಕ್ರಮದಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಹರ್ಷ ಕುಮಾರ್ ಚಿಕ್ಕನರಗುಂದ ಅವರಿಗೆ ಪಿ.ಎಂ.ವೆಂಚರ್ಸ್ ಅಧ್ಯಕ್ಷ ಫಣೀಶ್ ಮೂರ್ತಿ ಹಾಗೂ ಟೈಗರ್ಸ್ ರಮೇಶ್ ಥರ್ಮಲ್ ಡ್ರೋಣ್ ಕ್ಯಾಮರಾವನ್ನು ಹಸ್ತಾಂತರಿಸಿದರು.

ಇದೇ ವೇಳೆ ಅಂತರಸಂತೆ ವಲಯದ ಸಿಬ್ಬಂದಿಗಳ ಸಮ್ಮುಖದಲ್ಲಿ ಥರ್ಮಲ್ ಡ್ರೋಣ್ ಕ್ಯಾಮರಾ ಕಾರ್ಯಾಚರಣೆ ಪ್ರಾತ್ಯಕ್ಷಿಕೆ ನಡೆಸಲಾಯಿತು. ಎಲ್ಲಾ ಹವಾಮಾನದಲ್ಲೂ ಹಾಗೂ ಹಗಲು–ರಾತ್ರಿ ಕಾರ್ಯಾಚರಣೆ ಮಾಡಬಲ್ಲ ಈ ಡ್ರೋಣ್‌ನಿಂದ ಅರಣ್ಯ ಇಲಾಖೆಗೆ ಆಗುವ ಉಪಯುಕ್ತತೆ ಬಗ್ಗೆ ಸಿಬ್ಬಂದಿಗಳಿಗೆ ಮನವರಿಕೆ ಮಾಡಿಕೊಡಲಾಯಿತು.

ಈ ಥರ್ಮಲ್ ಡ್ರೋಣ್ ಕ್ಯಾಮರಾ 4 ಕಿಮೀ ಸುತ್ತಳತೆಯಲ್ಲಿ ಸತತ 40 ನಿಮಿಷಗಳವರೆಗೆ ಛಾಯಾಚಿತ್ರ ಹಾಗೂ ವಿಡಿಯೋ ತೆಗೆಯಬಲ್ಲ ಸಾಮರ್ಥ್ಯ ಹೊಂದಿದ್ದು, ಅರಣ್ಯದಲ್ಲಿ ಬೇಟೆಗಾರರ ಹಾವಳಿ, ಬೆಂಕಿ ಬಿದ್ದ ಸ್ಥಳ ನಿಖರವಾಗಿ ಪತ್ತೆ ಮಾಡಲು ಕಾಡಂಚಿನ ಪ್ರದೇಶದಲ್ಲಿ ಅನುಮಾನಾಸ್ಪದ ವ್ಯಕ್ತಿಗಳ ಸಂಚಾರವನ್ನು ನಿಖರವಾಗಿ ಗುರುತಿಸಬಲ್ಲ ಗುಣವನ್ನು ಹೊಂದಿದೆ.

ಪಿಎಂ ವೆಂಚರ್ಸ್ ಅಧ್ಯಕ್ಷ ಫಣೀಶ್ ಮೂರ್ತಿ ಮಾತನಾಡಿ, ಈ ಹಿಂದೆ ನಾಗರ ಹೊಳೆ ಅಭಯಾರಣ್ಯಕ್ಕೆ 900 ಟ್ರ್ಯಾಕಿಂಗ್ ಕ್ಯಾಮರಾಗಳನ್ನು ನೀಡಲಾಗಿತ್ತು. ಇತ್ತೀಚೆಗೆ ಕಿಡಿಗೇಡಿಗಳ ಉರುಳಿಗೆ ಸಿಲುಕಿ ಹುಲಿ ಹಾಗೂ ಇತರೆ ಪ್ರಾಣಿಗಳು ಸಾಯುತ್ತಿರುವ ಹಿನ್ನೆಲೆಯಲ್ಲಿ ಮತ್ತು ಅರಣ್ಯದೊಳಗೆ ಆಗುತ್ತಿರುವ ಸಮಸ್ಯೆಗಳನ್ನು ಕಂಡು ಹಿಡಿಯಲು ಡ್ರೋನ್ ಕ್ಯಾಮರಾ ಅವಶ್ಯಕತೆ ಇರುವುದರಿಂದ ಅರಣ್ಯ ಇಲಾಖೆಗೆ 21 ಲಕ್ಷ ರೂ. ವೆಚ್ಚದ ಥರ್ಮಲ್ ಡ್ರೋಣ್ ಕ್ಯಾಮರಾ ನೀಡಿದ್ದೇನೆ ಎಂದರು.

ಮ್ಯಾಗ್ನಫ್ ಸಿಇಓ ಟೈಗರ್ ರಮೇಶ್ ಮಾತನಾಡಿ, ಕಾಡಂಚಿನ ಗ್ರಾಮಗಳಲ್ಲಿ ಪ್ರಾಣಿಗಳನ್ನು ಸೆರೆ ಹಿಡಿಯಲು ಅರಣ್ಯ ಇಲಾಖೆಗೆ ಕಷ್ಟವಾದ ಕಾರಣ ಈ ಡ್ರೋಣ್‌ನಿಂದಾಗಿ ಅರಣ್ಯ ಇಲಾಖೆಯವರಿಗೆ ಪ್ರಾಣಿಗಳನ್ನು ಪತ್ತೆಹಚ್ಚಲು ಡ್ರೋಣ್ ಕ್ಯಾಮರಾ ಸಹಕಾರಿಯಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ರಂಗಸ್ವಾಮಿ, ವಲಯ ಅರಣ್ಯಾಧಿಕಾರಿಗಳಾದ ಸಿದ್ದರಾಜು, ಮಧು ಮಂಜುನಾಥ್ ಆರಾಧ್ಯ, ಕುಮಾರ್ ಇದ್ದರು.

ಪುರಸಭಾಧ್ಯಕ್ಷ ಸ್ಥಾನ ಹೆಳವ ಸಮುದಾಯಕ್ಕೆ ನೀಡಲು ಒತ್ತಾಯ



ತಿ.ನರಸೀಪುರ, ಡಿ.20– ಪಟ್ಟಣದ ಪುರಸಭಾಧ್ಯಕ್ಷ ಸ್ಥಾನವನ್ನು ಹಿಂದುಳಿದ ವರ್ಗದ ಅಲ್ಪಸಂಖ್ಯಾತ 'ಹೆಳವ' ಸಮುದಾಯಕ್ಕೆ ನೀಡುವಂತೆ ಹೆಳವ ಸಮುದಾಯದ ತಾಲೂಕು ಒಕ್ಕೂಟದ ಸದಸ್ಯರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹೆಳವ ಸಮುದಾಯದ ಮುಖ್ಯಸ್ಥ ಮಹೇಶ್, ಈ ಬಾರಿ ತಿ.ನರಸೀಪುರ ಪುರಸಭೆ ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದು, ಮೊದಲ ಅವಧಿಯಲ್ಲಿ ಕುರುಬ ಜನಾಂಗದ ಹೆಳವರಹುಂಡಿ ಸೋಮು ಮತ್ತು ಎರಡನೇ ಅವಧಿಯಲ್ಲಿ ನಾಯಕ ಜನಾಂಗದ ಮದನ್‌ರಾಜ್ ಅವರಿಗೆ ನೀಡಲಾಗಿತ್ತು. ಹಾಗಾಗಿ ಸಾಮಾಜಿಕ ನ್ಯಾಯದ ಹರಿಕಾರ ಮಾಜಿ ಸಿಎಂ ಸಿದ್ದರಾಮಯ್ಯನವರು ಈ ಬಾರಿ ಹಿಂದುಳಿದ ವರ್ಗ 'ಹೆಳವ' ಸಮುದಾಯದ ಪುರಸಭೆ 9ನೇ ವಾರ್ಡ್ ಸದಸ್ಯ ಆರ್.ನಾಗರಾಜು ಅವರಿಗೆ ಪುರಸಭೆ ಅಧ್ಯಕ್ಷಸ್ಥಾನ ನೀಡಬೇಕು ಎಂದು ಆಗ್ರಹಿಸಿದರು.

ಮುಖಂಡ ಜಗದೀಶ್ ಮಾತನಾಡಿ, ಸಿದ್ದರಾಮಯ್ಯನವರು ಸಾಮಾಜಿಕ ನ್ಯಾಯದಡಿ ಸಮಾಜದ ಎಲ್ಲಾ ವರ್ಗದವರಿಗೂ ಅಧಿಕಾರ ನೀಡಿದ್ದಾರೆ. ಹಾಗಾಗಿ ಸಣ್ಣ ಸಮುದಾಯವಾದ ಹೆಳವ ಜನಾಂಗಕ್ಕೆ ಪ್ರಾತಿನಿಧ್ಯ ನೀಡಬೇಕು. ಹೆಳವ ಸಮುದಾಯ ಮೊದಲಿನಿಂದಲೂ ಕಾಂಗ್ರೆಸ್ ಬೆಂಬಲಿಸುತ್ತಾ ಬಂದಿದೆ. ಎಂತಹ ಸಂದರ್ಭದಲ್ಲೂ ಪಕ್ಷ ಬದಲಾವಣೆ ಮಾಡಿಲ್ಲ. ಸಿದ್ದರಾಮಯ್ಯರ ಪರ ಚುನಾವಣೆಯಲ್ಲಿ ಕಾರ್ಯ ನಿರ್ವಹಿಸಿದೆ. ಹಾಗಾಗಿ ಸಿದ್ದರಾಮಯ್ಯನವರು ಈ ಬಾರಿ ನಮಗೆ ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಮುಖಂಡ ಪುಟ್ಟಬಸವಯ್ಯ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಮುತ್ತಯ್ಯ, ಗೋವಿಂದರಾಜು, ಮಲ್ಲರಾಜು, ಶ್ರೀಧರ್, ಸಿದ್ದರಾಜು, ಮಹದೇವ, ರವಿ, ಸಂತೋಷ್, ವಿಜಯ್, ಗ್ಯಾರೇಜ್ ರಾಜೇಶ್, ಶಿವು, ಹನುಮಂತು ಹಾಜರಿದ್ದರು.

ಕೆ.ಆರ್.ನಗರದಲ್ಲಿ ಕನ್ನಡ ಜ್ಯೋತಿಗೆ ಅದ್ದೂರಿ ಸ್ವಾಗತ

ಕೆ.ಆರ್.ನಗರ, ಡಿ.20– ಪ್ರತಿಯೊಬ್ಬರೂ ನೆಲ, ಜಲ, ಭಾಷೆ ಮೇಲೆ ಅಭಿಮಾನ ಹೊಂದುವ ಮೂಲಕ ಕನ್ನಡ ನಾಡನ್ನು ರಕ್ಷಿಸಬೇಕು. ಆಗ ಮಾತ್ರ ಕನ್ನಡ ನೆಲದಲ್ಲಿ ಜನ್ಮ ತಾಳಿದಕ್ಕೂ ಸಾರ್ಥಕವಾಗುತ್ತದೆ ಎಂದು ತಹಸೀಲ್ದಾರ್ ಎಸ್.ಸಂತೋಷ್ ತಿಳಿಸಿದರು.



ಪಟ್ಟಣಕ್ಕೆ ಆಗಮಿಸಿದ ಕನ್ನಡ ಜ್ಯೋತಿ ರಥಕ್ಕೆ ಅದ್ದೂರಿ ಸ್ವಾಗತ ಕೋರಿ ಮಾತ ನಾಡಿದ ಅವರು, ರಾಜ್ಯ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಡಾ.ಮಹೇಶ್ ಜೋಷಿಯವರ ನೇತೃತ್ವದಲ್ಲಿ ಜ.6,7,8 ರಂದು ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನದ ಯಶಸ್ವಿಗಾಗಿ ಕನ್ನಡ ಜ್ಯೋತಿ ರಥ ರಾಜ್ಯಾದ್ಯಂತ ಸಂಚರಿಸಿ ಕನ್ನಡಿ ಗರಲ್ಲಿ ಸ್ಫೂರ್ತಿ ತುಂಬುತ್ತಿದೆ ಎಂದರು.

ರಾಜ್ಯದಲ್ಲಿ 1 ರಿಂದ 10ನೇ ತರಗತಿವರೆಗೆ ಕನ್ನಡ ಮಾಧ್ಯಮ ಕಡ್ಡಾಯವಾಗಬೇಕು. ಆಡಳಿತ ಭಾಷೆಯಾಗಿ ಕನ್ನಡವನ್ನು ನೂರಕ್ಕೆ ನೂರರಷ್ಟು ಜಾರಿಗೆ ತರಬೇಕು. ಸರ್ಕಾರಿ ಉದ್ಯೋಗ ಹಾಗೂ ಉದ್ಯಮ ದಲ್ಲಿ ಕನ್ನಡಿಗರಿಗೆ ಮೀಸಲಾತಿ ತರಬೇಕು. ಸರೋಜಿನಿ ಮಹಿಷಿ ವರದಿ ಸಂಪೂರ್ಣ ಜಾರಿಗೆ ತರಬೇಕು ಎಂಬ ನಮ್ಮ ರಾಜ್ಯಾಧ್ಯಕ್ಷರ ಕ್ರಾಂತಿಕಾರಿ ನಿಲುವುಗಳು ಸರ್ಕಾರದ ಮುಂದಿದ್ದು ಕ್ರಮ ತೆಗೆದುಕೊಳ್ಳುವ ಭರವಸೆ ನೀಡಿದೆ. ಈ ಸಮ್ಮೇಳನಕ್ಕಾಗಿ 6 ಕೋಟಿ ಕನ್ನಡಿಗರು ಕಾತುರದಿಂದ ಕಾಯುತ್ತಿದ್ದೇವೆ ಎಂದರು.

ತಾಲೂಕು ಕಸಾಪ ಅಧ್ಯಕ್ಷ ಡಿಂಡಿಮ ಶಂಕರ್ ಮಾತನಾಡಿ, ಹಾವೇರಿಯಲ್ಲಿ ನಡೆಯುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮುಂದಿನ ಯುವ ಪೀಳಿಗೆಗೆ ಮಹತ್ವದ್ದಾಗಿದೆ. ಕನ್ನಡ ಸಾಹಿತ್ಯ ಪರಿಷತ್ ನಡಿಗೆ ಹಳ್ಳಿಗಳ ಕಡೆಗೆ ಎಂಬ ಘೋಷವಾಕ್ಯದೊಂದಿಗೆ ಕನ್ನಡದ ತೇರು ಇದೇ ಮೊದಲ ಬಾರಿಗೆ ರಾಜ್ಯಾದ್ಯಂತ ಸಂಚರಿಸುತ್ತಿದ್ದು, ಈ ಸಮ್ಮೇಳನಕ್ಕೆ ಕನ್ನಡ ಸಾಹಿತ್ಯಾಸಕ್ತರು ಹಾಗೂ ಕನ್ನಡಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಮ್ಮೇಳನದ ಯಶಸ್ಸಿಗೆ ಸಹಕರಿಸುವಂತೆ ಮನವಿ ಮಾಡಿದರು.

ಪುರಸಭಾ ಮುಖ್ಯಾಧಿಕಾರಿ ಡಾ.ಜಯಣ್ಣ, ರಾಜ್ಯ ಕಸಾಪ ಸಂಚಾಲಕ ನಬೀ ಸಾಬ್ ಕುಷ್ಗಿ ಮಾತನಾಡಿದರು. ಇದಕ್ಕೂ ಮೊದಲು ಮೈಸೂರಿನಿಂದ ಕೆಆರ್.ನಗರಕ್ಕೆ ಆಗಮಿಸಿದ ಕನ್ನಡ ಜ್ಯೋತಿ ರಥವನ್ನು ಶ್ರೀತೋಪಮ್ಮ ತಾಯಿ ದೇವಸ್ಥಾನದ ಬಳಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಪದಾಧಿಕಾರಿಗಳು, ಅಧಿಕಾರಿಗಳು, ವಿವಿಧ ಸಂಘ ಸಂಸ್ಥೆ ಸದಸ್ಯರು, ಮುಖಂಡರು ಮಂಗಳವಾದ್ಯ, ಡೊಳ್ಳುಕುಣಿತ, ವೀರಗಾಸೆ ಕಲಾತಂಡಗಳೊಂದಿಗೆ ಅದ್ದೂರಿ ಸ್ವಾಗತ ಕೋರಿ ಬರಮಾಡಿ ಕೊಂಡು ಪಟ್ಟಣದ ಗರುಡುಗಂಭ ವೃತ್ತ, ವಾಣಿ ವಿಲಾಸ ರಸ್ತೆ, ಡಾ.ಬಾಬು ಜಗಜೀವನರಾಂ ವೃತ್ತದ ಮೂಲಕ ಮೈಸೂರು–ಹಾಸನ ರಸ್ತೆಯಲ್ಲಿ ಸಂಚರಿಸಿ ತಾಲೂಕಿನ ಹಂಪಾಪುರ, ಹೊಸಅಗ್ರಹಾರ ಹಾಗೂ ಭೇರ್ಯವರೆಗೆ ಮೆರವಣಿಗೆ ಮೂಲಕ ಸಂಚರಿಸಿ ನಂತರ ಬೀಳ್ಕೊಡಲಾಯಿತು.

ಈ ವೇಳೆ ಪುರಸಭಾಧ್ಯಕ್ಷೆ ಸೌಮ್ಯ, ನವನಗರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಪುರಸಭಾ ಸದಸ್ಯ ಕೆ.ಪಿ.ಪ್ರಭುಶಂಕರ್, ತಾಪಂ ಇಓ ಹೆಚ್.ಕೆ.ಸತೀಶ್, ಟಿಎಸ್‌ಡಬ್ಲ್ಯೂ ಎಸ್.ಎಂ.ಅಶೋಕ್‌ಕುಮಾರ್, ಬಿಇಓ ಗಾಯತ್ರಿ, ಜೆಡಿಎಸ್ ವಕ್ತಾರ ಕೆಎಲ್.ರಮೇಶ್, ಜಿಲ್ಲಾ ಕಸಾಪ ಗೌರವಾಧ್ಯಕ್ಷ ಜಿ.ಪ್ರಕಾಶ್, ಕಾರ್ಯದರ್ಶಿ ಸಿ.ಆರ್.ಉದಯಕುಮಾರ್, ಕೋಶಾಧ್ಯಕ್ಷ ಕೆ.ಎಲ್.ಭಾಸ್ಕರ್, ಉಪಾಧ್ಯಕ್ಷ ರಾಮಕೃಷ್ಣ ನಗರ ಉಪಾಧ್ಯಕ್ಷ ಕೃಷ್ಣ ಮಹಿಳಾಧ್ಯಕ್ಷೆ ದಾಕ್ಷಾಯಿಣಿ, ಸದಸ್ಯರಾದ ಬೇಬಿ, ವಂದನಾ, ಮುದ್ದೇಗೌಡ, ಶಿವಾಜಿ ಗಣೇಶ್, ಸಾಹಿತಿಗಳಾದ ಪ್ರಭಾಕರ್, ರಾಮ ಕುಮಾರ್ ಸೇರಿದಂತೆ ಇನ್ನಿತರರಿದ್ದರು.

ಸಮ್ಮೇದ ಶಿಖರ್ಜಿ ಕ್ಷೇತ್ರ ಪ್ರವಾಸಿ ತಾಣವಾಗಿಸದಂತೆ ಪ್ರತಿಭಟನೆ



ಸಾಲಿಗ್ರಾಮ, ಡಿ.20– ಜೈನರ ಪುಣ್ಯಕ್ಷೇತ್ರ ಸಮ್ಮೇದ ಶಿಖರ್ಜಿಯನ್ನು ಪ್ರವಾಸಿ ತಾಣವಾಗಿ ಹೊರಡಿಸಿರುವ ಆದೇಶ ರದ್ದುಪಡಿಸುವಂತೆ ಆಗ್ರಹಿಸಿ ಪಟ್ಟಣದ ಜೈನ ಸಮುದಾಯದವರು ಪ್ರತಿಭಟನೆ ನಡೆಸಿದರು. ಜಾರ್ಖಂಡ್‌ನ ಗಿರಿಡಿ ಜಿಲ್ಲೆಯ ಜೈನರ 24 ತೀರ್ಥಂಕರರಲ್ಲಿ 20 ತೀರ್ಥಂಕರರು ಮೋಕ್ಷ ಪಡೆದ ಅತ್ಯಂತ ಪವಿತ್ರ ಸ್ಥಳ ಶ್ರೀಸಮ್ಮೇದ ಶಿಖರ್ಜಿ ಕ್ಷೇತ್ರವನ್ನು ಪ್ರವಾಸಿ ತಾಣವಾಗಿಸದಂತೆ ಆಗ್ರಹಿಸಿ ದಿಗಂಬರ ಜೈನ ಸಮಾಜದ ಸದಸ್ಯರು ಪ್ರತಿಭಟನಾ ಮೆರವಣಿಗೆ ನಡೆಸಿದರು.

ಪಟ್ಟಣದ ಗಾಂಧಿ ವೃತ್ತದಲ್ಲಿರುವ ಶ್ರೀನೇಮಿನಾಥ ತೀರ್ಥಂಕರರ ಚೈತ್ಯಾಲಯದಲ್ಲಿ 108 ಆರ್ಯಿಕಾ ಸಮ್ಯಕ್ ಶ್ರೀಮಾತಾಜಿಯವರ ಆಶೀರ್ವಚನ ಪಡೆದು ಪೂಜಾ ದೀದಿಯವರೊಂದಿಗೆ ಮೆರವಣಿಗೆಗೆ ಚಾಲನೆ ಪಡೆದರು. ಮಹಾವೀರ ರಸ್ತೆ ಮೂಲಕ ನೂರಾರು ಜೈನ ಶ್ರಾವಕ ಶ್ರಾವಕಿಯರು ಮೆರವಣಿಗೆ ಮೂಲಕ ತಾಲೂಕು ಕಚೇರಿವರೆಗೆ ಸಾಗಿ ತಹಸೀಲ್ದಾರ್ ಮೋಹನ್ ಅವರಿಗೆ ಮನವಿ ಸಲ್ಲಿಸಿದರು. ಜಾರ್ಖಂಡ್ ಸರ್ಕಾರವು ಶಿಖರ್ಜಿ ಕ್ಷೇತ್ರವನ್ನು ಪ್ರವಾಸಿ ತಾಣವೆಂದು ಹೊರಡಿಸಿರುವ ಆದೇಶ ಹಿಂಪಡೆದು ಜೈನರ ಪುಣ್ಯಕ್ಷೇತ್ರ ಉಳಿಸಿಕೊಡುವಂತೆ ಮನವಿ ಪತ್ರ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಜೈನ ಸಮಾಜದ ಮುಖಂಡರಾದ ರಾಜೇಂದ್ರ ಪ್ರಸಾದ್, ಸುನೀಲ್ ಕುಮಾರ್, ಹೇಮಂತ್ ಕುಮಾರ್, ಗುಣಪಾಲ್ ಜೈನ್, ರಜತ್ ಜೈನ್, ನೇಮಿಚಂದ್ರ, ಸುರೇಶ್ ಕುಮಾರ್, ಸುಜಾತ, ನೀರಜಾ, ಶ್ರೀಕೃಪ, ಪ್ರತಿಮ, ಜ್ಯೋತಿ ಜಯಸೇನ, ಸುಪ್ರಿಯ, ಗೀತಾ, ರಾಜಕುಮಾರಿ, ರಜನಿ ಇದ್ದರು.

ನಂ.ಗೂಡಲ್ಲಿ ಅಯ್ಯಪ್ಪಸ್ವಾಮಿ ಉತ್ಸವಮೂರ್ತಿ ಮೆರವಣಿಗೆ



ನಂಜನಗೂಡು, ಡಿ.20– ಕಪಿಲಾ ನದಿ ತೀರದಲ್ಲಿರುವ ಶ್ರೀಅಯ್ಯಪ್ಪಸ್ವಾಮಿ ದೇವಾಲಯದಲ್ಲಿ 25ನೇ ವರ್ಷದ ಬ್ರಹ್ಮೋತ್ಸವ ಅಂಗವಾಗಿ ನಗರದ ಪ್ರಮುಖ ಬೀದಿಗಳಲ್ಲಿ ಮಂಗಳವಾರ ಉತ್ಸವ ಮೂರ್ತಿ ಮೆರವಣಿಗೆ ಮಾಡಲಾಯಿತು.

ಪುಷ್ಪಲಂಕೃತ ಸಾರೋಟ್‌ನಲ್ಲಿ ಅಯ್ಯಪ್ಪ ಸ್ವಾಮಿ ಉತ್ಸವಮೂರ್ತಿ ಪ್ರತಿಷ್ಠಾಪಿಸಿ ಮೆರವಣಿಗೆಗೆ ಚಾಲನೆ ನೀಡಲಾಯಿತು. ದೇವಾಲಯದಿಂದ ಹೊರಟ ಮೆರವಣಿಗೆ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ ಮೂಲಕ ರಾಕ್ಷಸ ಮಂಟಪ, ರಾಷ್ಟ್ರಪತಿ ರಸ್ತೆ ಬ್ರಾಡ್‌ವೇ ರಸ್ತೆ, ಬಜಾರ್ ರಸ್ತೆ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಸ್ವಸ್ಥಾನಕ್ಕೆ ಮರಳಿತು.

ವೀರಗಾಸೆ, ಕಂಸಾಳೆ, ಪೂಜಾ ಕುಣಿತ, ಚಂಡೆ ವಾದನ, ತಮಟೆ ವಾದ್ಯಮೇಳ ಮತ್ತು ಮಂಗಳವಾದ್ಯ ಗೋಷ್ಠಿ ಸೇರಿದಂತೆ ವಿವಿಧ ಜನಪದ ಕಲಾತಂಡಗಳ ಪ್ರದರ್ಶನ ಮೆರವಣಿಗೆಗೆ ಮೆರುಗು ನೀಡಿತು. ಅಯ್ಯಪ್ಪಸ್ವಾಮಿ ಮಾಲಧಾರಿಗಳು ಹಾಗೂ ಭಕ್ತರು ಭಕ್ತಿಗೀತೆ ಪಠಿಸುತ್ತಾ ಸಾಗಿದರು. ರಸ್ತೆಯುದ್ದಕ್ಕೂ ಜನರು ತಳಿರು ತೋರಣಗಳನ್ನು ಕಟ್ಟಿ ಬಣ್ಣಬಣ್ಣದ ರಂಗೋಲಿ ಹಾಕುವ ಮೂಲಕ ಭಕ್ತಿ ಪ್ರದರ್ಶಿಸಿದರು.

ಇದಕ್ಕೂ ಮುನ್ನಾ ಮಲ್ಲನಮೂಲೆ ಮಠಾಧ್ಯಕ್ಷ ಚನ್ನಬಸವ ಸ್ವಾಮೀಜಿ ಪೂಜೆ ಸಲ್ಲಿಸುವ ಮೂಲಕ ಪ್ರಸಾದ ವಿನಿಯೋಗಕ್ಕೆ ಚಾಲನೆ ನೀಡಿದರು. ಸಾವಿರಾರು ಭಕ್ತರಿಗೆ ಅನ್ನ ಸಂತರ್ಪಣೆ ಮಾಡಲಾಯಿತು.

ನಂತರ ಮಾತನಾಡಿದ ಸ್ವಾಮೀಜಿ, ಅಯ್ಯಪ್ಪಸ್ವಾಮಿ ದೇವಾಲಯದಲ್ಲಿ 25ನೇ ಬ್ರಹ್ಮೋತ್ಸವದ ಅಂಗವಾಗಿ ಧಾರ್ಮಿಕ ಪೂಜಾ ಕಾರ್ಯಗಳೊಂದಿಗೆ ಪ್ರತಿನಿತ್ಯ ಸಾಂಸ್ಕೃತಿಕ ಚಟುವಟಿಕೆಗಳು ಹಾಗೂ ಜಾನಪದ ಕಲೆಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದರು.

ದೇವಾಲಯದ ಗುರುಸ್ವಾಮಿ ಪಿ.ದೇವ ರಾಜು ಸ್ವಾಮಿ ಮಾತನಾಡಿ, ಬ್ರಹ್ಮೋತ್ಸವ ಅಂಗವಾಗಿ ಪ್ರತಿ ವರ್ಷದಂತೆ ಈ ಬಾರಿಯೂ ಅಯ್ಯಪ್ಪ ಮಾಲಧಾರಿಗಳಿಂದ ಡಿ.25ರಂದು ಮೈಸೂರಿನಿಂದ ನಂಜನಗೂಡಿಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಆಸಕ್ತರು ಹಿಂದಿನ ದಿನವೇ ನೋಂದಣಿ ಮಾಡಿಸಿಕೊಳ್ಳುವಂತೆ ತಿಳಿಸಿದರು. ಈ ವೇಳೆ ದೇಗುಲದ ಆಡಳಿತ ಮಂಡಳಿ ಸದಸ್ಯರಾದ ನಾರಾಯಣ, ಎನ್.ಎಂ.ಮಂಜುನಾಥ್, ಕೆ.ಎನ್.ವೆಂಕಟೇಶ್, ಭಕ್ತವತ್ಸಲ ಸೇರಿದಂತೆ ಹಲವರಿದ್ದರು.

ತಾಯಿಯ ಅಕ್ರಮ ಸಂಬಂಧಕ್ಕೆ ಮಗ ಬಲಿ

ನಂಜನಗೂಡು, ಡಿ.20– ತಾಯಿ ಅಕ್ರಮ ಸಂಬಂಧ ಹೊಂದಿದ್ದ ಹಿನ್ನೆಲೆಯಲ್ಲಿ ಮಗ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಹುಣಸನಾಳು ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ಮಹದೇವಶೆಟ್ಟಿ ಅವರ ಪುತ್ರ ಮಹೇಂದ್ರ(20) ಆತ್ಮಹತ್ಯೆ ಮಾಡಿಕೊಂಡವರು.

ವಿವರ: ಮಹೇಂದ್ರ ಅವರ ತಾಯಿ ಲಕ್ಷ್ಮಮ್ಮ ಗ್ರಾಮದ ರಾಜು(50) ಎಂಬಾತನೊಂದಿಗೆ ಅಕ್ರಮ ಸಂಬಂಧ ಹೊಂದಿದ್ದಳು ಎನ್ನಲಾಗಿದೆ. ಈ ಸಂಬಂಧ ಡಿ.18 ರಂದು ರಾಜು, ಮಹೇಂದ್ರ ಮತ್ತು ಆತನ ತಂದೆ ಮಹದೇವಶೆಟ್ಟಿಯೊಂದಿಗೆ ಜಗಳವಾಡಿ ಕೊಲೆ ಬೆದರಿಕೆ ಹಾಕಿದ್ದ. ಇದರಿಂದ ನನ್ನ ಮಗ ಹೆದರಿ ಸೋಮವಾರ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ನನ್ನ ಮಗನ ಸಾವಿಗೆ ನನ್ನ ಪತ್ನಿ ಲಕ್ಷ್ಮಮ್ಮ, ಆತನ ಪ್ರಿಯಕರ ರಾಜು ಅವರೇ ಕಾರಣ ಎಂದು ಮೃತನ ತಂದೆ ಮಹದೇವಶೆಟ್ಟಿ ದೂರು ನೀಡಿದ್ದಾರೆ ಎಂದು ನಂಜನಗೂಡು ಗ್ರಾಮಾಂತರ ಪೊಲೀಸ್ ಎಸ್‌ಐ ಶಿವನಂಜಶೆಟ್ಟಿ ತಿಳಿಸಿದ್ದಾರೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ ತನಿಖೆ ಕೈಗೊಂಡಿದ್ದಾರೆ.

ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಸಾಧನೆಗೆ ಮುಂದಾಗಿ: ಎಸ್ಪಿ

ಮೂಗೂರು, ಡಿ.20– ಭವಿಷ್ಯದ ಜವಾಬ್ದಾರಿ ಅರಿತು ಉತ್ತಮ ನಾಗರಿಕರಾಗಿ ರೂಪುಗೊಳ್ಳುವ ಮೂಲಕ ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಸಾಧನೆಗೆ ಮುಂದಾಗಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್ ತಿಳಿಸಿದರು.



ಕೆಪಿಎಸ್ ಶಾಲಾವರಣದಲ್ಲಿ ಪೊಲೀಸ್ ಇಲಾಖೆಯಿಂದ ಆಯೋಜಿಸಿದ್ದ ಸ್ಟೂಡೆಂಟ್ ಪೊಲೀಸ್ ಕೆಡೆಟ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದೈಹಿಕ, ಮಾನಸಿಕ, ಸಾಮಾಜಿಕ ಕೌಶಲ್ಯಗಳು ಚುರುಕುಗೊಳ್ಳಲು ಕೆಡೆಟ್ ತರಬೇತಿ ಸಹಕಾರಿ. ಸಮಾಜದ ವಿವಿಧ ಸ್ತರಗಳಲ್ಲಿ ವಿದ್ಯಾರ್ಥಿಗಳು ತಮ್ಮ ಭವಿಷ್ಯಕ್ಕಾಗಿ ಹಾಗೂ ಸಮಾಜದ ದಿಕ್ಕನ್ನು ನಿರ್ಧರಿಸಲು ಸಶಕ್ತ ವಾತಾವರಣ ಒದಗಿಸುವ ಮೂಲಕ ಒಳಾಂಗಣ ಹಾಗೂ ಹೊರಾಂಗಣ ಚಟುವಟಿಕೆಗಳಿಂದ ಸತ್ಪ್ರಜೆಯಾಗಿ ರೂಪುಗೊಳ್ಳಬೇಕು. ಸಮಾಜಕ್ಕೆ ಒಳ್ಳೆಯ ಪ್ರಜೆ ತಯಾರು ಮಾಡುವುದು ನಮ್ಮೆಲ್ಲರ ಜವಾಬ್ದಾರಿ. ಭವ್ಯ ಭಾರತದ ನಿರ್ಮಾಣಕ್ಕೆ ಯುವಕರು ಭದ್ರ ಬುನಾದಿ ಹಾಕಬೇಕು ಎಂದು ಹೇಳಿ ಗಾಳಿಪಟ ದೃಷ್ಟಾಂತದ ಕಥೆ ಮೂಲಕ ಮಕ್ಕಳಿಗೆ ಸ್ಫೂರ್ತಿ ತುಂಬಿದರು. ನಂತರ ಕಾನೂನು, ಅಪರಾಧ ಸಂವಾದದಲ್ಲಿ ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸಿದರು.

ಈ ವೇಳೆ ಡಿವೈಎಸ್ಪಿ ಆರ್.ಗೋವಿಂದ ರಾಜು, ಸುಮಿತ್, ಎಸ್‌ಐ ತಿರುಮಲ್ಲೇಶ್, ಆನಂದ್, ತಾಪಂ ಮಾಜಿ ಸದಸ್ಯ ಎಂ.ಚಂದ್ರಶೇಖರ್, ಕೆಪಿಎಸ್ ಶಾಲೆ ಉಪಾಧ್ಯಕ್ಷ ಎಂ.ಕೆ.ಸಿದ್ದರಾಜು, ಮಹದೇವಸ್ವಾಮಿ, ಶಿವಶಂಕರ್, ರಾಜಶ್ರೀ, ಹನುಮಂತ ತಳವಾರ್, ಕೇಶವ್, ಮಹದೇವ್, ಕಾವೇರಿ, ಶಿಕ್ಷಕರು ಹಾಗೂ ಪೊಲೀಸ್ ಸಿಬ್ಬಂದಿ ವರ್ಗ, ಶಾಲಾ ಮಕ್ಕಳು ಉಪಸ್ಥಿತರಿದ್ದರು.

ಮಹಿಳೆಯರು ಸರ್ಕಾರದ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಿ

ತಾಪಂ ಇಓ ಸಿ.ಕೃಷ್ಣಕುಮಾರ್ ಕರೆ

ತಿ.ನರಸೀಪುರ, ಡಿ.20– ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಹಿಳಾ ಸಬಲೀಕರಣಕ್ಕಾಗಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆ ಸೇರಿದಂತೆ ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದು, ಮಹಿಳೆಯರು ಇವುಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಾಪಂ ಕಾರ್ಯ ನಿರ್ವಹಣಾಧಿಕಾರಿ ಸಿ.ಕೃಷ್ಣಕುಮಾರ್ ಕರೆ ನೀಡಿದರು.



ತಾಲೂಕಿನ ಕೇತಹಳ್ಳಿ ಗ್ರಾಮದ ಸರ್ಕಾರಿ ಶಾಲಾವರಣದಲ್ಲಿ ಕರೋಹಟ್ಟಿ ಸಂಜೀವಿನಿ ಗ್ರಾಪಂ ಮಟ್ಟದ ಒಕ್ಕೂಟದ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಲಿಂಗತ್ವ ದೌರ್ಜನ್ಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಹಿಳೆಯರು ಸಬಲರಾಗಬೇಕೆಂಬ ಉದ್ದೇಶದೊಂದಿಗೆ ಸರ್ಕಾರಗಳು ಹಲವು ಉಪಯುಕ್ತ ಯೋಜನೆಗಳನ್ನು ಜಾರಿಗೊಳಿಸಿ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿವೆ. ಅದರಲ್ಲಿ ಪ್ರಮುಖವಾಗಿ ಸಂಜೀವಿನಿ ಯೋಜನೆ ಜಾರಿಯಾಗಿದ್ದು, ಈ ಯೋಜನೆ ಮೂಲಕ ಗ್ರಾಮೀಣ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳು ಸ್ವ ಸಹಾಯ ಸಂಘಗಳ ಸದಸ್ಯತ್ವ ಪಡೆದು ತಮ್ಮ ಜೀವನಮಟ್ಟ ಹಾಗೂ ಕೃಷಿ ಉತ್ಪನ್ನಮಾಡಿಕೊಂಡು ಆರ್ಥಿಕವಾಗಿ ಸುಧಾರಣೆ ಹೊಂದಬಹುದು ಎಂದರು.

2013 ರಲ್ಲಿ ಜಾರಿಯಾದ ಈ ಯೋಜನೆ ಯಶಸ್ವಿಯಾಗಿದ್ದು, ತಾಲೂಕಿನ 36 ಗ್ರಾಪಂಗಳಲ್ಲಿಯೂ ಒಕ್ಕೂಟ ರಚನೆಯಾಗಿ ಸಾವಿರಾರು ಸದಸ್ಯರು ಸದಸ್ಯತ್ವ ಪಡೆದು ಯೋಜನೆ ಉಪಯೋಗ ಪಡೆಯುತ್ತಿದ್ದಾರೆ ಎಂದರು.

ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಹಾಗೂ ಅವಕಾಶಗಳಿಂದ ವಂಚಿತರಾಗುತ್ತಿರುವುದನ್ನು ಗಮನಿಸಿ ಸಂವಿಧಾನದ ಮುಖೇನ ಪುರುಷರಷ್ಟೇ ಮಹಿಳೆಯರಿಗೂ ಅವಕಾಶ ಕಲ್ಪಿಸಿಕೊಡಲಾಗುತ್ತಿದೆ. ಸಮಾಜ ಮಹಿಳೆಯರನ್ನು ಕೀಳಾಗಿ ನೋಡುವ ಪ್ರವೃತ್ತಿ ಬದಲಾಗಬೇಕಿದೆ. ಅಂತೆಯೇ ಹೆಣ್ಣು ಮಕ್ಕಳು ದೌರ್ಜನ್ಯ ಪ್ರಶ್ನಿಸುವ ಧೈರ್ಯ ಮಾಡಬೇಕು. ಪ್ರಕರಣ ಹೆಚ್ಚಾದಲ್ಲಿ ಸಹಾಯವಾಣಿಗೆ ದೂರು ನೀಡಬೇಕು ಎಂದರು.

ಸೇವಾಶ್ರಯ ಫೌಂಡೇಶನ್ ಅಧ್ಯಕ್ಷ ಮಣಿಕಂಠರಾಜು ಮಾತನಾಡಿದರು. ಸಂಜೀವಿನಿ ಸಂಸ್ಥೆ ಮೇಲ್ವಿಚಾರಕರಾದ ಸ್ವಾಮಿ, ಸುರೇಶ್, ಗ್ರಾಪಂ ಉಪಾಧ್ಯಕ್ಷ ಜಗದೀಶ್, ಸದಸ್ಯರಾದ ಸವಿತಾ, ದಿವ್ಯ, ಮಂಜುಳಾ, ಅಭಿವೃದ್ಧಿ ಅಧಿಕಾರಿ ಲಿಂಗರಾಜು, ಕರೋಹಟ್ಟಿ ಪಂಚಾಯಿತಿ ಎಂಬಿಕೆ ಕೋಮಲಾ ನಾಗರಾಜ್, ತುಂಬಲಾ ಎಂಬಿಕೆ ರೋಜಾ, ಸೋಸಲೆ ನಾಗಮಣಿ, ಮಹಿಳಾ ಒಕ್ಕೂಟದ ಅಧ್ಯಕ್ಷೆ ಕೋಮಲ, ಕಾರ್ಯದರ್ಶಿ ಪವಿತ್ರ ಹಾಗೂ ಸ್ವಸಹಾಯ ಸಂಘದ ಸದಸ್ಯರು ಹಾಜರಿದ್ದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ತ್ರಿಬಲ್ ರೈಡಿಂಗ್ (ಕ): ಬೆ.10.30ಕ್ಕೆ, ಸಲಾಂ ವೆಂಕಿ (ಹಿಂ): ಮ.1.30ಕ್ಕೆ, ರಾ.7.10ಕ್ಕೆ, ರಾ.9.55ಕ್ಕೆ, ಬಾಂಡ್ ರವಿ (ಕ): ಸಂ.4.10ಕ್ಕೆ.
ಸ್ಕ್ರೀನ್ 2	ಮೈಸೂರು ಡೈರೀಸ್ (ಕ): ಬೆ.11ಕ್ಕೆ, ರಾ.7.15ಕ್ಕೆ, ವರಲಾರು ಮುಕ್ಕಿಯಂ (ತ): ಮ.1.20ಕ್ಕೆ, ನೈ ಸೇಕರ್ ರಿಟರ್ನ್ಸ್ (ತ): ಸಂ.4.15ಕ್ಕೆ, ಗುರುತುಂದ ಸೀತಾಕಾಲಂ (ತೆ): ರಾ.9.50ಕ್ಕೆ.
ಸ್ಕ್ರೀನ್ 3	ವಿಜಯಾನಂದ (ಕ): ಬೆ.10.35ಕ್ಕೆ, ಸಂ.4ಕ್ಕೆ, ರಾ. 7ಕ್ಕೆ, ರಾ.10.10ಕ್ಕೆ, ಡಾ.56 (ಕ): ಮ.1.45ಕ್ಕೆ.
ಸ್ಕ್ರೀನ್ 4	ಗಂಧದ ಗುಡಿ (ಕ): ಬೆ.10.50ಕ್ಕೆ, ತ್ರಿಬಲ್ ರೈಡಿಂಗ್ (ಕ): ಮ.1ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.4ಕ್ಕೆ, ಕಾಂತಾರ (ಕ): ರಾ.7.05ಕ್ಕೆ, ಸೌದಿವೆಲ್ಲಕ್ಕ (ಮ): ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಹಿಟ್: ದಿ ಸೆಕೆಂಡ್ ಕೇಸ್ (ತೆ): ಬೆ.11.10ಕ್ಕೆ, ಸಂ.4.50ಕ್ಕೆ, ಬಾಂಡ್ ರವಿ (ಕ): ಮ.1.45ಕ್ಕೆ, ಕಾಂತಾರ (ಕ): ರಾ.7.25ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ವಿಜಯಾನಂದ (ಕ): ಬೆ.10.15ಕ್ಕೆ, ಮ.1.20ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಂಧದ ಗುಡಿ (ಕ): ಸಂ.4.35ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.11.10ಕ್ಕೆ, ಡಾ.56 (ಕ): ಮ.2.05ಕ್ಕೆ, ವಿಜಯಾನಂದ (ಕ): ಸಂ.4.25ಕ್ಕೆ, ಮೈಸೂರು ಡೈರೀಸ್ (ಕ): ರಾ.7.40ಕ್ಕೆ, ಪಂಚತಾರಂ (ತೆ): ರಾ.10.10ಕ್ಕೆ.
ಸ್ಕ್ರೀನ್ 4	ಗುರುತುಂದ ಸೀತಾಕಾಲಂ (ತೆ): ಬೆ.10.25ಕ್ಕೆ, ರಾ.7.20ಕ್ಕೆ, ನೈ ಸೇಕರ್ ರಿಟರ್ನ್ಸ್ (ತ): ಮ.1.15ಕ್ಕೆ, ಕಾಂತಾರ (ಕ): ಸಂ.4.15ಕ್ಕೆ, ವರಲಾಕು ಮುಕ್ಕಿಯಂ (ತ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ರೆಬೆಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಆಕ್ಷನ್ ಹೀರೋ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರಾಕ್ಷಸರು (ಕ)	4 ಪ್ರದರ್ಶನಗಳು
ಗಾಯಿತ್ರಿ	
ಟೆಂಪರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಅವತಾರ್–2 (ಇ)	4 ಪ್ರದರ್ಶನಗಳು
ಸಂಗಂ	
ಅವತಾರ್–2 (ಇ)	4 ಪ್ರದರ್ಶನಗಳು
ಲಿಡೋ	
ರಾಕ್ಷಸರು (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕಾಂತಾರ (ಕ)	4 ಪ್ರದರ್ಶನಗಳು
ಪ್ರಭಾ	
ಶಂಭು ಶಿವಶಂಕರ (ಕ)	4 ಪ್ರದರ್ಶನಗಳು

ಮೈಸೂರು ಚಳಿಗಾಲದ ರೇಸುಗಳು

6ನೇ ದಿನ, ಬುಧವಾರ 21–12–2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ತಾಜ್ ಮಹಲ್ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ನಾಟ್ ಸೋ ನಾಟಿ 2. ಹಿಯರ್ ಐ ಕಮ್ 3. ಬಚ್ಚೂಸ್

II. ಕ್ರಿಸ್‌ಮಸ್ ಪ್ಲೇಟ್–1800 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1. ಒಕನ್ನಯ್ಯ 2. ಕುಶಾಕ್ 3. ಕೊಯೆಟ್ ಗರ್ಲ್

III. ರಾಜೇಂದ್ರ ವಿಲಾಸ್ ಪ್ಲೇಟ್– 1400 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಚಿಲ್ಲಿ ಬ್ರೀಜ್ 2. ವಂದನ್ 3. ಸ್ವಿಸ್ ಟೈಗರ್ಸ್

IV. Dr. M.N. ದೊರೆಸ್ವಾಮಿ ಮೆಮೋರಿಯಲ್ ಟ್ರೋಫಿ– 1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಮ.3.30ಕ್ಕೆ
1. ಒ ಆ್ಯನ್ ಸಿನಿ 2. ಕೋಸ್ಟಲ್ ಕ್ರೂಜ್ 3. ಸ್ಮಾರ್ಟ್ ಕ್ಯಾಡಿಲಾಕ್

V. ಚಾಮುಂಡಿ ಮಿಲಿಯನ್ 2022 –2000 ಮೀ. 4 ವರ್ಷದ (ಟರ್ಮ್ಸ್). ಸಂ.4.00ಕ್ಕೆ
1. ಸ್ಪೀಡಿಸ್ಟರ್ 2. ಮೈ ಒಪೀನಿಯನ್

VI. ಮಂಗಳಗೌರಿ ಗಂಗೋತ್ರಿ ಪ್ಲೇಟ್– 1200 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1. ಕಂಟ್ರೀಸ್ ಡಿಲೈಟ್ 2. ಜಬ್ಬಾರ್ 3. ಲಾರ್ಡ್ ಕಮಾಂಡ್

VII. ಕಂದಾಲ ಪ್ಲೇಟ್– 1400 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ನಾಟಿ ವುಡ್ಸ್ 2. ಪಾರ್ಕರ್ 3. ಮಿಲೋಸ್

ದಿನದ ಅತ್ಯುತ್ತಮ.........	: ಸ್ಪೀಡಿಸ್ಟರ್
ಡಬ್ಬಲ್.........	: ಒ ಆ್ಯನ್‌ಸಿನಿ, ಕಂಟ್ರೀಸ್ ಡಿಲೈಟ್
ಜಾಕ್‌ಪಾಟ್.........	: 3, 4, 5, 6 ಮತ್ತು 7
I ಟ್ರಿಬಲ್.........	: 2, 3 ಮತ್ತು 4
II ಟ್ರಿಬಲ್.........	: 5, 6 ಮತ್ತು 7
ಎಕ್ಸ್‌ಆಕ್ಟ್.........	: 6 ಮತ್ತು 7

ಟಿಪ್‌ಸ್ಟರ್ ಪಿಜೆಸಿ



ಹುಣಸೂರು ತಾಲೂಕಿನ ಕಿರಂಗೂರು ಗ್ರಾಪಂ ಉಪಾಧ್ಯಕ್ಷೆಯಾಗಿ ನಂದಿನಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ವೇಳೆ ಹುಣಸೂರು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್ ಗೌಡರನ್ನು ಸನ್ಮಾನಿಸಲಾಯಿತು. ಚುನಾವಣಾಧಿಕಾರಿ ರೇಷ್ಮೆ ಇಲಾಖೆಯ ಮಹದೇವ, ರಮೇಶ್, ಗ್ರಾಪಂ ಅಧ್ಯಕ್ಷೆ ನೀರವೇಣಿ, ಸದಸ್ಯರಾದ ಮಧು, ಅಣ್ಣಯ್ಯ, ಹರೀಶ್, ನಾಗೇಶ್, ಮಂಜುನಾಥ್, ರವಿ, ಶೃತಿ, ಅನುಸೂಯ, ಗಿರೀಶ್, ಸುಭಾಷ್ ಹಾಗೂ ಗ್ರಾಮಸ್ಥರು ಹಾಜರಿದ್ದರು.

ಜನಗಣತಿ: ಎಸ್‌ಸಿ, ಎಸ್‌ಟಿ ಹೊರತು ಇನ್ನಾವುದೇ ಜಾತಿ ಎಣಿಸಿಲ್ಲ

ನವದೆಹಲಿ: ಭಾರತ ಸರ್ಕಾರವು ಸ್ವಾತಂತ್ರ್ಯದ ನಂತರ ನಡೆದ ಯಾವುದೇ ಜನಗಣತಿಯಲ್ಲಿ ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡ (ಎಸ್‌ಟಿ) ಹೊರತುಪಡಿಸಿ ಜಾತಿವಾರು ಜನಸಂಖ್ಯೆಯನ್ನು ಲೆಕ್ಕ ಹಾಕಿಲ್ಲ ಎಂದು ಗೃಹ ಸಚಿವಾಲಯ ಮಂಗಳವಾರ ಹೇಳಿದೆ.

ಪ್ರಸ್ತಾವಿತ 2021ರ ಜನಗಣತಿಯ ಪ್ರಸ್ತುತ ಸ್ಥಿತಿಯ ಕುರಿತು ಸಂಸತ್ ಸದಸ್ಯರು ಸದನದಲ್ಲಿ ಪ್ರಶ್ನೆ ಕೇಳಿದ್ದರು. ಪ್ರಸ್ತಾವಿತ ಜನಗಣತಿಯಲ್ಲಿ ಜಾತಿ ಮತ್ತು ಉಪ ಜಾತಿ ಸೇರಿದಂತೆ ಅವುಗಳ ಸಮಾನಾರ್ಥಕ ಜಾತಿಪದಗಳ ಜನಗಣತಿ ನಡೆಸಲು ಸರ್ಕಾರವು ಪರಿಗಣಿಸುತ್ತಿದೆಯೇ ಎಂದು ಕೇಳಲಾಗಿತ್ತು.

ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ, 2021ರ ಜನಗಣತಿ ನಡೆಸುವ ಸರ್ಕಾರದ ಉದ್ದೇಶವನ್ನು ಮಾರ್ಚ್ 28, 2019ರಂದು ಭಾರತದ ಗೆಜೆಟ್‌ನಲ್ಲಿ ತಿಳಿಸಲಾಗಿದೆ ಎಂದು ಹೇಳಿದರು.

ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ಜನಗಣತಿ 2021 ಮತ್ತು ಅದಕ್ಕೆ ಸಂಬಂಧಿತ ಚಟುವಟಿಕೆ ಗಳನ್ನು ಮುಂದಿನ ಆದೇಶದವರೆಗೆ ಮುಂದೂಡಲಾಗಿದೆ ಎಂದು ಹೇಳಿದರು.

ಸಂವಿಧಾನ (ಪರಿಶಿಷ್ಟ ಜಾತಿಗಳು) ಆದೇಶ 1950 ಮತ್ತು ಸಂವಿಧಾನ (ಪರಿಶಿಷ್ಟ ಪಂಗಡಗಳು) ಆದೇಶ 1950ರ ಪ್ರಕಾರ ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ ಪರಿಶಿಷ್ಟ ಜಾತಿಗಳು (ಎಸ್‌ಸಿಗಳು) ಮತ್ತು ಪರಿಶಿಷ್ಟ ಪಂಗಡಗಳು (ಎಸ್‌ಟಿಗಳು) ಎಂದು ನಿರ್ದಿಷ್ಟವಾಗಿ ಅಧಿಸೂಚಿಸಲಾದ ಜಾತಿಗಳು ಮತ್ತು ಬುಡಕಟ್ಟುಗಳನ್ನು ಜನಗಣತಿಯಲ್ಲಿ ಎಣಿಸಲಾಗಿದೆ. ಸ್ವಾತಂತ್ರ್ಯದ ನಂತರ ಭಾರತ ಸರ್ಕಾರವು ಜನಗಣತಿಯಲ್ಲಿ ಎಸ್‌ಸಿ ಮತ್ತು ಎಸ್‌ಟಿಗಳನ್ನು ಹೊರತುಪಡಿಸಿ ಜಾತಿವಾರು ಜನಸಂಖ್ಯೆ ಎಣಿಸಿಲ್ಲ ಎಂದು ಅವರು ಉತ್ತರಿಸಿದರು.

ಸಂಸತ್ ಮುಂಗಾರು ಅಧಿವೇಶನ: ವಾರ ಮುಂಚಿತವಾಗಿ ಮುಗಿಯುವ ಸಾಧ್ಯತೆ

ನವದೆಹಲಿ: ಈ ಬಾರಿಂನ ಸಂಸತ್ ಮುಂಗಾರು ಅಧಿವೇಶನ ಒಂದು ವಾರ ಮುಂಚಿತವಾಗಿ ಡಿಸೆಂಬರ್ 23ಕ್ಕೆ ಮುಕ್ತಾಯವಾಗುವ ಸಾಧ್ಯತೆಯಿದೆ ಎಂದು ಅಧಿಕೃತ ಮೂಲಗಳು ಮಂಗಳವಾರ ತಿಳಿಸಿವೆ.

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರ ಅಧ್ಯಕ್ಷತೆಯಲ್ಲಿ ನಡೆದ ಲೋಕಸಭಾ ಕಾರ್ಯ ಕಲಾಪ ಸಮಿತಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಡಿಸೆಂಬರ್ 7ರಿಂದ ಆರಂಭವಾಗಿರುವ ಸಂಸತ್ ಅಧಿವೇಶನ, ಡಿಸೆಂಬರ್ 29ರಂದು ಮುಗಿಯಬೇಕಿತ್ತು. ಆದರೆ, ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಆದಷ್ಟು ಬೇಗ ಸಂಸತ್ ಅಧಿವೇಶನ ಮುಗಿಸಬೇಕೆಂದು ಅನೇಕ ಪ್ರತಿಪಕ್ಷಗಳ ನಾಯಕರು ಸರ್ಕಾರ ಮತ್ತು ಸ್ಪೀಕರ್ ಅವರನ್ನು ಒತ್ತಾಯಿಸಿದ್ದರು. ಈ ಹಿನ್ನೆಲೆಯಲ್ಲಿ ಒಂದು ವಾರ ಮುಂಚಿತವಾಗಿ ಡಿ.23ರಂದು ಸಂಸತ್ ಮುಂಗಾರು ಅಧಿವೇಶನ ಕೊನೆಯಾಗಲಿದೆ ಎಂದು ಮೂಲಗಳು ತಿಳಿಸಿವೆ.

ಸುಷ್ಮಾಗೆ ಪಿಹೆಚ್.ಡಿ

ಮೈಸೂರು,ಡಿ.20–ಡಾ.ಬಿ.ಶಾರದಾ ಅವರ ಮಾರ್ಗದರ್ಶನದಲ್ಲಿ ಎಸ್.ಎನ್. ಸುಷ್ಮಾ ಅವರು ಗಣಕ ವಿಜ್ಞಾನ ವಿಷಯ ದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಗೌರವಾನ್ವಿತ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ನಂಜನಗೂಡು.

ಅಸಲು ದಾವೆ ಸಂಖ್ಯೆ : 587/2022

ವಾದಿ: ಮಂಜುನಾಥ ಬಿನ್ ಲೇಟ್ ಬಸಪ್ಪ, ವಯಸ್ಸು ಸುಮಾರು 38 ವರ್ಷ, ವಾಸ: ಕಾರೇಪುರ ಗ್ರಾಮ, ದೊಡ್ಡಕೌಲಂದೆ ಹೋಬಳಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

ವಿರುದ್ಧ

ಪ್ರತಿವಾದಿಗಳು : ಶಿವಣ್ಣ ಬಿನ್ ಲೇಟ್ ನಾಗಪ್ಪ, ವಯಸ್ಸು ಸುಮಾರು 45 ವರ್ಷ, ವಾಸ: ಕಾರೇಪುರ ಗ್ರಾಮ, ದೊಡ್ಡಕೌಲಂದೆ ಹೋಬಳಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ವಾದಿಯು ಪ್ರತಿವಾದಿಯ ವಿರುದ್ಧ ದಾವೆಯ ವಸ್ತು ವಿಷಯದ ಬಗ್ಗೆ ಪ್ರಾತಿನಿಧಿಕ ಖಾತೆಯಿಂದ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಮೇಲ್ಕಂಡ ದಾವೆಯನ್ನು ಹೂಡಿರುತ್ತಾರೆ. ಘನ ನ್ಯಾಯಾಲಯವು ಪ್ರತಿವಾದಿಗೆ ದಾವಾ ಸಮನ್ಸ್‌ನ್ನು ಹೊರಡಿಸಲು ಆದೇಶಿಸಿದ್ದು, ದಾವೆಯ ವಸ್ತು ವಿಷಯವು ತಗಡೂರಿನಿಂದ ಟಿ.ನರಸೀಪುರಕ್ಕೆ ಕಾರೇಪುರ ಮಾರ್ಗವಾಗಿ ಸಾಗುತ್ತಿರುತ್ತದೆ. ಕಾರೇಪುರ ಗ್ರಾಮದ ಮೇಲ್ಕಂಡ ವಾದಿಯ ಮನೆಯ ಮುಂಭಾಗ ಹಾದುಹೋಗುತ್ತಿದ್ದು, ಸದರಿ ವಾದಿಯ ಮನೆಯ ಮುಂಭಾಗ ರಸ್ತೆಯನ್ನು ಪ್ರತಿವಾದಿಯು ಹಗೆದು, ತನ್ನ ಜಮೀನಿನ ವ್ಯವಸಾಯಕ್ಕೆ ನೀರು ಸರಬರಾಜು ಮಾಡಿಕೊಳ್ಳಲು ಜೆ.ಸಿ.ಬಿ ಮತ್ತು ಕಾರ್ಮಿಕ ಸಹಾಯದಿಂದ ರಸ್ತೆ ಹಗೆಯುತ್ತಿದ್ದ ಕಾರಣ ಸಾರ್ವಜನಿಕ ಹಿತಾಸಕ್ತಿಯ ಆಧಾರದ ಮೇಲೆ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಮೇಲ್ಕಂಡ ದಾವೆಯಲ್ಲಿ ವಾದಿಗಳಾಗಿ ಆಗಲೀ ಅಥವಾ ಪ್ರತಿವಾದಿಗಳಾಗಿ ಆಗಲೀ ಸೇರ್ಪಡೆಗೊಳ್ಳಲು ಆಸಕ್ತಿಯುಳ್ಳ ಸಾರ್ವಜನಿಕರು ದಾವೆಯಲ್ಲಿ ಸೇರ್ಪಡೆಗೊಳ್ಳಬಹುದಾಗಿರುತ್ತದೆ. ಸದರಿ ದಾವೆಯಲ್ಲಿ ಸೇರ್ಪಡೆಗೊಳ್ಳುವವರು ಈ ದಾವೆಯ ಹಿಯರಿಂಗ್ ದಿನಾಂಕ: 04–01–2023 ರಂದು ಬೆಳಗ್ಗೆ 11.00 ಘಂಟೆಗೆ ಖುದ್ದು ಅಥವಾ ವಕೀಲರ ಮೂಲಕವಾಗಲೀ ಹಾಜರಾಗತಕ್ಕದ್ದು.

ಘನ ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/–ಶಿರಸ್ತೇದಾರರು
2ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ, ನಂಜನಗೂಡು
ಸಹಿ/– ಚಿನ್ನಸ್ವಾಮಿ, ವಕೀಲರು
ದಿನಾಂಕ: 20–12–2022, ನಂಜನಗೂಡು

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್
ಪಿ.ಯು.ಸಿ, 55 ವರ್ಷದ ಒಳಗೆ
(ಎಂ.ಶೆಟ್ಟಿ ಹಳ್ಳಿ ಮತ್ತು ಹೆಬ್ಬಾಳ್)
ಸಂಪರ್ಕಿಸಿ: ತಲವಾರ್ ಸೆಕ್ಯೂರಿಟಿ ಸರ್ವೀಸಸ್
99451 06062 / 84949 34335

WINTER WEARS | PARTY WEARS
CASUAL WEARS
FOR MEN
HEAVENLYS GENERATIONS
NEAR MADDUR TIFFANYS
DHANVANTHRI ROAD, MYSURU
PH: +91 821 2422370

PROPERTIES FOR SALE
IN KUVEMPUNAGAR
- 30x45, 2 BHK, N/F
- 30x40, Site, E/F
- 60x40, 4 BHK, S/F

Vyshak Raman
77606 49855
Brokers Excuse

WANTED
Café Restaurant Jobs near Hunsur, Karnataka.
» RESTAURANT MANAGER
» DUTY MANAGER
» BARISTA
» CHINESE NORTHINDIAN COOK
» CAPTAINS
» CASHIER (fluent english)
» WAITERS
Please apply to:
cafecountyoperations@gmail.com
or Call 6238334882

ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ಲಲಿತಾದ್ರಿಪುರ, ಆಲನಹಳ್ಳಿ, ಚಿಕ್ಕಳ್ಳಿ, ಉತ್ತನಹಳ್ಳಿ, ರಾಜ್‌ಕುಮಾರ್ ರಸ್ತೆ ಸುತ್ತ ಮುತ್ತ ಇರುವ ಪ್ರದೇಶಗಳಿಗೆ.
ಎಸ್.ಎಸ್‌ಎಲ್.ಸಿ ಪಾಸ್ ಅಥವಾ ಫೇಲ್. ಸಂಪರ್ಕಿಸಿ
8197821408
9035269781, 0821-4852002


WE ARE HIRING
- Tally Faculties-3
- Counsellors-2
- Marketing Managers-3
- Dealers-Stock Market-2

Salary-at par with the industry standards
SHRI SAINIK CONSULTING PVT. LTD.,
(SINCE 1994)
Ph: 0821-4190404 / 7961003
9867659165 / 7892140113
Kalidasa road, next to Green Leaf Restaurant, Mysore

ಬೃಹತ್ ಉದ್ಯೋಗ ಮೇಳ
- Market Manager
- Marketing Executive
- Data Entry Operator
- Front Office Executive
- Teachers [School, Collage]
- HR, ITI Fitter, Nurses, Sales

ದಿನಾಂಕ 22-12-2022, ಗುರುವಾರ
ಬೆಳಗ್ಗೆ 10.00 ರಿಂದ ಮಧ್ಯಾಹ್ನ 2.00 ರವರೆಗೆ
ಸ್ಥಳ: ನಟರಾಜ ಕಲ್ಯಾಣ ಮಂಟಪ, ಮೈಸೂರು
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
97432 83001
99809 59598

7ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ಇಂತಿ ದುಃಖಿತಪ್ತ
ಶ್ರೀಮತಿ ನಿಂಗಮ್ಮ, ಲೇಟ್ ಗೌಡ ನಿಂಗೇಗೌಡರ ಕುಟುಂಬವರ್ಗ, ಶ್ರೀಮತಿ ಅನಸೂಯ ಮೃತರ ಪತ್ನಿ, ಮತ್ತು ಮಕ್ಕಳು, ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು
ಹೂಟಗಳ್ಳಿ
ಶ್ರೀ ನಾಗರಾಜು
ನಿಧನ: 20.12.2015

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಇವರು ದಿ: 12.12.2022 ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ: 22.12.2022 ಗುರುವಾರ ಬೆಳಗ್ಗೆ 10.00 ಗಂಟೆಗೆ ಮೃತರ ಸ್ವಗೃಹ, ಶ್ರೀರಾಮ ಬ್ಲಾಕ್, ಕೆ.ಆರ್.ನಗರ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು
ಶ್ರೀಮತಿ **ಮಂಜುಳಮ್ಮ**

9ನೇ ವರ್ಷದ ಸವಿನೆನಪು



ಶ್ರೀಮತಿ ನಿಂಗಮ್ಮ ಶ್ರೀ ಬೋರಪ್ಪ
ನೀವು ನಮ್ಮನ್ನಗಲಿ ಇಂದಿಗೆ 9 ವರ್ಷಗಳು ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು
ಪ್ರೀತಿಯ ಮಕ್ಕಳಾದ ಬೋರಪ್ಪ ಮತ್ತು ಬಸವರಾಜು ಹಾಗೂ ಹೆಣ್ಣುಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು, ಜಯನಗರ, ಮೈಸೂರು

HOUSE FOR RENT
2 BHK with all facilities at House No. 2974/D 23rd Main, 22nd Cross, Vijayanager 2nd Stage, Mysuru is for rent.
Call : 94481 08048

Kumuda Spa
Hurry offer is started from Dec 15th to January 15th
New year and Christmas OFFER
10% Discount on all Package
0821-4193567/9632769550

HERITAGE HOMES
MYSURU - HUNSUR HIGHWAY, MYSORE
MEGA RESIDENTIAL TOWNSHIP
ನಿಮ್ಮ ಕನಸಿನ ನಿವೇಶನ ನಿಮ್ಮ ಕೈಗೆಟುಕುವ ಬೆಲೆಯಲ್ಲಿ
MUDA LIMITS
30x40 | 30x50
40x60 | 50x80
ಕೇವಲ ₹550/ ಪ್ರತಿ ಚದರ ಅಡಿ
ಅಡಿತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಂಡ ನಿವೇಶನಗಳು
ಕೆಲವೇ ಸೈಟ್‌ಗಳು ಮಾತ್ರ ಲಭ್ಯ
ಅಧಿಕಾ ವೆಂಚರ್ಸ್
9513301854, 8884528004

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary
+ 10,000/- Incentive
8884171888

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳನ್ನು, ನನ್ನ ಕಕ್ಷಿದಾರರು, ಮೈಸೂರು ಸಿಟಿ, ಅಶೋಕ ರಸ್ತೆ, ಪಶ್ಚಿಮದ 13ನೇ ಕ್ರಾಸ್, ಮನೆ ನಂ. 1764 ರಲ್ಲಿ ವಾಸವಾಗಿರುವ ಜಿ.ಕೃಷ್ಣಾಜಿರಾವ್ ರವರ ಮಗ ಕೆ.ಶ್ರೀನಿವಾಸರಾವ್ ರವರಿಂದ ಖರೀದಿ ಕ್ರಯಪತ್ರದ ಮೂಲಕ ಪಡೆದುಕೊಳ್ಳಲು ತೀರ್ಮಾನಿಸಿರುತ್ತಾರೆ. ಈ ಬಗ್ಗೆ ಸಾರ್ವಜನಿಕರಲ್ಲಿ ಯಾವುದೇ ತಕರಾರು ಇದ್ದಲ್ಲಿ ಸಂಬಂಧಪಟ್ಟ ದಾಖಲೆಗಳೊಂದಿಗೆ ಈ ಪ್ರಕಟಣೆಯ 7 (ಏಳು) ದಿನಗಳ ಒಳಗಾಗಿ ಭೇಟಿ ಮಾಡಿ ತಿಳಿಸತಕ್ಕದ್ದು, ತಪ್ಪಿದಲ್ಲಿ ಕ್ರಯದ ವ್ಯವಹಾರವನ್ನು ಸಂಪೂರ್ಣಗೊಳಿಸಲು ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಕ್ರಯದ ವ್ಯವಹಾರವನ್ನು ಸಂಪೂರ್ಣಗೊಳಿಸಲಾಗುತ್ತದೆ. ತದನಂತರ ಬರುವಂತಹ ಯಾವುದೇ ತಕರಾರುಗಳಿಗೆ ಯಾ ಕ್ಲೈಮುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲ.

ಷೆಡ್ಯೂಲ್ ಸ್ವತ್ತುಗಳ ವಿವರ

1.ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಮಂಡಕಳ್ಳಿ ಗ್ರಾಮದ, ಸರ್ವೆ ನಂಬರು 85/3 ರ ಎರಡು ಎಕರೆ ಹದಿನೇಳು ಗುಂಟೆ (2.17) ಜಮೀನಿಗೆ ಚಕ್ಕುಬಂಧಿ : ಪೂರ್ವಕ್ಕೆ–ಸರ್ವೆ ನಂ. 86/2 ರ ಜಮೀನು, ಪಶ್ಚಿಮಕ್ಕೆ –ಸರ್ವೆ ನಂ. 84 ರ ಜಮೀನು, ಉತ್ತರಕ್ಕೆ–ಶ್ರೀ ಎಂ.ಎಸ್. ಮಹದೇವಸ್ವಾಮಿರವರ ಮಕ್ಕಳ ಜಮೀನು, ದಕ್ಷಿಣಕ್ಕೆ–ಸರ್ವೆ ನಂ. 86/2 ರ ಜಮೀನು.

ಈ ಮಧ್ಯದಲ್ಲಿರುವ ವ್ಯವಸಾಯದ ತರಿ ಜಮೀನು

2.ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಮಂಡಕಳ್ಳಿ ಗ್ರಾಮದ, ಸರ್ವೆ ನಂಬರು 86/2 ರ ಐದು ಎಕರೆ ಒಂಭತ್ತು ಗುಂಟೆ (5.09) ಜಮೀನಿಗೆ ಚಕ್ಕುಬಂಧಿ: ಪೂರ್ವಕ್ಕೆ– ಗಡಿ, ಪಶ್ಚಿಮಕ್ಕೆ –ಸರ್ವೆ ನಂ. 85/2 ರ ಜಮೀನು, ಉತ್ತರಕ್ಕೆ –ಶ್ರೀ ಎಂ.ಎಸ್. ಮಹದೇವಸ್ವಾಮಿರವರ ಮಕ್ಕಳ ಜಮೀನು ಮತ್ತು ಸರ್ವೆ ನಂ. 86/3 ರ ಜಮೀನು, ದಕ್ಷಿಣಕ್ಕೆ–ಸರ್ವೆ ನಂ. 86/1 86/6 ಮತ್ತು 86/5 ರ ಜಮೀನು,

ಈ ಮಧ್ಯದಲ್ಲಿರುವ ವ್ಯವಸಾಯದ ತರಿ ಜಮೀನು

Sd/- J.M. Aiyanna, B.Sc, LL.B,
Advocate, Kar No.1635/95 Office:
1143/1E, 1st Floor, Chanakya Circle, Geetha Road,
Chamarajapuram, Mysore - 570 005
Ph : Off : 0821-4287199,
2330199/Mob: 9845113628
ದಿನಾಂಕ: 20–12–2022. ಸ್ಥಳ: ಮೈಸೂರು.

2ನೇ ವರ್ಷದ ಸವಿನೆನಪು



ಶ್ರೀಮತಿ **ಕೆ.ಅನುರಾಧ**
ನಿಧನ: 21.12.2020
ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ
ದುಃಖತಪ್ತರು: ಪತಿ–ಮಣಿ, ಮಕ್ಕಳು ಮತ್ತು ಮೊಮ್ಮಕ್ಕಳು, ಸೊಸೆಯಂದಿರು ಹಾಗೂ ಕುಟುಂಬವರ್ಗದವರು

ಮೈಸೂರು ಮಿತ್ರ 43
ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com

REPCO BANK 54
No. 1022, 1 Floor, G & H Block,
Panchamanthra Road, Kuvempunagar, Mysuru - 570023
Ph: 0821 - 2562211, Mob: 94498 56210
QUICK JEWEL LOANS
@ LOWER INTEREST RATE
0% Processing Fee
PER GRAM ₹4100/-*
*Cond
*Member Customers Only

ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ಶ್ರೀಮತಿ ಪುಟ್ಟಲಿಂಗಮ್ಮನವರು (ಹೊಸಳ್ಳಿ ಸಿದ್ದಮ್ಮ)
(ಲೇಟ್ ಶ್ರೀ ಎನ್.ಎಲ್.ವೆಂಕಟೇಗೌಡರ ಧರ್ಮಪತ್ನಿ)
ಇವರು ದಿನಾಂಕ 10.12.2022 ಶನಿವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ ತತ್ಸಂಬಂಧವಾಗಿ ಮೃತರ ವೈಕುಂಠ ಸಮಾರಾಧನೆ ಕಾರ್ಯವನ್ನು ದಿನಾಂಕ: 21.12.2022ನೇ ಬುಧವಾರ ಮಧ್ಯಾಹ್ನ 12.00 ಗಂಟೆಗೆ ಶ್ರೀ ರಾಮಮಂದಿರ, ಒಕ್ಕಲಗೇರಿ, ನಂಜನಗೂಡು ಇಲ್ಲಿ ಏರ್ಪಡಿಸಿರುವುದರಿಂದ, ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನ ಎಂದು ತಿಳಿದು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಮೃತರ ಗಂಡುಮಕ್ಕಳು, ಹೆಣ್ಣುಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಹಾಗೂ ಮುಮ್ಮಕ್ಕಳು, ಲೇಟ್.ಎನ್.ಎಲ್. ವೆಂಕಟೇಗೌಡರ ಕುಟುಂಬವರ್ಗದವರು. 9900663584

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ,
ನಗರ ವಿಭಾಗ(ಜೆ.ಎನ್.ನರ್ಮ್), ಜಲಭವನ, 2ನೇ ಮಹಡಿ ಸರಸ್ವತಿಪುರಂ, ಮೈಸೂರು–570009 ದೂರವಾಣಿ : 0821–2411463
ಇ–ಮೇಲ್: kwbmysjnee@gmail.com

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಈ ಕಛೇರಿಯಿಂದ ರಮ್ಮನಹಳ್ಳಿ ಹಾಗೂ ಸಿ.ಎಸ್.ಆರ್ ಉಗ್ರಾಣದಲ್ಲಿ ಮಂಡಳಿ ವತಿಯಿಂದ ಕಾವಲುಗಾರರನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು ಟೆಂಡರ್‌ನ್ನು ಇ–ಟೆಂಡರ್ ರಲ್ಲಿ ಕರೆಯಲಾಗಿದ್ದು, ಪ್ರಕಟಣೆಗಳ ಸಂಖ್ಯೆ:2136 ದಿನಾಂಕ:20.12.2022, ಟೆಂಡರಗಿಟ್ಟಿ ಮೊತ್ತ, ಶುಲ್ಕ, ಷರತ್ತು, ಇತರೆ ಹೆಚ್ಚಿನ ಮಾಹಿತಿಗೆ https://eproc.karnataka.gov.in ರಲ್ಲಿ ಪಡೆಯಬಹುದಾಗಿದೆ.
ಸಹಿ/– (ಆಸೀಫ್ ಇಕ್ಬಾಲ್ ಖಲೀಲ್)
ಕಾರ್ಯಪಾಲಕ ಅಭಿಯಂತರು, ಕ.ನ.ನೀ.ಸ. ಮತ್ತು ಒ.ಚ. ಮಂಡಳಿ,
ನಗರ ವಿಭಾಗ (ಜೆ.ಎನ್.ನರ್ಮ್), ಮೈಸೂರು

MYSORE RACE CLUB LIMITED
P.B.No.11, Race Course Road, Mysore - 570 010
Tel.No. 2521675; Email: secretary@mysoreraceclub.com

The body which regulates and conducts horseracing in Mysore wishes to recruit the following personnel:

- **DEPUTY SECRETARY:** This is a senior level position constituting part of management. The candidates should be an Associate Company Secretary/Chartered Accountant/MBA/ BA., LLB.with a minimum 10-15 years experience and should be between 40-45 years of age having indepth knowledge of all financial functions, Administrative skills, Computer Knowledge, legal and labour management etc. Racing knowledge if any, will be an added advantage.
- **CONTROLLER OF ACCOUNTS:** The incumbent would be responsible for the Accounts Department. The job includes statutory accounting, budgeting, financial reporting, Investments etc. The Ideal candidates should be a Chartered Accountant with relevant experience.
- **GENERAL MANAGER–TOTALISATORS, IT & GATES:** The incumbent will be fully responsible for all duties connected to the organization of totalisators on racing and intervenue betting days including administrative arrangements to be made, calculation and declaration of dividends on all races etc. The incumbent would also be incharge of IT and Gates. The ideal candidates should be a graduate/post graduate with strong accounting and IT background.
- **SECURITY-CUM-VIGILANCE OFFICER:** The incumbent will be fully responsible for the watch and ward of the entire race course including monitoring CCTV footage, vigilance etc. The candidates should have adequate experience in the field. Those retired from defence/police services will be given preference.
- **ACCOUNTS ASSISTANTS:** The incumbent should be a B.Com/BBM Graduate preferably with 2-3 years experience in overall accounts function.The Candidates should be proficient in use of computers & financial package "Tally ERP 9".
- **PERSONAL ASSISTANT:** The Incumbent should be a graduate with experience in secretarial function with 2-3 years experience.

The Candidates should have an impeccable past work record. The emoluments will be commensurate with qualification and experience.

Interested candidates may apply within 10 days to: secretary@mysoreraceclub.com with their detailed resume.



WANTED

ACCOUNTANT
Female candidate with B.Com., minimum 1 year experience in Accounts, knowledge of Tally, GST, preparing financial statements, ESI / PF is a must.

SITE ENGINEER
Candidates with BE / Diploma Engineers with one year experience in developing residential layouts and well knowledge of getting various Departmental approvals.

Send your Bio-data to:
The Advertiser,
10, New Sayyaji Rao Road, Bamboo Bazar,
Mysuru – 570 001. E-mail: sahanare9@gmail.com

LAND REQUIRED FOR SALE
Leading developer is looking for 15 Acres & above residentially converted land with clear titles in and around Mysuru city within 12 kms for residential layout development.
Land owners may contact.
8970293399

ಆಲೂರು ಗ್ರಾಮ ಪಂಚಾಯಿತಿ ಕಾರ್ಯಾಲಯ
ಚಾಮರಾಜನಗರ ತಾಲ್ಲೂಕು. ದಿನಾಂಕ: 16–12–2022

ಸಾರ್ವಜನಿಕ ಪ್ರಕಟಣೆ

ಆಲೂರು ಗ್ರಾಮ ಪಂಚಾಯಿತಿಯ ಪ್ರಕಟಣೆಯಾಗಿದ್ದು, ಆಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 8 ಗ್ರಾಮಗಳಿದ್ದು, ಸದರಿ ಗ್ರಾಮಗಳಲ್ಲಿ ವಸತಿ ರಹಿತರು ಹಾಗೂ ನಿವೇಶನ ರಹಿತರು ಇರುತ್ತಾರೆ. ಇವರಿಗೆ ವಸತಿ ಸೌಲಭ್ಯ ಕಲ್ಪಿಸಲು ಸದರಿ ಗ್ರಾಮಗಳಲ್ಲಿ ಸರ್ಕಾರಿ ಜಾಗ ಲಭ್ಯವಿಲ್ಲದೆಯಿರುವುದರಿಂದ ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಮಾಡಲು ಮತ್ತು ಸರ್ಕಾರದಿಂದ ವಸತಿ ಸೌಲಭ್ಯ ಕಲ್ಪಿಸಲು ಆಗುತ್ತಿಲ್ಲ. ಆದ್ದರಿಂದ ಖಾಸಗಿ ಜಮೀನು ಹೊಂದಿರುವ ಸಾರ್ವಜನಿಕರು ತಮ್ಮ ಖಾಸಗಿ ಜಮೀನನ್ನು ಸರ್ಕಾರ ನಿಗದಿಪಡಿಸಿದ ಬೆಲೆಗೆ ನೀಡಲು ಆಸಕ್ತಿಯುಳ್ಳವರು ಸದರಿ ಜಮೀನಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ದಿನಾಂಕ: 27–12–2022 ರ ಒಳಗಾಗಿ ಆಲೂರು ಗ್ರಾಮಪಂಚಾಯಿತಿಗೆ ಸಲ್ಲಿಸಬೇಕೆಂದು ಈ ಮೂಲಕ ಪ್ರಕಟಣೆ ಹೊರಡಿಸಲಾಗಿದೆ.

ಸಲ್ಲಿಸಬೇಕಾದ ದಾಖಲೆಗಳು:
1) ಆರ್.ಟಿ.ಸಿ (ಪಹಣಿ)
2) 100 ರೂ. ಛಾಪಾ ಕಾಗದದಲ್ಲಿ ಭೂ ಮಾಲೀಕರ ಒಪ್ಪಿಗೆ ಪತ್ರ
3) ಸ್ವತ್ತಿಗೆ ಸಂಬಂಧಿಸಿದಂತೆ ಮೂಲ ದಾಖಲಾತಿ.
4) ಜಮೀನಿನ ಆಕಾರ್ ಬಂದ್ (ಉತಾರು)
5) ನಕ್ಷೆ.
6) ಉಪನೋಂದಣಾಧಿಕಾರಿಗಳು ದೃಢೀಕರಿಸಿರುವ ಸ್ವತ್ತಿನ ಮೌಲ್ಯದ ಪ್ರಮಾಣಪತ್ರ

ಸಹಿ/– ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಆಲೂರು ಗ್ರಾಮಪಂಚಾಯಿತಿ, ಚಾಮರಾಜನಗರ ತಾ॥ & ಜಿಲ್ಲೆ.

D.A.V. PUBLIC SCHOOL
Affiliated to C.B.S.E, Delhi
No. 25/D, 3rd Stage, Industrial Suburb,Vishweshwaranagar,
Raja Rajeshwari Temple Road, Mysore - 570008.
Ph : 0821-2488429 | E-mail:dav_mysore@rediffmail.com

A Unique Opportunity for TEACHERS
(For the Academic Year 2023 - 24)

we are looking for enthusiastic, innovative and qualified Teachers to handle subjects for Primary, Higher Primary and High School Section.

Sl. No.	Post for	No.of Posts	Qualification
01.	Vice Principal	01	M.A., / M.Sc., with B.Ed., Min 5 years exp.,
02.	PGT	02	M.Sc., in Maths with B.Ed.,
03.	PGT	02	M.Sc., in Physics with B.Ed.,
04.	PGT	02	M.Sc., in Chemistry with B.Ed.,
05.	PGT	02	M.Sc., in English with B.Ed.,
06.	PGT	02	M.A., With B.Ed., in Social Science
07.	Primary Teachers	04	B.Sc., with B.Ed.,
08.	Nursery Teachers	04	Any Degree with N.S.T
09.	Computer Technicians (M)	02	Diploma in Computer Science

- Competent & experienced staff with fluency in English and well versed in computers can apply for the following posts.
- Salary will commensurate based on qualification and experience.
- Minimum 1 - 3 years' experience in CBSE Schools preferred.

WALK IN INTERVIEW
Date :- 25 / 12 / 2022
Time :- 10.30 AM

R. Anand, Secretary